ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 17 ಸೋಮವಾರ 2023

ಸಂಪುಟ: 44 | ಸಂಚಿಕೆ: 2 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಿಜ, ನಾವು ಸಂಘ ಪರಿವಾರದ ರಹಸ್ಯ ಕಾರ್ಯಸೂಚಿ ಜಾರಿ ಮಾಡುತ್ತೇವೆ

● ಸಂಸದ ಪ್ರತಾಪ್ ಸಿಂಹ ಸಮರ್ಥನೆ ● ಕಾಂಗ್ರೆಸ್ ತಾಲಿಬಾನಿ ಸರ್ಕಾರ ತರಲು ಹೊರಟಿದೆ

ಮೈಸೂರು, ಏ.16(ಎಂಟಿವೈ)–ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸುವುದು ಖಚಿತವಾಗಿದೆ. ಆದರೆ ಎಸ್‌ಡಿಪಿಐ ಬೆಂಬಲ ಪಡೆದು ತಾಲಿಬಾನಿ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಕಾಂಗ್ರೆಸ್ ಮುಂದಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತೆ ಮುಸ್ಲಿಮರನ್ನು ಓಲೈಕೆ ಮಾಡಲು ಮುಂದಾಗಿದೆ. ಗೃಹ ಸಚಿವರಾಗಿದ್ದ ಜಿ.ಪರಮೇಶ್ವರ್ ಎಸ್‌ಡಿಪಿಐ, ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಹೇಳಿಕೆ ನೀಡಿದ್ದಾರೆ. ಉಗ್ರ ಸಂಘಟನೆಯ ನಂಟು ಹೊಂದಿರುವ ಎಸ್‌ಡಿಪಿಐ ಬೆಂಬಲ ಪಡೆದು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ತಾಲಿಬಾನಿ ಸರ್ಕಾರ ತರಲು ಹೊರಟಿದ್ದಾರೆ. ಹಿಂದು, ಬಿಜೆಪಿ, ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಹತ್ಯೆ ಮಾಡಿರುವ ಸಂಘಟನೆಯ ಅಂಗ ಸಂಸ್ಥೆಯ ಬೆಂಬಲ ಪಡೆದು ಸರ್ಕಾರ ರಚಿಸಲು ಕಾಂಗ್ರೆಸ್ ಮುಂದಾಗಿದೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿಗೆ ಎಲ್ಲೆಡೆ ನಿರೀಕ್ಷೆಗೂ ಮೀರಿದ ಬೆಂಬಲ ಕಂಡು ಬರುತ್ತಿದೆ. ಕಾಂಗ್ರೆಸ್‌ಗೆ ಸೋಲಿನ ಭಯ ಆರಂಭವಾಗಿದೆ. ಆ ಕಾರಣದಿಂದಲೇ ಮುಸ್ಲಿಂ ಓಲೈಕೆ ಮಾಡುವ ಹಳೇ ತಂತ್ರಕ್ಕೆ ಕಾಂಗ್ರೆಸ್ ಮಾರು ಹೋಗಿದೆ. ನಿಷೇಧಿತ ಪಿಎಫ್‌ಐ ಸಂಘಟನೆ ರಾಜಕೀಯ ಅಂಗಸಂಸ್ಥೆಯಾದ ಎಸ್‌ಡಿಪಿಐ ಬೆಂಬಲ ಕೋರಿದ್ದಾರೆ. ಇದರ ಅರ್ಥವೇನು? ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಏನು ಸಂದೇಶ ಕೊಡಲು ಹೊರಟಿದ್ದಾರೆ ಎಂದು ಪ್ರಶ್ನಿಸಿದರಲ್ಲದೆ, ಎಸ್‌ಡಿಪಿಐ ಬೆಂಬಲದೊಂದಿಗೆ ಕರ್ನಾಟಕವನ್ನು ಈ ಹಿಂದಿನ ಉತ್ತರಪ್ರದೇಶ, ಬಿಹಾರ ಮಾಡಲು ಕಾಂಗ್ರೆಸ್ ಹುನ್ನಾರ ನಡೆಸಿದೆ ಎಂದು ಕಿಡಿಕಾರಿದರು. ಕಾಂಗ್ರೆಸ್‌ನವರು ಬಿಜೆಪಿಗರನ್ನು ಸಂಘಿಗಳು ಎಂದು ಟೀಕಿಸುತ್ತಾರೆ. ಆರ್‌ಎಸ್‌ಎಸ್‌ನ ರಾಜಕೀಯ ಸಂಘಟನೆಯೇ ಬಿಜೆಪಿ ಎಂಬುದು ನಿಜ. ನಮ್ಮನ್ನು ಸಂಘಿಗಳು, ಬಿಜೆಪಿ ಸಂಘಪರಿವಾರದ ರಹಸ್ಯ ಕಾರ್ಯಸೂಚಿಯನ್ನು ಜಾರಿ ಮಾಡುತ್ತಾರೆ ಎಂದು ಆರೋಪಿಸುತ್ತಾರೆ. ಇದು ನಿಜವೇ ಆಗಿದೆ.



ನಾವು ರಾಷ್ಟ್ರಪ್ರೇಮಿ ಸಂಘಪರಿವಾರದವರು. ಆದರೆ, ನಿಷೇಧಿತ ಸಂಘಟನೆಗಳ ಕಾರ್ಯಕರ್ತರ, ಸರಣಿ ಕೊಲೆಗಡುಕರ ಕ್ರಿಮಿನಲ್ ಪ್ರಕರಣ ರದ್ದು ಮಾಡುವವರಲ್ಲ ಎಂದು ಕಿಡಿಕಾರಿದರು.

ನಿಷೇಧಗೊಂಡಿದ್ದ ಸಿಮಿ, ಕೆಎಫ್‌ಡಿ ಪ್ರಮುಖ ವ್ಯಕ್ತಿಗಳೇ ಪಿಎಫ್‌ಐ ಹುಟ್ಟು ಹಾಕಿದ್ದರು. ಅವರ ಎಸ್‌ಡಿಪಿಐ ರಾಜಕೀಯ ಬಣದ ಬೆಂಬಲವನ್ನು ಕಾಂಗ್ರೆಸ್ ಯಾಚಿಸಿರುವುದರ ಹಿಂದಿನ ಮನಸ್ಥಿತಿಯನ್ನು ಜನರು ತಿಳಿದಿರಬೇಕು. ಅಧಿಕಾರಕ್ಕಾಗಿ ಸಮಾಜದ್ರೋಹಿಗಳು, ಸಮಾಜಘಾತುಕ ಶಕ್ತಿಗಳೊಂದಿಗೆ ಕೈಜೋಡಿಸುತ್ತಿದೆ. ಕರ್ನಾಟಕವನ್ನು ಕೇರಳ ಮಾಡಲು ಹುನ್ನಾರ ನಡೆಸಿದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಈ ಬಾರಿ ವರುಣಾ ಕ್ಷೇತ್ರದಲ್ಲಿ 15 ವರ್ಷಗಳಿಂದ ನಡೆಯುತ್ತಿದ್ದ ಅಪ್ಪ–ಮಗನ ದರ್ಬಾರ್ ಅಂತ್ಯಗೊಳಿಸುತ್ತೇವೆ. ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಜಯ ಗಳಿಸಲಿದ್ದಾರೆ. ವರುಣಾ ಕ್ಷೇತ್ರಕ್ಕೆ ಕರೆತಂದಿರುವ ವಿ.ಸೋಮಣ್ಣ ಅವರನ್ನು ಯಾರೂ ಬಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ. 2015ರಲ್ಲಿ ನಡೆದ ಉಪಚುನಾವಣೆಯಲ್ಲಿ ಸೋಮಣ್ಣ ಪಕ್ಷಕ್ಕೆ ಜಯ ತಂದು ಕೊಟ್ಟಿದ್ದಾರೆ. ಈ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರೇ ಬಲಿಯಾಗಲಿದ್ದಾರೆ. ವರುಣಾ ಕ್ಷೇತ್ರದಲ್ಲಿ ಯಾವುದೇ ಒಳ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದರು. ಕಳೆದ 2 ತಿಂಗಳಿಂದ ಪ್ರಧಾನಿ ಮೋದಿ ರಾಜ್ಯ ಪ್ರವಾಸ ಕೈಗೊಂಡು, ಐಐಟಿ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿ ಉದ್ಘಾಟಿಸಿದ್ದಾರೆ. ನಾವು ಅಭಿವೃದ್ಧಿ ಮುಂದಿಟ್ಟುಕೊಂಡು ಮತಯಾಚಿಸುತ್ತೇವೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಮಾತನಾಡಿ, ಬಿಜೆಪಿ ಸೇರ್ಪಡೆ ಹಠಾತ್ ಬೆಳವಣಿಗೆಯಲ್ಲ. 8 ವರ್ಷಗಳ ಪ್ರಧಾನಿ ಮೋದಿ ಅವರ ಜನಪರ ಕಾರ್ಯಕ್ರಮ, ಅಭಿವೃದ್ಧಿ ಕಾರ್ಯವನ್ನು ಮೆಚ್ಚಿ ಬಂದಿರುವೆ. ಬಿಜೆಪಿಯಲ್ಲಿ ಯುವ ಜನರಿಗೆ ಹೆಚ್ಚಿನ ಅವಕಾಶವಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಟಿಕೆಟ್ ನೀಡಿದ್ದಾರೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುತ್ತೇನೆ ಎಂದರು. ಕಾಂಗ್ರೆಸ್‌ನಲ್ಲಿರುವ ತಂದೆ ಮಾಜಿ ಶಾಸಕ ವಾಸು ಅವರೊಂದಿಗೆ ವೈಯಕ್ತಿಕ ಸಂಬಂಧ ಬೇರೆ, ಸೈದ್ಧಾಂತಿಕ ನಿಲುವು ಬೇರೆ. ಅವರು ಅವರ ಪಕ್ಷದ ಪರ ಕೆಲಸ ಮಾಡುತ್ತಾರೆ. ನಾನು ನನ್ನ ಪಕ್ಷದ ಪರ ಕೆಲಸ ಮಾಡುವೆ ಎಂದರು. ಗೋಷ್ಠಿಯಲ್ಲಿ ನಗರಾಧ್ಯಕ್ಷ ಶ್ರೀವತ್ಸ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಇದ್ದರು.





ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಹುಯಿಲಾಳು ಗ್ರಾಪಂ ಸದಸ್ಯೆ ಶ್ರೀಮತಿ ಮಮತಾ ಕುಮಾರ್, ಶ್ರೀಧರ್, ಶ್ರೀಮತಿ ಶೃತಿ ಮಂಜುನಾಥ್, ಗ್ರಾಪಂ ಮಾಜಿ ಸದಸ್ಯ ಮಂಜುನಾಥ್, ಯಜಮಾನರಾದ ದೊಡ್ಡಪ್ಪೇಗೌಡ, ಪಾಪಣ್ಣ, ಶನಿ ದೇವರ ಗುಡ್ಡಪ್ಪ ಲೋಕೇಶ್, ಮುಖಂಡರಾದ ಕುರಂಬಯ್ಯನ ಮಾಲೇಗೌಡ, ರಾಮಣ್ಣ, ಮಲ್ಲಿಕಾ, ಜವರೇಗೌಡ, ಶಿವರಾಜ್, ಲಕ್ಷ್ಮಣ, ಸಿದ್ದರಾಮ, ಶಿವಣ್ಣ, ಶಿವರಾಜು, ಸಿದ್ದಪ್ಪ, ಸಿದ್ದೇಗೌಡ, ಸಿದ್ದರಾಮೇಗೌಡ, ಚಿಕ್ಕಹುಯಿಲಾಳು ಉಮೇಶ್ ಕಾಂಗ್ರೆಸ್ ಪಕ್ಷ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲೇಶ್, ತಾಪಂ ಮಾಜಿ ಸದಸ್ಯ ಮಹ ದೇವ್, ಗ್ರಾಪಂ ಮಾಜಿ ಸದಸ್ಯರಾದ ಕತ್ವಪ್ಪ, ಶಿವಣ್ಣ, ಪ್ರಸನ್ನ, ಕುರಿ ಚಿಕ್ಕಣ್ಣ, ಕುಮಾರ್, ಸ್ವಾಮಿ ಶಿವ ರಾಮ್, ಶಿವಣ್ಣ, ಸೀತಾರಾಮ್ ಇದ್ದರು. ಬಲಚಿತ್ರದಲ್ಲಿ ಮಾವಿನಹಳ್ಳಿ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡರಾದ ರಾಮೇಗೌಡ, ನಾಗೇಗೌಡ, ವೆಂಕ ಟೇಶ್, ಮಂಜೇಗೌಡ, ಮಹೇಶ್, ಮಹದೇವ್, ಸಿದ್ದರಾಜು, ಸಿದ್ದೇಗೌಡ ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ..ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಹಿರಿಯ ವಕೀಲರಾದ ಪಾಲಾಕ್ಷ, ಮುಖಂಡರಾದ ರಾಜೇಶ್, ಅಭಿ, ಸೋಮಣ್ಣ, ಸಣ್ಣೇಗೌಡ, ಕಿರಣ್ ಉಪಸ್ಥಿತರಿದ್ದರು.

ರಂಜಾನ್: ಷೂ ವರ್ಲ್ಡ್‌ನಲ್ಲಿ ಭಾರೀ ರಿಯಾಯಿತಿ ಮಾರಾಟ



ಮೈಸೂರು,ಏ.16–ರಂಜಾನ್ ಪ್ರಯುಕ್ತ ಮೈಸೂರಿನ ಷೂ ವರ್ಲ್ಡ್‌ನ ಎರಡು ಶಾಖೆಗಳಾದ ರಾಮಸ್ವಾಮಿ ವೃತ್ತದ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆ ಹಾಗೂ ಶಿವರಾಂಪೇಟೆಯ ಮನ್ನಾರ್ಸ್ ಮಾರುಕಟ್ಟೆ ಮುಂಭಾಗವಿರುವ ನೂತನ ಮಾರಾಟ ಮಳಿಗೆಗಳಲ್ಲಿ ಭಾರೀ ರಿಯಾಯಿತಿ ಮಾರಾಟ ಮೇಳ ಆಯೋಜಿಸಿದೆ. ಷೂ ವರ್ಲ್ಡ್‌ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ, ಉತ್ತಮ ದರ್ಜೆಯ ಚಪ್ಪಲಿ, ಷೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಖರೀದಿಯ ಮೇಲೆ 2+1 ಆಫರ್ (2 ಖರೀದಿಸಿದಾಗ 1 ಉಚಿತ) ನೀಡಲಾಗುತ್ತಿದೆ. ಈ ರಿಯಾಯಿತಿ ಮಾರಾಟ ಏ.23ರವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಜಿಲ್ಲೆಯಲ್ಲಿ ನಿತ್ಯ 700 ಆರ್‌ಟಿಪಿಸಿಆರ್ ಟೆಸ್ಟ್ ಟಾರ್ಗೆಟ್

ಮೈಸೂರಿನ ಕೆ.ಆರ್., ಜಿಲ್ಲಾಸ್ಪತ್ರೆ, ಎಲ್ಲಾ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷೆ

ಮೈಸೂರು,ಏ.16(ಆರ್‌ಕೆ)–ರಾಜ್ಯದಲ್ಲಿ ಕೋವಿಡ್ ಪಾಸಿಟಿವ್ ಪ್ರಕರಣಗಳ ಸಂಖ್ಯೆ ನಿಧಾನಗತಿಯಲ್ಲಿ ಏರಿಕೆಯಾಗುತ್ತಿರುವುದರಿಂದ ಮೈಸೂರು ಜಿಲ್ಲಾದ್ಯಂತ ಆರೋಗ್ಯ ಇಲಾಖೆಯು ಆರ್‌ಟಿಪಿಸಿಆರ್ ಟೆಸ್ಟ್ ಮಾಡುವಂತೆ ನಿರ್ದೇಶನ ನೀಡಿದೆ.

ಅದರಂತೆ ಜಿಲ್ಲಾಡಳಿತವು ನಿತ್ಯ 700 ಮಂದಿಗೆ ಕೋವಿಡ್ ಪರೀಕ್ಷೆ ಮಾಡಬೇಕೆಂದು ಟಾರ್ಗೆಟ್ ನೀಡಿರುವುದರಿಂದ ಮೈಸೂರಿನ ಕೆ.ಆರ್.ಆಸ್ಪತ್ರೆ, ಕೆಆರ್‌ಎಸ್ ರಸ್ತೆಯ ಜಿಲ್ಲಾಸ್ಪತ್ರೆ ಹಾಗೂ ಎಲ್ಲಾ ತಾಲೂಕುಗಳ ಸಾರ್ವ ಜನಿಕ ಆಸ್ಪತ್ರೆಗಳಲ್ಲಿ ಆರ್‌ಟಿಪಿಸಿಆರ್ ಟೆಸ್ಟ್ ಮಾಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಅನಾರೋಗ್ಯಕ್ಕೊಳಗಾಗಿ ಚಿಕಿತ್ಸೆಗೆಂದು ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ನೆಗಡಿ, ಜ್ವರ, ಕೆಮ್ಮು, ಉಸಿರಾಟದ ತೊಂದರೆಯಂತಹ ಲಕ್ಷಣಗಳು ಕಂಡು ಬಂದವರಿಗೆ ಮಾತ್ರ ಆರ್‌ಟಿ–ಪಿಸಿಆರ್ ಟೆಸ್ಟ್ ಮಾಡಿಸಲಾಗುತ್ತಿದ್ದು, 2023ರ ಜ.1ರಿಂದ ಏ.15ರವರೆಗೆ ಒಟ್ಟು 65 ಕೋವಿಡ್ ಸಕ್ರಿಯ ಪ್ರಕರಣಗಳಿವೆ ಎಂದು ತಿಳಿಸಿದ್ದಾರೆ. ಆ ಪೈಕಿ ಸರ್ಕಾರಿ ಆಸ್ಪತ್ರೆಗಳಲ್ಲಿ 7 ಮಂದಿ, 4 ಮಂದಿ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದು, 54 ಮಂದಿ ಮನೆಗಳಲ್ಲಿ ಪ್ರತ್ಯೇಕವಾಗಿದ್ದಾರೆ. ಪ್ರತೀದಿನ 400ರಿಂದ 500 ಆರ್‌ಟಿ–ಪಿಸಿಆರ್ ಟೆಸ್ಟ್ ಮಾಡಲಾಗುತ್ತಿದೆ. ಆ ಪೈಕಿ ಶೇ.10.7ರಷ್ಟು ಪಾಸಿಟಿವಿಟಿ ರೇಟ್ ಇದ್ದು, ಆಸ್ಪತ್ರೆಯಿಂದ ಶೇ.333.3 ರಷ್ಟು ಬಿಡುಗಡೆ ಪ್ರಮಾಣವಿದೆ ಎಂದು ತಿಳಿಸಿದ್ದಾರೆ.

ಆಸ್ಪತ್ರೆಗಳಿಗೆ ಬರುವವರಿಗೆ ಮಾತ್ರ ಆರ್‌ಟಿ–ಪಿಸಿಆರ್ ಟೆಸ್ಟ್ ಮಾಡಿಸಲಾಗುತ್ತಿದ್ದು, ಸಾರ್ವಜನಿಕರಿಗೆ ಪರೀಕ್ಷೆ ಮಾಡುತ್ತಿಲ್ಲ. ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿರುವುದರಿಂದ ಗಂಭೀರ ಪ್ರಕರಣಗಳಿಲ್ಲ ಎಂದರು. ಈಗಾಗಲೇ ಕೆ.ಆರ್. ಆಸ್ಪತ್ರೆ, ಜಿಲ್ಲಾಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗಾಗಿ ಆಕ್ಸಿಜನ್ ಬೆಡ್, ಐಸಿಯುಗಳನ್ನು ಸಜ್ಜುಗೊಳಿಸಿ ಔಷಧಿ ವೈದ್ಯಕೀಯ ಉಪಕರಣಗಳನ್ನು ಮೀಸಲಾಗಿರಿಸಿ ಕೊಂಡಿದ್ದೇವೆ ಎಂದು ಡಿಹೆಚ್‌ಓ ಡಾ.ಪ್ರಸಾದ್ ತಿಳಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಏ.16– ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಏ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಇಲವಾಲ, ಹಳೆ–ಕಾಮನಕೊಪ್ಪಲು, ಮೈದನಹಳ್ಳಿ, ಮೇಗಳಾಪುರ, ಭದ್ರೇಗೌಡನಕೊಪ್ಪಲು, ಚಿಕ್ಕೆಗೌಡನಕೊಪ್ಪಲು, ಹೊಸಕೋಟೆ, ಸರಕಟ್ಟೆ, ಯಾಚೇಗೌಡನಹಳ್ಳಿ, ದಡಕನಹಳ್ಳಿ, ರಾಮೇನಹಳ್ಳಿ, ಯಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಗುಂಗ್ರಾಲ್‌ಛತ್ರ, ಛತ್ರದಕೊಪ್ಪಲು, ರಟ್ನಳ್ಳಿ, ವೀರಪ್ಪನಕೊಪ್ಪಲು ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗೋವಿಂದರಾಜನಗರ ಮಾದರಿ ಅಭಿವೃದ್ಧಿ ಬಯಸುವುದಾದರೆ ಜನ ವರುಣಾ, ಚಾ.ನಗರದಲ್ಲಿ ನನ್ನ ಆಯ್ಕೆ ಮಾಡ್ತಾರೆ

● ಸಚಿವ ವಿ.ಸೋಮಣ್ಣ ವಿಶ್ವಾಸ ● ವಾಸು ನಿವಾಸಕ್ಕೆ ಭೇಟಿ; ಚರ್ಚೆ ● 1999ರಲ್ಲಿ ಚಾಮುಂಡೇಶ್ವರಿಯಲ್ಲಿ ವಾಸು ಗುರುಸ್ವಾಮಿಗೆ ಆಶೀರ್ವಾದ ಮಾಡಿದ್ದರು



ಮೈಸೂರು, ಏ.16(ಜಿಎ)– ಸಿದ್ದರಾಮಯ್ಯ ಅವರು ಪ್ರಶ್ನಾತೀತ ನಾಯಕ. ನಾನು ನನ್ನ ಪಕ್ಷದ ಸೇವಕ. ಗೋವಿಂದರಾಜನಗರ ಮಾದರಿಯಲ್ಲಿ ಅಭಿವೃದ್ಧಿ ಬಯಸುವುದಾದರೆ ಜನ ನನ್ನನ್ನು ಆಯ್ಕೆ ಮಾಡುತ್ತಾರೆ ಎಂದು ವರುಣಾ ಹಾಗೂ ಚಾಮರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಹೇಳಿದರು. ಮೈಸೂರಿನ ಜಯಲಕ್ಷ್ಮಿಪುರಂನ ಮಾಜಿ ಶಾಸಕ ವಾಸು ಅವರ ನಿವಾಸಕ್ಕೆ ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದ ನಂತರ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

1999ರ ಚುನಾವಣೆಯಲ್ಲಿ ವಾಸು ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿದ್ದ ಗುರುಸ್ವಾಮಿಗೆ ಆಶೀರ್ವಾದ ಮಾಡಿದ್ದರು. ಆ ಕ್ಷೇತ್ರದಿಂದ 2018ರಲ್ಲಿ ಜಿಟಿಡಿ ಅವರು ಗೆದ್ದರು. ಆದ್ದರಿಂದ ಅಧಿಕಾರ, ಅಂತಸ್ತು, ಕೀರ್ತಿ ಯಾವುದೂ ನಮ್ಮದ್ದಲ್ಲ. ಎಲ್ಲವೂ ತಾಯಿ ಚಾಮುಂಡಿಯ ಕೃಪೆ ಅಷ್ಟೇ. ಆಕೆ ಎಲ್ಲರಿಗೂ ಒಲಿಯುವುದಿಲ್ಲ. ಸಿದ್ದರಾಮಯ್ಯ ಅವರು ಈ ರಾಜ್ಯದ ಪ್ರಶ್ನಾತೀತ ನಾಯಕ. ನಾನು ನನ್ನ ಪಕ್ಷದ ಸೇವಕನಾಗಿದ್ದೇನೆ. ಆದರೆ ಗೋವಿಂದರಾಜನಗರ ಮಾದರಿ ಕ್ಷೇತ್ರ ಮಾಡಿದಂತೆ ಇಲ್ಲಿಯೂ ಅಭಿವೃದ್ಧಿಯಾಗಬೇಕು ಎಂದರೆ ಜನರು ನನ್ನ ಆಯ್ಕೆ ಮಾಡುತ್ತಾರೆ ಎಂದರು.

ವಾಸು ಅವರ ಭೇಟಿಯಲ್ಲಿ ಯಾವುದೇ ರಾಜಕೀಯವಿಲ್ಲ. ಐದು ವರ್ಷಕ್ಕೊಮ್ಮೆ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇರೆ. ಆದರೆ ವೈಯಕ್ತಿಕ ಸ್ನೇಹ ಎಲ್ಲದಕ್ಕೂ ದೊಡ್ಡದು. ವಾಸು ಅವರೊಂದಿಗೆ 30 ವರ್ಷದ ಅವಿನಾಭಾವ ಸಂಬಂಧವಿದೆ. ಇದಕ್ಕೆ ಮುಖ್ಯ ಕಾರಣ ಶ್ರೀ ಬಾಲಗಂಗಾಧರ ಸ್ವಾಮೀಜಿ. ವಾಸು ಅವರ ಹೆಜ್ಜೆ ಗುರುತುಗಳು ಮೈಸೂರಿನಲ್ಲಿ ಮಾತ್ರವಲ್ಲ, ರಾಜ್ಯದ ಮೂಲೆ ಮೂಲೆಯಲ್ಲಿವೆ. ತಾಂತ್ರಿಕ ವ್ಯವಸ್ಥೆ ಸುಧಾರಣೆ ದೂರದೃಷ್ಟಿಯಿಂದ ಕಾರ್ಯ ನಿರ್ವಹಿಸಿಕೊಂಡು ಬಂದಿದ್ದಾರೆ. ಶಿಕ್ಷಣ ಸಂಸ್ಥೆ ಮೂಲಕ ರಾಜ್ಯಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಇಂದು ಅವರ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದು ತಿಳಿಸಿದರು.

ವಾಸು ಅವರನ್ನು ಬಿಜೆಪಿಗೆ ಆಹ್ವಾನಿಸಲಾಯಿತೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಪಕ್ಷಕ್ಕೆ ಇವರಂತಹ ಪುಣ್ಯಾತ್ಮರು ಬರುತ್ತಾರೆ ಎಂದರೆ ಸ್ವಾಗತಿಸಲು ಅಮಿತ್ ಶಾ ಅವರನ್ನೇ ಕರೆಸುತ್ತೇವೆ. ಆದರೆ, ಇವರು ಆ ರೀತಿಯ ವ್ಯಕ್ತಿಯಲ್ಲ. ಇವರಿಗೆ ಖಂಡಿತವಾಗಿ ಅನ್ಯಾಯವಾಗಿದೆ. ಇವರು ಶಾಸಕರಾಗಿದ್ದಾಗ ನಿರ್ಮಿಸಿದ ಜಿಲ್ಲಾಸ್ಪತ್ರೆ ಮಹಾರಾಣಿ ಕಾಲೇಜು, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಿಂದ ಬಹಳಷ್ಟು ಉಪಯೋಗವಾಗುತ್ತಿದೆ. ದೂರದೃಷ್ಟಿಯಿಂದ ಆಸ್ಪತ್ರೆ ನಿರ್ಮಿಸದೆ ಇದ್ದಿದ್ದರೆ ಮೈಸೂರಿನಲ್ಲೂ ಚಾಮರಾಜನಗರದಲ್ಲಾದ ದುರಂತವಾಗುತ್ತಿತ್ತು ಎಂದು ಅಭಿಪ್ರಾಯಿಸಿದರು.

ಜಗದೀಶ್ ಶೆಟ್ಟರ್ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಪ್ರತಿಕ್ರಿಯಿಸಿ, ಈ ವಿಚಾರವಾಗಿ ಅವರೊಟ್ಟಿಗೆ ರಾತ್ರಿ ಹಾಗೂ ಬೆಳಗ್ಗೆ ಮಾತನಾಡಿದ್ದೇನೆ ಅವರು ನನಗೆ ಬಹಳ ಇಷ್ಟವಾದ ರಾಜಕಾರಣಿ ಅದು ಯಾಕೆ ಹೋಗುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ ಎಂದು ಹೇಳಿದರು.

ಸಿದ್ದರಾಮಯ್ಯ ಡಿಸಿಎಂ ಆಗಲು ನಾನೇ ಕಾರಣ


❝ ಸಿದ್ದಾರಾಮಯ್ಯ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಜೆ.ಎಚ್.ಪಟೇಲರು ಉಪಮುಖ್ಯಮಂತ್ರಿ ಆಗಿದ್ದರೂ 86 ಮಂದಿ ಸಹಿ ಹಾಕಿಸಿ ಸಿದ್ದರಾಮಯ್ಯನವರನ್ನೂ ಉಪಮುಖ್ಯಮಂತ್ರಿ ಮಾಡಿ ಎಂದು ಕೇಳಿಕೊಂಡಿದ್ದೇ ನಾನು. ಹಾಗೇ ಅವರ ಉಪಚುನಾವಣೆಯಲ್ಲಿಯೂ ನಾನೇ ಹೆಚ್ಚು ಓಡಾಡಿದ್ದು. ಕೆಲವು ಹಳ್ಳಿಗಳಲ್ಲಿ ಅವರನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ. ಅಂತಹ ಸಂದರ್ಭದಲ್ಲಿ ನಾನು ಆ ಹಳ್ಳಿಗಳಿಗೆ ಭೇಟಿ ನೀಡಿ ಜನರ ಮನವೊಲಿಸಿ ಪ್ರಚಾರ ಮಾಡಿದ್ದೇನೆ. ಈಗ ನೋಡಿದರೆ, ಸಿದ್ದರಾಮಯ್ಯ ಅವರು ಸೋಮಣ್ಣನಿಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ.
-ಸಚಿವ ವಿ.ಸೋಮಣ್ಣ

❝ ಸೋಮಣ್ಣನವರು ನನಗೆ 30 ವರ್ಷದ ಆತ್ಮೀಯರು. ಅವರ ಹೃದಯ ವೈಶಾಲ್ಯತೆ ಬಹಳಷ್ಟಿದೆ. ಅವರು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅತಿಥಿ ದೇವೋಭವ ಎಂದು ನಮ್ಮ ಸಂಸ್ಕೃತಿ ಹೇಳುವಂತೆ ನಾನು ಅವರನ್ನು ಬರಮಾಡಿಕೊಂಡಿದ್ದೇನೆ. ಅವರು ಏನೂ ಮಾತನಾಡಿಲ್ಲ. ನಿಮ್ಮ ಮಗನಿಗೆ ಆಶೀರ್ವಾದ ಮಾಡಿ ಎಂದು ಕೇಳಿಕೊಂಡರು ಅಷ್ಟೇ.
-ಮಾಜಿ ಶಾಸಕ ವಾಸು

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.16–ಮೈಸೂರಿನ ಬೋಗಾದಿ 2ನೇ ಹಂತ 1ನೇ ಮೇನ್ 1ನೇ ಕ್ರಾಸ್‌ನಲ್ಲಿರುವ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ಜೆಎಸ್‌ಎಸ್ ವಿದ್ಯಾಪೀಠದಲ್ಲಿ, ವಿದ್ಯಾರ್ಥಿನಿಲಯದಲ್ಲಿ ನೇರವಾಗಿ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಿ ಇ–ಮೇಲ್ ಹಾಗೂ ವಾಟ್ಸಾಪ್ ಮೂಲಕ ಪಡೆದುಕೊಳ್ಳಬಹುದು. ಮಾಹಿತಿಗೆ ಕೆ.ಎಸ್.ಗೌರಿಶಂಕರಸ್ವಾಮಿ ಅಥವಾ ಕೆ.ಎಸ್.ಕುಮಾರಸ್ವಾಮಿ, ಮೊ.9741452271, 9972014655 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.4.2023 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ.ಗಜಾನನ ಶರ್ಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಹಂಸಿನಿ ಎಸ್.ಕುಮಾರ್, ವ್ಯಾಖ್ಯಾನ–ಡಾ.ಎನ್.ಎಸ್.ತಾರಾನಾಥ್, 7.15 ಭಾವಗೀತೆ– ವೃಂದಗಾನ, 8.30 ಕಾಫಿ ತಿಂಡಿ: ಹೆಸರಾಂತ ಸಂಗೀತ ಕಲಾವಿದ ಶಿವಮೊಗ್ಗ ವೇಣುಗೋಪಾಲ್ ಅವರೊಂದಿಗಿನ ಸಂದರ್ಶನದ ಆಯ್ದ ಭಾಗಗಳು, ಸಂದರ್ಶಕರು– ಜಿ.ಕೆ.ರವೀಂದ್ರಕುಮಾರ್, 9.00 ಬೆಳ್ಳಿ ಬೆಡಗು 'ಪುಟ್ಟಣ್ಣ ಕಣಗಾಲ್', ಪ್ರಸ್ತುತಿ–ಜಿ.ಎನ್.ಮಂಜುನಾಥ್, 10.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ಸ್ಪೆಷಲ್ ಚುರುಮುರಿ, ಪ್ರಸ್ತುತಿ– ಪಿ.ಸಿ.ಮಳಿಮಠ ಮತ್ತು ಕೆ.ಬಿ.ಮೀನಾ, 11.30 ಮಿಶ್ರ ಮಾಧುರ್ಯ.

ಮಧ್ಯಾಹ್ನ: 12.30 ದೇವರನಾಮ– ಎಸ್.ಪಿ. ಬಾಲಸುಬ್ರಹ್ಮಣ್ಯಂ, ರಾಧಾ ಜಯಲಕ್ಷ್ಮೀ, 12.45 ನಮ್ಮ ಆರೋಗ್ಯ: ಕುಸುಮ ರೋಗ ಅಂದರೆ ಹಿಮೋಫೀಲಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಅರುಣ್ ವಿ. ಅವರೊಂದಿಗೆ ಮಾತುಕತೆ, 1.00 ರಂಗಗೀತೆ– ಸಂಪೂರ್ಣ ರಾಮಾಯಣ ನಾಟಕದ ಹಾಡುಗಳು, 1.20 ಭಾವಗೀತೆ– ಸಿ. ಶಶಿಕಲಾ ಚಂದ್ರಶೇಖರ್, 3.00 ಸಿ.ವಿ. ಕಿಟ್ಟಪ್ಪ– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ– ಮಹಿಳೆಯರಲ್ಲಿ ಸಾಮಾನ್ಯ ಆರೋಗ್ಯ, ಭಾಗವಹಿಸುವ ವೈದ್ಯರು– ಡಾ. ಜ್ಯೋತಿ ಉಮೇಶ್ ಪ್ರಸ್ತುತಿ– ಕೆ.ಬಿ. ಮೀನಾ, 6.50 ಕೃಷಿರಂಗ: ಕಿಸಾನ್ ವಾಣಿ– ರೇಷ್ಮೆ ಕೃಷಿಯಲ್ಲಿ ಆರ್ಥಿಕ ಪ್ರಗತಿ ಕುರಿತು ಬಿ.ಸಿ.ವಸಂತ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎಸ್. ಸುಬ್ರಹ್ಮಣ್ಯ. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು– ಹಿರೇನಂದಿ ಗ್ರಾಮದ ಚಾಮಮ್ಮ ಮತ್ತು ಲಕ್ಷ್ಮಮ್ಮ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

■ **ಭಾರತೀಯ ವಿಜ್ಞಾನ ಸಂಸ್ಥೆ (ಐಐಎ) :** 'ನೆರಳು ಹುಡುಕೋಣ ಬನ್ನಿ' ಶೂನ್ಯ ನೆರಳು ದಿನದ ಬಗ್ಗೆ ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ಒಂದು ದಿನದ ಕಾರ್ಯಾಗಾರ, ಸ್ಥಳ: ವಿಜ್ಞಾನ ಭವನ, ಮಾನಸ ಗಂಗೋತ್ರಿ, ಮೈಸೂರು ವಿವಿ, ಸಮಯ: ಬೆಳಗ್ಗೆ 10ರಿಂದ ಸಂಜೆ 5ರವರೆಗೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 17 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 2 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com



ನಕ್ಕರೆ ಅದೇ ಸ್ವರ್ಗ

ಹುಡುಗಿ : ನಾಳೆ ನನ್ನ ಬರ್ತ್ ಡೇ. ಏನು ಗಿಫ್ಟ್ ಕೊಡ್ತೀಯಾ?
ಹುಡುಗ : ಡಾರ್ಲಿಂಗ್ ನೀನು ನನ್ನ ಜೀವ... ಏನ್ ಬೇಕು ಕೇಳು.
ಹುಡುಗಿ : ಒಂದು ರಿಂಗ್.
ಹುಡುಗ : ಅಷ್ಟೇ ತಾನೇ ಕೊಡ್ತೀನಿ. ಆದರೆ ರಿಸೀವ್ ಮಾಡ್ಬೇಡ. ಬ್ಯಾಲೆನ್ಸ್ ಇಲ್ಲ. ಮಿಸ್‌ಕಾಲ್‌ಗೆ ಅಂತಾನೆ ಇಟ್ಕೊಂಡಿದ್ದೀನಿ.

ಮೈಸೂರು ಮಿತ್ರ
ಸೋಮವಾರ, 17 ಏಪ್ರಿಲ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಹಣ ಮತ್ತು ಸಂಪತ್ತು ನಷ್ಟವಾದರೆ ಸ್ವಲ್ಪ ಕಳೆದುಕೊಂಡಂತೆ ಅಷ್ಟೆ. ಆದರೆ, ವ್ಯಕ್ತಿತ್ವ ಕಳೆದುಕೊಂಡರೆ ನಿಮ್ಮ ಸರ್ವಸ್ವವನ್ನೂ ಕಳೆದುಕೊಂಡಂತೆ.
– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೋಪದಲ್ಲಿ ಕೊಯ್ದುಕೊಂಡ ಮೂಗು, ಶಾಂತವಾದ ಮೇಲೆ ಬಾರದು.

ನಿಮ್ಮ ಪತ್ರಗಳು

'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ 'ಮಿತ್ರ'ನ ಓದುಗರು, ಅಭಿಮಾನಿಗಳು, ಹಿತೈಷಿಗಳು ಸಾಕಷ್ಟು ಅಭಿನಂದನಾ ಪತ್ರಗಳ ಬರೆದಿದ್ದಾರೆ. ನಿಮ್ಮ ಪ್ರೀತ್ಯಾದರಗಳಿಗೆ ನಾವು ಚಿರಋಣಿ. ಸದಾ ನಿಮ್ಮ ಸಹಕಾರ ಕೋರುತ್ತೇವೆ. ಕೆಲವೊಂದು ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

'ಮೈಸೂರು ಮಿತ್ರ'ನಿಗೆ 44ರ ಪ್ರಾಯ..!

ಮಾನ್ಯರೆ,

1986, ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದ ದ್ವಿತೀಯ ದರ್ಜೆ ಸಹಾಯಕ ಎಂ.ಚಕ್ರಪಾಣಿಯವರನ್ನು ಅಕಾಲಿಕವಾಗಿ ವರ್ಗಾವಣೆ ಮಾಡಿದ್ದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮುಂದೆ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಗ ಪತ್ರಿಕೆಗಳ ಸಂಪರ್ಕಕ್ಕೆ ಬಂದೆ. ಆಗ ನಾನು 'ಮೈಸೂರು ಮಿತ್ರ'ದ ಸುದ್ದಿ ಸಂಪಾದಕ ಎಂ.ಆರ್.ಶಿವಣ್ಣ ಅವರ ಸಂಪರ್ಕದಲ್ಲಿದ್ದೆ. ಸಹಜವಾಗಿಯೇ ನನ್ನ ಬರಹಗಳನ್ನು ಮೆಚ್ಚಿದ್ದ ಶಿವಣ್ಣ ಅವರ ಉತ್ತೇಜನ ನನ್ನಲ್ಲಿದ್ದ ಪತ್ರಕರ್ತನನ್ನು ಬಡಿದೆಬ್ಬಿಸಿ, ಹಲವು ವರದಿ ಮಾಡಲು ಪ್ರೇರೇಪಿಸಿತು. ಅಂದಿನಿಂದ ಇಂದಿನವರೆಗೆ ವೈಚಾರಿಕತೆಗೆ ಒತ್ತು ನೀಡುವ 'ಮೈಸೂರು ಮಿತ್ರ'ದ ಬರಹಗಾರನಾಗಿಯೇ ಮುಂದುವರೆದಿದ್ದೇನೆ.

ನನ್ನ ಸಾಮಾಜಿಕ ಕಾಳಜಿಯ ಪತ್ರಗಳು 'ಮೈಸೂರು ಮಿತ್ರ'ನಲ್ಲಿ ನಿರ್ಭೀತಿಯಿಂದ ಪ್ರಕಟವಾಗುತ್ತಿವೆ. ಯಾವ ಪತ್ರಿಕೆಯೂ ಪ್ರಕಟಿಸದೇ ಹೋದ ನನ್ನ ಖಾರವಾದ ಪತ್ರಗಳು 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿದೆಯೆಂದು ಹೇಳಿಕೊಳ್ಳಲು ನನಗೆ ಅತೀವ ಸಂತೋಷವಾಗುತ್ತದೆ. ಅದರ ಮೂಲಕ ನಾನು ಸಾರ್ವಜನಿಕರ. ಧ್ವನಿಯಾಗಿ ನಿಲ್ಲುವ ಕೆಲಸ ಮಾಡುತ್ತಿದ್ದೇನೆಂಬ ತೃಪ್ತಿ ನನಗೆ ಬರಲು ಕಾರಣವಾದ 'ಮೈಸೂರು ಮಿತ್ರ' ನೂರು ಮೈಲುಗಲ್ಲುಗಳನ್ನು ದಾಟಲೆಂದು ಆಶಿಸುತ್ತೇನೆ.
–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

'ಮಿತ್ರ'ನಿಗೆ 44ರ ಶುಭಾಶಯಗಳು

ಮಾನ್ಯರೆ,
ಪ್ರೀತಿಯ 'ಮೈಸೂರು ಮಿತ್ರ'
ನೀನು ಬೆಳೆದಿರುವೆ ಬಹಳಷ್ಟು ಎತ್ರ
ನಿನ್ನದು ಹತ್ತು ಪುಟದ ಗಾತ್ರ
ಸತ್ಯ, ನ್ಯಾಯ, ನಿಷ್ಠೆ ನಿನ್ನಯ ಸೂತ್ರ
ನಿನ್ನ ಮುಂದೆ ನಡೆಯೋದಿಲ್ಲ
ರಾಜಕಾರಣಿಗಳ ತಂತ್ರ–ಕುತಂತ್ರ
ಜನರ ಕಷ್ಟ ಕೇಳಲು ಹೋಗುವೆ ಅವರ ಹತ್ರ
ನನಗೆ ಬಹಳ ಇಷ್ಟ ಕೆಬಿಜಿಯವರ ಭೂಮಂತ್ರ
ನಿನಗಾಗಿ ನಾ ಬರೆದೆ ಈ ಪ್ರೀತಿಯ ಪತ್ರ
ನೀನು ಭೂಮಿಗೆ ಬಂದು ಆಯಿತು 43 ವರ್ಷ
ಈ ದಿನ ನಮಗೆ ಬಹಳ ಹರ್ಷ
ನಮಗೆ ಬಿಸಿ ಬಿಸಿ ಸುದ್ದಿ ನೀಡುವುದೇ ನಿನ್ನ ಕಾಯಕ
ಓದುಗರ ನೋವು ನಲಿವಿಗೆ ಸ್ಪಂದಿಸೋ ಸೇವಕ
ನಿಮಗೆ ಆ ಕೆ.ಬಿ.ಗಣಪತಿಯವರೇ ನಾಯಕ
–ಅಹಲ್ಯ ಸಿ.ನಾ. ಚಂದ್ರ, ಜನತಾನಗರ, ಮೈಸೂರು–09

44ರ ವಸಂತದ ಶುಭಾಶಯಗಳು

ಮಾನ್ಯರೆ,
ದೈವ ಪುತ್ರ ಗಣಪತಿಯ ವರ ಪುತ್ರ **ನಮ್ಮ ಮಿತ್ರ**
ಪ್ರಾದೇಶಿಕ ಭಾಷೆಯ ಕಣಜ **ನಮ್ಮ ಮಿತ್ರ**
ನೈಜ ಮತ್ತು ನಿಖರ ಮಾಹಿತಿಗಳ ಆಧಾರ **ನಮ್ಮ ಮಿತ್ರ**
ಆಡು ಭಾಷೆಯಲ್ಲಿ ಜನರಿಗೆ ಅರಿವು ಮೂಡಿಸುವ **ನಮ್ಮ ಮಿತ್ರ**
ಮಿಥ್ಯ ವರದಿಗಳಿಗೆ ಮಣೆಹಾಸದ ಸತ್ಯಚಿತ್ತ **ನಮ್ಮ ಮಿತ್ರ**
ಅತಿಸಾಮಾನ್ಯರ ಪತ್ರಗಳನ್ನು ಪಥ್ಯವೆಂಬಂತೆ ಪ್ರಕಟಿಸುವ **ನಮ್ಮಮಿತ್ರ**
ವಿಶೇಷ ಸಂಚಿಕೆಗಳು ಬರಹಗಳು ಮನಮುಟ್ಟುವ ಕಥೆ ಕವನಗಳ ಆಗರ **ನಮ್ಮ ಮಿತ್ರ**
44 ವಸಂತಗಳನ್ನು ಪೂರೈಸುತ್ತ ಇನ್ನು ಹೆಚ್ಚಿನ ಜನರಿಗೆ ಹತ್ತಿರವಾಗುತ್ತಿರುವ **ನಮ್ಮ ಮಿತ್ರ**
400 ವಸಂತಗಳನ್ನು ಹೀಗೆ ಪೂರೈಸಲೆಂದು ಆಶಿಸುವ ಜನರ ಪ್ರೀತಿಯ ಮಿತ್ರ ನಮ್ಮ ಹೆಮ್ಮೆಯ **"ಮೈಸೂರು ಮಿತ್ರ"**
–ಯೋಗೇಶ್, ಎಂ.ಎನ್., ಆರ್.ಕೆ.ನಗರ, ಮೈಸೂರು–22

'ಮೈಸೂರು ಮಿತ್ರ'ನಿಗೆ ಶುಭಕಾಮನೆಗಳು...

ಮಾನ್ಯರೇ

'ಮೈಸೂರು ಮಿತ್ರ' 43 ವರ್ಷಗಳ ಸಾರ್ಥಕವಾಗಿ ಪೂರೈಸಿ, 44ನೇ ವರ್ಷಕ್ಕೆ ಯಶಸ್ವಿಯಾಗಿ ಪಾದಾರ್ಪಣೆ ಮಾಡುತ್ತಿರುವುದು ಸಂತಸದ ವಿಷಯ. ಈ ಪತ್ರಿಕೆಯು ಸ್ಥಳೀಯ ವಿದ್ಯಮಾನಗಳ ಸುದ್ದಿಗಳನ್ನು ಅಚ್ಚುಕಟ್ಟಾಗಿ ಪ್ರಕಟಿಸುತ್ತಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಗ್ರಾಮೀಣ ಭಾಗದ ಜನರಿಗೆ 'ಮಿತ್ರ'ನಂತೆ ಕಾರ್ಯನಿರ್ವಹಿಸುತ್ತಿದೆ. ಕೆಲವರಂತೂ ಈ ಪತ್ರಿಕೆಯನ್ನು ದಿನದ ಆರಂಭದಲ್ಲಿ ಓದಿಯೇ ದಿನನಿತ್ಯದ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾರೆ. ಅಷ್ಟರಮಟ್ಟಿಗೆ ವಿಶ್ವಾಸ, ಪ್ರೀತಿ. ನೇರ, ದಿಟ್ಟ, ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ಓದುಗರಿಗೆ ತಲುಪಿಸುತ್ತಿರುವುದು ಶ್ಲಾಘನೀಯ ಕಾರ್ಯ. ಗ್ರಾಮೀಣ ಭಾಗದ ಸಮಸ್ಯೆಗಳನ್ನು ಪ್ರಕಟಿಸಿ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸರ್ಕಾರದ ಮಟ್ಟದಲ್ಲಿ ಪರಿಹಾರ ಸಿಗುವಂತಹ ಗುರುತರವಾದ ಜವಾಬ್ದಾರಿಯನ್ನು 'ಮಿತ್ರ' ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾನೆ. ಮಾತ್ರವಲ್ಲ ಸರ್ಕಾರದ ನಡುವೆ ಜನ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸ್ಥಳೀಯ ವಿದ್ಯಮಾನಗಳನ್ನು ಸಕಾಲಕ್ಕೆ ಪ್ರಕಟಿಸಿ ಓದುಗರನ್ನು ತನ್ನತ್ತ ಸೆಳೆದು ಯಶಸ್ವಿಯಾಗಿದೆ. ಮಾನವೀಯ ಮೌಲ್ಯಗಳ ಹಾಗೂ ಸಾಮಾಜಿಕ ಕಳಕಳಿಯುಳ್ಳ ವಿಷಯಗಳಿಗೆ ಹಾತೊರೆಯುವ ಪತ್ರಿಕೆಯಾಗಿದೆ. ಪತ್ರಿಕೆಯ ಬೆಲೆಯಂತೂ ಸಾಮಾನ್ಯ ಜನರಿಗೆ ಕೈಗೆಟುಕುವಂತಿದೆ. ವರ್ಣರಂಜಿತ ಹಾಗೂ ಉತ್ತಮ ಗುಣಮಟ್ಟದ ಪೇಪರ್ ಅನ್ನು ಬಳಸಿ , ಅಂದವಾಗಿ ಓದುಗರನ್ನು ತನ್ನತ್ತ ಸೆಳೆಯುತ್ತಿದೆ. ಸಮಾಜದಲ್ಲಿ ನಡೆಯುವ ಪ್ರಚಲಿತ ಘಟನೆಗಳನ್ನು ಹಾಗೂ ಭ್ರಷ್ಟಾಚಾರದ ಹಗರಣಗಳನ್ನು ಎಳೆ ಎಳೆಯಾಗಿ ಬಯಲಿಗೆಳೆದು ಪ್ರಕಟಿಸುತ್ತಾ ಎಲ್ಲರ ವಿಶ್ವಾಸವನ್ನು ಗಳಿಸುತ್ತಾ ಬಂದಿದೆ.

ನಿಮ್ಮ ಪತ್ರಗಳ ವಿಭಾಗಕ್ಕೆ ನಾನು 3 ವರ್ಷಗಳಿಂದ ನಾನಾ ರೀತಿಯ ಪತ್ರಗಳ ಬರೆಯುತ್ತಿದ್ದು, ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿದೆ. ಇಂತಹ ಸಾಮಾಜಿಕ ಕಳಕಳಿಯುಳ್ಳ ಪತ್ರಿಕೆಯು 43 ವರ್ಷಗಳನ್ನು ಪೂರೈಸಿ 44ನೇ ವಸಂತಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ಪತ್ರಿಕೆಯ ಯಶಸ್ಸಿಗೆ ಕಾರಣೀಭೂತರಾದ ಸಂಪಾದಕರು, ವ್ಯವಸ್ಥಾಪಕರು, ಸಿಬ್ಬಂದಿವರ್ಗ, ಪತ್ರಿಕಾ ವಿತರಕರು, ಜಾಹೀರಾತುದಾರರು ಹಾಗೂ ಓದುಗರಿಗೆ ಹೃದಯಪೂರ್ವಕ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. **–ಪರಶಿವಮೂರ್ತಿ ಎನ್.ಪಿ**, ನಂಜೀಪುರ, ಸರಗೂರು ತಾಲೂಕು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ವಿದ್ಯಾವಂತರೂ ಪ್ರಜ್ಞಾವಂತರಾಗಬೇಕು!

> **“ ಶಿಕ್ಷಣದ ಪ್ರಮಾಣ ಹೆಚ್ಚಾದಂತೆಲ್ಲ ಸಮಾಜದಲ್ಲಿ ಅಕ್ರಮಗಳು, ಅನೀತಿಗಳು, ಅಧರ್ಮಗಳು, ಶೋಷಣೆಗಳು, ನ್ಯಾಯಾಲಯಗಳಲ್ಲಿ ದಾವೆಗಳು, ಅಪರಾಧಗಳ ಸಂಖ್ಯೆ ಕಡಿಮೆಯಾಗಬೇಕಿತ್ತು. ಆದರೆ ಇಂದು ಸರ್ಕಾರಗಳ ಅನೇಕ ಅಭಿಯಾನಗಳ ಮುಖಾಂತರ ಶಿಕ್ಷಣದ ಪ್ರಮಾಣ ಹಾಗೂ ಗುಣಮಟ್ಟ ಎರಡೂ ಹೆಚ್ಚಾಗಿದೆ. ಆದರೆ ನೈತಿಕತೆ, ಮೌಲ್ಯಗಳು ಮಾತ್ರ ಅಧಃಪತನ ಕಾಣುತ್ತಿವೆ. ಶಾಲೆಗಳ ಸಂಖ್ಯೆ ವೃದ್ಧಿಸುತ್ತಿದ್ದರೆ, ಮತ್ತೊಂದೆಡೆ ವೃದ್ಧಾಶ್ರಮಗಳು ಹಾಗೂ ಕಾರಾಗೃಹ ಸಂಖ್ಯೆ ಕಡಿಮೆ ಯಾಗಬೇಕಿತ್ತು. ಆದರೆ ಇವುಗಳ ಸಂಖ್ಯೆ ಹೆಚ್ಚುತ್ತಿರುವುದು ಸಮಾಜದ ಸ್ವಾಸ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಂದು ಅನೀತಿ, ಅಕ್ರಮ, ಅಧರ್ಮ, ಅನೈತಿಕತೆ ಅರಾಜಕತೆ, ಅಧಿಕಾರ ದುರುಪಯೋಗ.... ಇತ್ಯಾದಿಗಳೆಲ್ಲವೂ ವಿದ್ಯಾವಂತ ಸಮುದಾಯದಲ್ಲಿಯೇ ಕಾಣಬಹುದಾಗಿದೆ. ಸಾಮಾಜಿಕ ಪ್ರಜ್ಞೆ, ನಾಗರಿಕ ಪ್ರಜ್ಞೆ, ಸಾಂಸಾರಿಕ ಪ್ರಜ್ಞೆ, ಕರ್ತವ್ಯ ಪ್ರಜ್ಞೆ, ದೇಶಪ್ರೇಮದ ಪ್ರಜ್ಞೆ, ಪಾಪಪ್ರಜ್ಞೆ ಇವೆಲ್ಲವುಗಳು ಇದ್ದರೆ ಮಾತ್ರ ಅವನು ಮಾನವ ಎನಿಸಿಕೊಳ್ಳಬಲ್ಲ, ಇಲ್ಲವಾದಲ್ಲಿ ಅವನು ದಾನವನೇ ಸರಿ!**



ಶಿಕ್ಷಣ ಎಂದರೆ ಓದು–ಬರಹ ಕಲಿಸುವುದು ಎಂಬ ಸಂಕುಚಿತ ಮನೋಭಾವವಿದೆ. ವಿದ್ಯಾವಂತನೆಂದರೆ ಓದು,ಬರಹದ ಜೊತೆಗೆ ಸಾಮಾನ್ಯ ಜ್ಞಾನ, ವಿನಯ, ವಿವೇಕ, ದೇಶಪ್ರೇಮ, ಸಹಜೀವನ, ನಾಗರಿಕ ಪ್ರಜ್ಞೆಯೂ ಸೇರಿದಂತೆ ಅನೇಕ ಅಂಶಗಳನ್ನು ಹೊಂದಿರುವುದಾಗಿದೆ. ಆದರೆ ಇಂದು ಅಕ್ಷರಸ್ಥರೆಲ್ಲರೂ ತಮ್ಮನ್ನು ವಿದ್ಯಾವಂತರು ಎಂದುಕೊಂಡು ಮುಖವಾಡ ಧರಿಸಿ ಬದುಕುತ್ತಿರುವುದು ವಿಪರ್ಯಾಸದ ಸಂಗತಿ. ಶಿಕ್ಷಣಕ್ಕೂ ಬದುಕಿಗೂ ಸಂಬಂಧವೇ ಇಲ್ಲ ಎಂದು ಅನೇಕರು ಸ್ವೇಚ್ಛಾಚಾರದಿಂದ ಬದುಕುತ್ತಿದ್ದಾರೆ. ಮನುಷ್ಯನಿಗೆ ಇರುವ ಪ್ರಜ್ಞಾವಂತಿಕೆಯಿಂದ ಮಾತ್ರ ಅವನು ಬೇರೆಲ್ಲಾ ಪ್ರಾಣಿಗಳಿಗೂ ಭಿನ್ನವಾಗಿ ನಿಲ್ಲಲು ಸಾಧ್ಯ. ಪ್ರಜ್ಞಾವಂತಿಕೆ ಎಂದರೆ ಯಾವುದು ಸರಿ, ಯಾವುದು ತಪ್ಪು ಎಂಬ ವಿವೇಚನೆಯನ್ನು ಹೊಂದಿರುವುದು. ಆದರೆ ಸ್ವಾರ್ಥ ಸ್ವಭಾವವು ಮನುಷ್ಯನಲ್ಲಿನ ವಿವೇಚನೆಯನ್ನು ದೂರವಾಗಿಸಿ ಮನುಷ್ಯನನ್ನು ಲೋಭಿಯಾಗಿಸುತ್ತದೆ. ಲೋಭವು ಮನುಷ್ಯನ ಗುಣಸ್ವಭಾವವನ್ನೇ ಬದಲಿಸುತ್ತದೆ.

ಶಿಕ್ಷಣದ ಪ್ರಮಾಣ ಹೆಚ್ಚಾದಂತೆಲ್ಲ ಸಮಾಜದಲ್ಲಿ ಅಕ್ರಮಗಳು, ಅನೀತಿಗಳು, ಅಧರ್ಮಗಳು, ಶೋಷಣೆಗಳು, ನ್ಯಾಯಾಲಯಗಳಲ್ಲಿ ದಾವೆಗಳು, ಅಪರಾಧಗಳ ಸಂಖ್ಯೆ ಕಡಿಮೆಯಾಗಬೇಕಿತ್ತು. ಆದರೆ ಇಂದು ಸರ್ಕಾರಗಳ ಅನೇಕ ಅಭಿಯಾನಗಳ ಮುಖಾಂತರ ಶಿಕ್ಷಣದ ಪ್ರಮಾಣ ಹಾಗೂ ಗುಣಮಟ್ಟ ಎರಡೂ ಹೆಚ್ಚಾಗಿದೆ. ಆದರೆ ನೈತಿಕತೆ, ಮೌಲ್ಯಗಳು ಮಾತ್ರ ಅಧಃಪತನ ಕಾಣುತ್ತಿವೆ. ಶಾಲೆಗಳ ಸಂಖ್ಯೆ ವೃದ್ಧಿಸುತ್ತಿದ್ದರೆ, ಮತ್ತೊಂದೆಡೆ ವೃದ್ಧಾಶ್ರಮಗಳು ಹಾಗೂ ಕಾರಾಗೃಹ ಸಂಖ್ಯೆ ಕಡಿಮೆಯಾಗಬೇಕಿತ್ತು. ಆದರೆ ಇವುಗಳ ಸಂಖ್ಯೆ ಹೆಚ್ಚುತ್ತಿರುವುದು ಸಮಾಜದ ಸ್ವಾಸ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸಾಮಾಜಿಕ ಪ್ರಜ್ಞೆ, ನಾಗರಿಕ ಪ್ರಜ್ಞೆ, ಸಾಂಸಾರಿಕ ಪ್ರಜ್ಞೆ, ಕರ್ತವ್ಯ ಪ್ರಜ್ಞೆ, ದೇಶಪ್ರೇಮದ ಪ್ರಜ್ಞೆ, ಪಾಪಪ್ರಜ್ಞೆ ಇವೆಲ್ಲವುಗಳು ಇದ್ದರೆ ಮಾತ್ರ ಅವನು ಮಾನವ ಎನಿಸಿಕೊಳ್ಳಬಲ್ಲ, ಇಲ್ಲವಾದಲ್ಲಿ ಅವನು ದಾನವನೇ ಸರಿ!

ಮನುಷ್ಯ ವಿದ್ಯಾವಂತನಾಗುವುದಕ್ಕಿಂತ ನೀತಿವಂತನಾಗುವುದು ಲೇಸು. ಇಂದು ಅನೀತಿ, ಅಕ್ರಮ, ಅಧರ್ಮ, ಅನೈತಿಕತೆ, ಅರಾಜಕತೆ, ಅಧಿಕಾರ ದುರುಪಯೋಗ........ ಇತ್ಯಾದಿಗಳೆಲ್ಲವೂ ವಿದ್ಯಾವಂತ ಸಮುದಾಯದಲ್ಲಿಯೇ ಹೆಚ್ಚಾಗಿ ಕಾಣಬಹುದಾಗಿದೆ. ಶಿಕ್ಷಣ ಅವರನ್ನು ಮೂಲಭೂತವಾಗಿ ಬದಲಿಸುವಲ್ಲಿ ಸೋತಿದೆ ಅಂತಲೇ ಹೇಳಬಹುದು. ಇಂದಿನ ದಿನಮಾನದಲ್ಲಿ ಸುಶಿಕ್ಷಿತರು, ಜವಾಬ್ದಾರಿಯುತವಾದ ಸ್ಥಾನದಲ್ಲಿ ಇರುವವರು ತಮ್ಮ ವೃತ್ತಿಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಸಂಗತಿಗಳನ್ನು ಕಾಣಬಹುದು. ಕನಿಷ್ಠ ಪ್ರಜ್ಞಾವಂತಿಕೆಯನ್ನೂ ಹೊಂದದೆ ತಮ್ಮ ವೃತ್ತಿಗೆ, ಸಮಾಜಕ್ಕೆ, ಸರ್ಕಾರಕ್ಕೆ ದ್ರೋಹ ಬಗೆಯುತ್ತಿರುವುದನ್ನು ಗಮನಿಸಬಹುದು. ಸಮಾಜದ ಅಂಗಗಳಲ್ಲಿಯೂ, ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂದು ಅನೀತಿ ತಾಂಡವವಾಡುತ್ತಿರುವುದು ದುರದೃಷ್ಟಕರ. ರಾಜ್ಯದ ಖ್ಯಾತ ನಾಟಕಕಾರ, ರಂಗಕರ್ಮಿಯೂ ಆದ ಶ್ರೀ ಎಸ್.ಎನ್.ಸೇತೂರಾಂರವರು ಸರ್ಕಾರಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ಅವರು ತಮ್ಮ ಅಧಿಕಾರವಧಿಯಲ್ಲಿ ಆದ ಒಂದು ಕಹಿ ಅನುಭವವನ್ನು ಹಂಚಿಕೊಂಡಿದ್ದಾರೆ.

ಒಮ್ಮೆ ಸೇತೂರಾಂ ಅವರು ಕೆಲಸ ನಿಮಿತ್ತ ಒಂದು ಕಾಡಂಚಿನ ಅರಣ್ಯ ಇಲಾಖೆಗೆ ಸೇರಿದ ಅತಿಥಿ ಗೃಹದಲ್ಲಿ ಉಳಿಯುವ ಸಂದರ್ಭ ಒದಗಿ ಬರುತ್ತದೆ. ಸರ್ಕಾರಿ ಅಧಿಕಾರಿ ಆಗಿದ್ದರಿಂದ ಅವರಿಗೆ ವಿಶೇಷ ಆತಿಥ್ಯ ನೀಡಲು ಆ ಇಲಾಖೆಯ ಅಧಿಕಾರಿಗಳು ಉತ್ಸುಕರಾಗಿರುತ್ತಾರೆ. ಸೇತೂರಾಂ ಅವರಿಗೆ ವಿಶೇಷ ಭಕ್ಷ್ಯ ವ್ಯವಸ್ಥೆ ಮಾಡಲು ಬಯಸುತ್ತಾರೆ. ನೇರವಾಗಿ ಅವರಿಗೆ 'ನಿಮಗೆ ನವಿಲಿನ ಮಾಂಸದ ಊಟ ಆಗಬಹುದೇ?' ಎಂದು ಕೇಳಿದಾಗ ಸೇತೂರಾಂ ಅವರು ಹೌಹಾರುತ್ತಾರೆ. ನವಿಲಿನ ಮಾಂಸದೂಟ ಎಂದರೆ ನವಿಲನ್ನು ಕೊಂದು ತರಬೇಕು. ಅದನ್ನು ಕೊಂದು ತರುವುದಾದರೂ ಯಾರು? ವನ್ಯಜೀವಿಗಳನ್ನು, ಅಮೂಲ್ಯವಾದ ವೃಕ್ಷ ಸಂಪತ್ತನ್ನು ಕಾಯಲು ಸರ್ಕಾರದಿಂದ ನೇಮಕವಾಗಿರುವ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ. ಇಲಾಖೆಯ ಅಧಿಕಾರಿ ನಡೆಗೆ ಅವರು ಬೇಸರಿಸಿಕೊಂಡು, 'ಬೇಲಿಯೇ ಎದ್ದು ಹೊಲ ಮೇಯ್ದರೆ' ದೇಶದ ಗತಿ ಏನು? ಎಂದು ಪ್ರಶ್ನಿಸಿಕೊಂಡು ಅವರ ಆತಿಥ್ಯವನ್ನು ತಿರಸ್ಕರಿಸಿ ಸಸ್ಯಾಹಾರದ ಆಹಾರ ಸ್ವೀಕರಿಸುತ್ತಾರೆ.

ಇದೊಂದು ಘಟನೆಯು ಜವಾಬ್ದಾರಿಯುತ ಸ್ಥಾನದಲ್ಲಿರುವವರ ಬೇಜವಾಬ್ದಾರಿತನ, ಪ್ರಜ್ಞಾವಂತಿಕೆ ಇಲ್ಲದೇ ಇರುವುದು ಅಷ್ಟೇ ಅಲ್ಲ ತಮ್ಮ ವೃತ್ತಿಗೆ ದ್ರೋಹ ಮಾಡುವ ಮೂಲಕ ಸರ್ಕಾರಕ್ಕೆ, ಸಮಾಜಕ್ಕೆ ಕಂಟಕಪ್ರಾಯರಾಗಿ ಇರುವುದನ್ನು ಗಮನಿಸಬಹುದು. ಇದೊಂದು ಉದಾಹರಣೆ ಅಷ್ಟೆ, ಇದೇ ಮಾದರಿಯ ಅನೇಕ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ಮೇಲಾಧಿಕಾರಿಗಳನ್ನು ತೃಪ್ತಿಪಡಿಸಿ ತಮ್ಮ ಕೆಲಸ ಸರಾಗ ಮಾಡಿಕೊಳ್ಳಲು ತಮ್ಮ ವೃತ್ತಿಧರ್ಮಕ್ಕೆ ಕೊಳ್ಳಿ ಇಟ್ಟು ಲಜ್ಜೆಗೇಡಿತನದಿಂದ ಬದುಕುತ್ತಿದ್ದಾರೆ. ಆತ್ಮಸಾಕ್ಷಿಯೇ ಇಲ್ಲದ ಇಂತಹ ಜನರಿಂದಲೇ ಸಮಾಜದಲ್ಲಿ ಯಾರನ್ನೂ ನಂಬಲಾಗದ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ.

ಇದೇ ರೀತಿ ಪೊಲೀಸ್ ಇಲಾಖೆಯಲ್ಲಿನ ಕರ್ಮಕಾಂಡಗಳನ್ನು ವಿವರಿಸಿ ಹೇಳಬೇಕಿಲ್ಲ. ಸರ್ಕಾರದ ಕಾನೂನುಗಳನ್ನು ಕಾಪಾಡುವ ನಿಟ್ಟಿನಲ್ಲಿ ಈ ಇಲಾಖೆಯ ಪಾತ್ರ ಅಪಾರವಾದುದು. ಆದರೆ ಇತ್ತೀಚೆಗೆ ಇನ್ಸ್‌ಪೆಕ್ಟರ್ ನೇಮಕಾತಿ ಹಗರಣದಲ್ಲಿ ಐಪಿಎಸ್ ಅಧಿಕಾರಿಗಳೇ ಭಾಗಿಯಾಗಿ ಕೋಟ್ಯಾಂತರ ರೂಪಾಯಿಗಳನ್ನು ಲಂಚದ ರೂಪದಲ್ಲಿ ಪಡೆದು ಇಡೀ ಇಲಾಖೆಯೇ ತಲೆತಗ್ಗಿಸುವಂತಹ ಅನಾಗರಿಕ, ಅಕ್ಷಮ್ಯ ಪ್ರಕರಣದಲ್ಲಿ ಭಾಗಿಯಾಗಿದ್ದು ನಾಚಿಕೆಗೇಡಿನ ಸಂಗತಿ. ವ್ಯವಸ್ಥಿತ ರೂಪದಲ್ಲಿ ಅಕ್ರಮವನ್ನು ಎಸಗಿದ ಪ್ರಕರಣದಲ್ಲಿ ಅವರಿಗೆ ನೀಡುವ ಶಿಕ್ಷೆಯ ಪ್ರಮಾಣ ಏನೇನು ಅಲ್ಲ ಎನ್ನಬಹುದು. ಸಮಾಜದ್ರೋಹ ಮಾಡುವಾಗ ಅವರು ತಮ್ಮ ಸಾಕ್ಷಿಪ್ರಜ್ಞೆಯನ್ನು ಎಲ್ಲಿ ಅಡವಿಡುತ್ತಾರೋ ಆ ಭಗವಂತನೇ ಬಲ್ಲ. ಸಮಾಜದಲ್ಲಿ ನಡೆಯುವ ಅಕ್ರಮ, ಅನೀತಿ ಹಾಗೂ ಅಧರ್ಮಗಳಿಗೆ ಕಡಿವಾಣ ಹಾಕುವ ಇಲಾಖೆಯೇ ಅವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ವಿಪರ್ಯಾಸದ ಸಂಗತಿ.

ಇಂದಿನ ಪತ್ರಿಕೆಗಳಲ್ಲಿ, ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗುತ್ತಿರುವ ಪ್ರಕರಣಗಳನ್ನು ಗಮನಿಸಿದಾಗ ನಾವು ನಾಗರಿಕ ಪ್ರಪಂಚದಲ್ಲಿ ಬದುಕುತ್ತಿದ್ದೇವೆಯೋ, ಅನಾಗರಿಕ ಪ್ರಪಂಚದಲ್ಲಿಯೋ ಎಂಬ ಅನುಮಾನ ಕಾಡದೇ ಇರುವುದಿಲ್ಲ. ಸಮಾಜದ ಮನೋಧರ್ಮವೂ ಸಹ ಬದಲಾಗಿಬಿಟ್ಟಿದೆ. ಲಂಚಕೋರರನ್ನು, ವಾಮಮಾರ್ಗದಲ್ಲಿ ಅಧಿಕಾರ ಹಾಗೂ ಹಣ ದಕ್ಕಿಸಿಕೊಳ್ಳುವವರನ್ನು ಕೇಡಿಗಳು ಎಂದು ಭಾವಿಸದೆ ಅವರನ್ನು ಕಿಲಾಡಿಗಳು ಎಂದು ಕೊಂಡಾಡುತ್ತಿರುವುದು ಸಹ ಇದಕ್ಕೆ ಪರೋಕ್ಷವಾಗಿ ಕಾರಣವಾಗಿರಬಹುದು. ಹಿಂದೆ ಲಂಚಕೋರ ಅಧಿಕಾರಿ ಒಬ್ಬ ಸಿಕ್ಕಿ ಬಿದ್ದರೆ ಸಮಾಜದಲ್ಲಿ ಆತ ತಲೆ ಎತ್ತಿ ನಡೆಯದಂತೆ ಒಂದು ಸಾಮಾಜಿಕ ಬಹಿಷ್ಕಾರ ವಿಧಿಸುತ್ತಿದ್ದರು. ಆದರೆ ಇಂದು ಲಂಚಕೋರ ಬಹುಕೋಟಿ ಗಳಿಸಿ, ನಂತರ ಸಿಕ್ಕಿ ಬಿದ್ದರೆ ಅವನನ್ನು ಹೀರೋ ರೀತಿ ಬಿಂಬಿಸಲಾಗುತ್ತಿದೆ. ಪಾಪಪ್ರಜ್ಞೆಯಿಂದ ನರಳಬೇಕಾದವನನ್ನು ಜನರೇ ಮೆರೆಸುವ ಪರಿ ನೋಡಿದರೆ ಯಾರನ್ನು ದೂಷಿಸಬೇಕು ಎಂದು ಅನುಮಾನ ಉಂಟಾಗುತ್ತದೆ! ಹಾಗೆಯೇ ಪ್ರಜ್ಞಾವಂತರನ್ನು ಇಂದು ಸಮಾಜವೇ ಕಡೆಗಣಿಸುತ್ತಿರುವುದು ಸಹ ಉತ್ತಮ ನಡೆಯಲ್ಲ.

ಇನ್ನು ಮಹಿಳೆಯರಿಗೆ ಆಗುತ್ತಿರುವ ಶೋಷಣೆ ಪ್ರಕರಣಗಳು ಹೆಚ್ಚು ವಿದ್ಯಾವಂತರ ಕುಟುಂಬಗಳಲ್ಲಿಯೇ ಕಾಣಬಹುದು. ಅದರಲ್ಲೂ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ವರದಿಯಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ. ವರದಕ್ಷಿಣೆ ಶೋಷಣೆ ಅಷ್ಟೇ ಅಲ್ಲದೆ ಸಣ್ಣಪುಟ್ಟ ಸಾಫ್ಟ್ ಶೋಷಣೆಗಳನ್ನು ಗಮನಿಸಿದರೆ ಇವರು ವಿದ್ಯಾವಂತ ರಕ್ಷಕರೋ ಅಥವಾ ರಾಕ್ಷಸರೋ ಅನಿಸದೆ ಇರದು. ವೈದ್ಯರು, ಅಭಿಯಂತರರು, ಶಿಕ್ಷಕರು, ಬುದ್ಧಿಜೀವಿಗಳು ಎನಿಸಿಕೊಂಡವರು, ಅಷ್ಟೇ ಏಕೆ ನ್ಯಾಯ ಕೊಡುವ ಸ್ಥಾನದಲ್ಲಿರುವವರೂ ಸಹ ಹೆಣ್ಣು ಮಕ್ಕಳನ್ನು ನಿರ್ದಯವಾಗಿ ಶೋಷಣೆ ಮಾಡುತ್ತಿರುವುದು ವಿದ್ಯಾವಂತ ಸಮೂಹದಲ್ಲಿ ಮರೆಯಾಗುತ್ತಿರುವ ಪ್ರಜ್ಞಾವಂತಿಕೆಯನ್ನು ಪ್ರಶ್ನಿಸುವಂತೆ ಮಾಡಿದೆ.

ಇಂದಿನ ರಾಜಕೀಯ ಕ್ಷೇತ್ರದ ಹೊಲಸನ್ನು ಯಾವ ರೀತಿ ವರ್ಣಿಸಬೇಕೋ ಅರಿಯದು. ಅಧರ್ಮದಿಂದ ಹಣ ಗಳಿಸಿ ಸಿಕ್ಕಿಬಿದ್ದ ರಾಜಕಾರಣಿಯು ಜೈಲು ಸೇರಿದಾಗ ನಡೆಯುವ ಮುಷ್ಕರಗಳು, ನಂತರ ಆತ ಜೈಲಿನಿಂದ ಬಿಡುಗಡೆಯಾದಾಗ ನಡೆಯುವ ಸಂಭ್ರಮಾಚರಣೆಗಳನ್ನು ಗಮನಿಸಿದರೆ ಜನರ ಪ್ರಜ್ಞಾವಂತಿಕೆ ಎಲ್ಲಿ ಸತ್ತುಹೋಗಿದೆ ಎಂದು ಅನಿಸದೆ ಇರದು. ಆರೋಪವು ಜಗಜ್ಜಾಹೀರಾಗಿದ್ದರೂ ಅವನನ್ನು ತಿರಸ್ಕಾರ ಮಾಡುವ ಬದಲು ಜೈಕಾರ ಹಾಕಿ ಪುರಸ್ಕರಿಸುತ್ತಿರುವುದು ಜವಾಬ್ದಾರಿಯುತ ಪ್ರಜೆಗಳ ನಡೆಯಲ್ಲ. ಕಲ್ಲಿನಿಂದ ಹೊಡೆದು ವಾಪಸ್ ಜೈಲಿಗೆ ಅಟ್ಟುವ ಬದಲು ಹೂಹಾರಗಳನ್ನು ಹಾಕಿ ಸ್ವಾಗತಿಸುವುದು ಯಾವ ನೀತಿ, ಯಾವ ಧರ್ಮ? ಇದರಿಂದ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಜೈಲಿನಿಂದ ಜಾಮೀನು ಪಡೆದುಕೊಂಡು ಹೊರಬಂದ ಆರೋಪಿಯನ್ನು ಕೊಂಡಾಡುವುದರಿಂದ ಅವನು ಮತ್ತಷ್ಟು ಅಕ್ರಮ ಮಾಡುವುದಕ್ಕೆ ಹೇಸುವುದಿಲ್ಲ ಅಲ್ಲವೇ?

ಇದು ಚುನಾವಣಾ ಪರ್ವ. ಕಳೆದ ಒಂದು ತಿಂಗಳಿನಿಂದ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದಲ್ಲಿ ರಾಜಕಾರಣಿಗಳು ಸಮಾಜಸೇವೆಯ ಹೆಸರಿನಲ್ಲಿ ಆರಿಸಿ ಬಂದು ಸಮಾಜಕ್ಕೆ ದ್ರೋಹ ಮಾಡುತ್ತಿರುವುದನ್ನು ಕಾಣಬಹುದು. ಇಂದು ನಾಲಾಯಕ್ ರಾಜಕಾರಣಿಗಳಿಗೆ ಪಕ್ಷ ಸ್ಪರ್ಧಿಸಲು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಒಂದು ದಿನವೂ ಯೋಚಿಸಿದೆ ಪಕ್ಷಾಂತರ ಮಾಡುವ ಮೂಲಕ ಶತಾಯಗತಾಯ ಚುನಾವಣೆಯಲ್ಲಿ ಗೆದ್ದು ಖಜಾನೆ ಲೂಟಿ ಮಾಡಲು ಸಿದ್ಧರಾಗುತ್ತಿರುವವರಂತೆಯೇ ಕಾಣುತ್ತಿದ್ದಾರೆ. ಸಾಮಾನ್ಯ ಜನರಿಗೆ ಸರಿಯಾದ ಸಮಯಕ್ಕೆ ಸರ್ಕಾರಿ ಬಸ್ ಸಿಗದೆ ಪರದಾಡುತ್ತಿರುವ ಹೊತ್ತಿನಲ್ಲಿ ಪುಡಾರಿಯೊಬ್ಬನ ಮನೆಯ ಬಾಗಿಲಿಗೆ ಹೆಲಿಕಾಪ್ಟರ್ ಒಂದು ಇಳಿಯುತ್ತದೆ ಎಂದರೆ ಇವರೆಲ್ಲರೂ ಯಾರ ಹಣದಲ್ಲಿ ಶೋಕಿ ಮಾಡುತ್ತಿದ್ದಾರೆ. ಇಪ್ಪತ್ತು ವರ್ಷಗಳ ಹಿಂದೆ ಇವರ ಬಳಿ ಇದ್ದ ಆಸ್ತಿಗೂ ಇಂದು ಇವರುಗಳೇ ಘೋಷಿಸಿಕೊಂಡಿರುವ ಆಸ್ತಿಗೂ ತಾಳಮೇಳವೇ ಇಲ್ಲ. ಸಾರ್ವಜನಿಕರು ಬೆವರು ಸುರಿಸಿ ಗಳಿಸಿದ ಹಣದಲ್ಲಿ ತೆರಿಗೆ ಕಟ್ಟಿದರೆ ಇವರು ಅದನ್ನು ಲೂಟಿ ಹೊಡೆದು ಅದೇ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾರೆ. ಇದು ಮತದಾನ ಮಾಡುವ ಸಾಮಾನ್ಯನೂ ಯೋಚಿಸಬೇಕಾದ ಸಂಗತಿ. ಅಭ್ಯರ್ಥಿ ನೀಡುವ ಎಂಜಲು ಕಾಸಿಗೆ ತಮ್ಮ ಮತ ಮಾರಿಕೊಂಡು ಅವರು ಅಕ್ರಮವಾಗಿ ಹಣ ಗಳಿಸಲು ಖರ್ಚೆ ಕೊಟ್ಟು ಅವರನ್ನೇ ನಮ್ಮ ನಾಯಕ ಎಂದು ಮೆರೆಸುವುದು ಯಾವ ಪ್ರಜ್ಞಾವಂತಿಕೆ. ಮತದಾರ ಯೋಚಿಸಿ ಸಬ್ಬರಿಗೆ ಮನ್ನಣೆ ಕೊಡುವುದು ಒಳಿತು.

ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯಲು ಪದವಿಯನ್ನೇ ಗಳಿಸಬೇಕಾಗಿಲ್ಲ. ಸಮಾಜವು ಸ್ವಸ್ಥವಾಗಿರಲು ಎಲ್ಲರೂ ವಿದ್ಯಾವಂತರೇ ಆಗಬೇಕಿಲ್ಲ. ನೀತಿ, ನಿಯಮ, ಧರ್ಮದ ನೆಲೆಗಟ್ಟಿನಲ್ಲಿ ಬದುಕಿದರೆ ಅದೇ ಪ್ರಜ್ಞಾವಂತಿಕೆ. ಆ ಪ್ರಜ್ಞಾವಂತಿಕೆಯು ಜನರಲ್ಲಿ ಜಾಗೃತವಾಗಬೇಕಾದ ಅಗತ್ಯವಿದೆ. ಏನಂತೀರಿ?

ಪದ ತಾಂಬೂಲ: ಅರಿವಿಲ್ಲದೆ ಆದದ್ದು ತಪ್ಪು, ಅರಿವಿದ್ದೂ ಮಾಡುವುದು ಅಪರಾಧ

ಬಿಜೆಪಿ ಸರ್ಕಾರದಿಂದ ಭ್ರಷ್ಟಾಚಾರ ಮಿತಿ ಮೀರಿತೇ ಹೊರತು ಜನಸಾಮಾನ್ಯರಿಗೆ ಏನೂ ಅನುಕೂಲವಾಗಿಲ್ಲ

● ಮಾಜಿ ಶಾಸಕ, ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಆರೋಪ ● ಅಭಿವೃದ್ಧಿಗೆ ನಾನು ಸಾಕಷ್ಟು ಶ್ರಮಿಸಿದ್ದೇನೆ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡುತ್ತಿರುವುದು.

ಮೈಸೂರು, ಏ.16(ಎಂಟಿವೈ)– ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿ ಸರ್ಕಾರ ಮಿತಿ ಮೀರಿದ ಭ್ರಷ್ಟಾಚಾರದಲ್ಲಿ ಮುಳುಗಿತ್ತು. ಕೆ.ಆರ್.ಕ್ಷೇತ್ರವೂ ಸೇರಿದಂತೆ ರಾಜ್ಯದಲ್ಲಿ ಒಂದು ಮನೆಯನ್ನೂ ಮಂಜೂರು ಮಾಡಿಲ್ಲ ಎಂದು ಕಾಂಗ್ರೆಸ್ ಘೋಷಿತ ಅಭ್ಯರ್ಥಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಆರೋಪಿಸಿದ್ದಾರೆ

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2013ರಿಂದ 18ರವರೆಗೆ ರಾಜ್ಯದಲ್ಲಿ ಅಧಿಕಾರ ನಡೆಸಿದ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಶಾಸಕನಾಗಿದ್ದ ನಾನು ಕೆ.ಆರ್. ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದೇನೆ. ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾಮಗಾರಿ ನಡೆಸಲು ಶ್ರಮಿಸಿದ್ದೇನೆ. ಲಲಿತಾದ್ರಿಪುರದಲ್ಲಿ 14 ಎಕರೆ ಜಾಗವನ್ನು ಆಶ್ರಯ ಸಮಿತಿಗೆ ವಹಿಸಿಕೊಡಲಾಗಿತ್ತು ಗೂರೂರು ಮತ್ತು ಮಳಲವಾಡಿಯಲ್ಲಿ ತಲಾ 6 ಎಕರೆ ಜಾಗದಲ್ಲಿ 6500 ಮನೆ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅದಕ್ಕಾಗಿ 2018ರ ಫೆಬ್ರವರಿಯಲ್ಲಿ ಅಂದಿನ ಸರ್ಕಾರ ಜಿಲ್ಲಾಧಿಕಾರಿ ಖಾತೆಗೆ 18 ಕೋಟಿ ರೂ. ಬಿಡುಗಡೆ ಮಾಡಿತ್ತು ಫಲಾನುಭವಿಗಳ ಪಟ್ಟಿಯೂ ಸಿದ್ಧವಾಗಿತ್ತು. ಆದರೆ, ಬಳಿಕ ಏನೂ ಪ್ರಗತಿ ಆಗಲಿಲ್ಲ. 2018ರ ಚುನಾವಣೆಯಲ್ಲಿ ನಾನು ಪರಾಭವಗೊಂಡೆ. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಒಬ್ಬರಿಗೂ ಮನೆ ಕಟ್ಟಿಸಿ ಕೊಡಲಿಲ್ಲ. ಚುನಾವಣೆ ಬರುತ್ತಿದ್ದಂತೆ ಆಶ್ವಾಸನೆ ಪತ್ರವನ್ನು ಮನೆಗಳಿಗೆ ಕಳುಹಿಸಿ ಕೊಡಲಾಗಿದೆ. ಇದು ಜನರಿಗೆ ಮಾಡಿದ ಅನ್ಯಾಯ ಎಂದು ದೂರಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಆಗಿಲ್ಲ. ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರ್ಮ್‌ನಲ್ಲಿ ಬೆಟ್ಟದಂತೆ ಬಿದ್ದಿರುವ ಕಸದ ರಾಶಿಯನ್ನು ತೆರವು ಮಾಡಿಲ್ಲ. ಕಸ ಹಾಕುವ ಸ್ಥಳವನ್ನು ಕೆಸರೆ, ರಾಯನಕೆರೆಗೆ ಸ್ಥಳಾಂತರ ಮಾಡಲು ಸಿದ್ಧತೆ ಮಾಡಲಾಗಿತ್ತು. ಆ ಕೆಲಸವೂ ಆಗಿಲ್ಲ. ಹೀಗೆ ಯಾವುದೇ ಕಾರ್ಯಗಳು ಆಗಿಲ್ಲ. ಈ ಚುನಾವಣೆಯಲ್ಲಿ ಮತ್ತೊಂದು ಅವಕಾಶ ಮಾಡಿಕೊಟ್ಟರೆ ಕ್ಷೇತ್ರದಲ್ಲಿರುವ ವಸತಿರಹಿತ ಎಲ್ಲರಿಗೂ ಮನೆ ಕಟ್ಟಿಸಿಕೊಡಲಾಗುವುದು. ಅಗತ್ಯ ಇರುವ ಕಡೆ ಮೇಲ್ಸೇತುವೆ, ಸಿವೇಜ್ ಫಾರ್ಮ್‌ನಲ್ಲಿರುವ ಕಸ ತೆರವುಗೊಳಿಸಿ ಸ್ವಚ್ಛಗೊಳಿಸಲಾಗುವುದು. 2013ರಿಂದ 2018ರ ವರೆಗೆ ನಾನು ಶಾಸಕನಾಗಿ ಸಾಕಷ್ಟು ಕೆಲಸ ಮಾಡಿರುವೆ. ಅದೇ ರೀತಿ ಅಭಿವೃದ್ಧಿ ದೃಷ್ಟಿಯಲ್ಲಿ ಕೆಲಸವನ್ನು ಮುಂದುವರಿಸಿಕೊಂಡು ಹೋಗುವೆ. ಅಭಿವೃದ್ಧಿ ಎಂದರೆ ಡಾಂಬರ್ ಹಾಕುವುದಲ್ಲ. ನಾನು ಕ್ಷೇತ್ರದಲ್ಲಿ ಹೊಸ ಅಭಿವೃದ್ಧಿ ಕೆಲಸ ಮಾಡಿ ಜನರಿಗೆ ಅನುಕೂಲ ಮಾಡಿಕೊಡಲು ಬದ್ಧನಾಗಿದ್ದೇನೆ ಎಂದರು.

ಕ್ಷೇತ್ರದಿಂದ ಸ್ಪರ್ಧೆ ಬಯಸಿದ್ದ ಪಕ್ಷದ ಇತರ ಆಕಾಂಕ್ಷಿಗಳನ್ನು ಭೇಟಿ ಮಾಡಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟ್ಟಾಗಿ ಮತ ಪ್ರಚಾರ ಮಾಡುತ್ತೇನೆ. ಏ.17ರಂದು ನಾಮಪತ್ರ ಸಲ್ಲಿಸುವೆ. ಅಂದು ಬೆಳಗ್ಗೆ 10ಕ್ಕೆ ಚಾಮುಂಡಿಪುರಂ ವೃತ್ತದಿಂದ ಪಾಲಿಕೆ ಕಚೇರಿವರೆಗೆ ಮೆರವಣಿಗೆ ನಡೆಸಲಾಗುತ್ತದೆ ಎಂದರಲ್ಲದೆ, ಪ್ರಶ್ನೆಯೊಂದಕ್ಕೆ ಉತ್ತರಿಸಿ, ಕ್ಷೇತ್ರದ ಬಿಜೆಪಿ ಟಿಕೆಟ್ ಯಾರಿಗೆ ಎಂಬುದು ಆ ಪಕ್ಷದ ಆಂತರಿಕ ವಿಷಯ. ಯಾರಿಗೆ ಟಿಕೆಟ್ ಕೊಟ್ಟರೂ ಹಿಂಜರಿಕೆ ಇಲ್ಲ ಎಂದು ತಿಳಿಸಿದರು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ಎಂ.ಕೆ.ಸೋಮಶೇಖರ್ ಕಳೆದ ಬಾರಿ ಸೋಲನ್ನೆದುರಿಸಿದರೂ ಮನೆಯಲ್ಲಿ ಸುಮ್ಮನೆ ಕೂರಲಿಲ್ಲ. ಕೋವಿಡ್ ವೇಳೆ ಅತ್ಯಂತ ಮಾನವೀಯತೆಯಿಂದ ಕೈಗೊಂಡ ಕಾರ್ಯ ಎಲ್ಲರಿಗೂ ತಿಳಿದಿದೆ. ಜೊತೆಗೆ ಕಾಂಗ್ರೆಸ್ ಪಕ್ಷ ಈಗಾಗಲೇ ಗ್ಯಾರಂಟಿ ಕಾರ್ಡ್ ಬಿಡುಗಡೆ ಮಾಡಿದೆ. ಈ ಎಲ್ಲ ವಿಷಯ ಇರಿಸಿಕೊಂಡು ಸೋಮಶೇಖರ್ ಚುನಾವಣೆ ಎದುರಿಸಲಿದ್ದಾರೆ. ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದರು. ಗೋಷ್ಠಿಯಲ್ಲಿ ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಸದಸ್ಯೆ ಶೋಭಾ ಸುನೀಲ್, ಮುಖಂಡರಾದ ಪ್ರತಿಷ್ಠಾ ಪ್ರಸಾದ್, ವಿಶ್ವನಾಥ್ ಹಾಗೂ ರಮೇಶ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 17 ಸೋಮವಾರ 2023

ಸಂಪುಟ: 44 | ಸಂಚಿಕೆ: 2 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೆ.ಜಿ.ಕೊಪ್ಪಲು ಪೈಲ್ವಾನರ ಅಖಾಡ 'ಚಾಮರಾಜ!'

ಬಿಜೆಪಿಯ ಎಲ್.ನಾಗೇಂದ್ರ, ಕಾಂಗ್ರೆಸ್‌ನ ಕೆ.ಹರೀಶ್‌ಗೌಡ, ಜೆಡಿಎಸ್‌ನ ಹೆಚ್.ಕೆ.ರಮೇಶ್ ಇದೇ ಗ್ರಾಮದ ಕಲಿಗಳು





ಎಲ್.ನಾಗೇಂದ್ರ ಕೆ.ಹರೀಶ್‌ಗೌಡ ಹೆಚ್.ಕೆ.ರಮೇಶ್

ಮೈಸೂರು,ಏ.16(ಎಸ್‌ಬಿಡಿ)–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ಅಕ್ಷರಶಃ ಕನ್ನೇಗೌಡನಕೊಪ್ಪಲು (ಕೆ.ಜಿ. ಕೊಪ್ಪಲು) ಪೈಲ್ವಾನರ ಅಖಾಡವಾಗಿ, ರಾಜ್ಯದ ಗಮನ ಸೆಳೆದಿದೆ.

ಪ್ರಮುಖ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಒಂದೇ ಗ್ರಾಮದವರನ್ನು ಕಣಕ್ಕಿಳಿಸಿರುವುದು ವಿಶೇಷ. ಬಿಜೆಪಿಯಿಂದ ಹಾಲಿ ಶಾಸಕ ಎಲ್.ನಾಗೇಂದ್ರ 2ನೇ ಬಾರಿ ಸ್ಪರ್ಧೆಗಿಳಿದಿದ್ದಾರೆ. ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಕೆ.ಹರೀಶ್‌ಗೌಡ, ಇದೀಗ ಕಾಂಗ್ರೆಸ್ ಹುರಿಯಾಳಾಗಿ ತೊಡೆ ತಟ್ಟಿದ್ದಾರೆ. ಇನ್ನು ಮಾಜಿ ಶಾಸಕ ಕೆಂಪೇಗೌಡರ ಪುತ್ರ ಹೆಚ್.ಕೆ.ರಮೇಶ್ ಅವರನ್ನು ಜೆಡಿಎಸ್‌ನಿಂದ ಅಖಾಡಕ್ಕಿಳಿಸಲಾಗಿದೆ.

ಕುಸ್ತಿ ಪೈಲ್ವಾನ್‌ಗಳಾದ ಎಲ್.ನಾಗೇಂದ್ರ ಹಾಗೂ ಕೆ.ಹರೀಶ್‌ಗೌಡ ಅವರು ಕೆ.ಜಿ.ಕೊಪ್ಪಲಿನಲ್ಲೇ ಹುಟ್ಟಿ–ಬೆಳೆದವರು. ಹೆಚ್.ಕೆ. ರಮೇಶ್ ಅವರ ಅಜ್ಜಿಯ ಮನೆ(ತಾಯಿಯ ತಾಯಿ) ಇರುವುದು ಕೆ.ಜಿ.ಕೊಪ್ಪಲಿನಲ್ಲಿ. ಹಾಗಾಗಿ ಮೂವರೂ ಒಂದೇ ಗ್ರಾಮದವರಾಗಿದ್ದಾರೆ. ಒಡಹುಟ್ಟಿದವರಾದರೂ ಸ್ಪರ್ಧೆ ಎಂದಾಗ ಅಖಾಡಕ್ಕಿಳಿಯಲು ಸಿದ್ಧ ಎನ್ನುವ ಕ್ರೀಡಾ ಮನೋಭಾವ ಗ್ರಾಮದ ಮಣ್ಣಿನಲ್ಲೇ ಇದೆ. ನಮ್ಮ ಊರಿನವರು ಮೂರೂ ಪಕ್ಷಗಳ ಟಿಕೆಟ್ ಪಡೆದಿರುವ ಖುಷಿಯಲ್ಲಿರುವ ಸ್ಥಳೀಯರು, ಸ್ಪರ್ಧಾತ್ಮಕ ಚುನಾವಣಾ ಜಿದ್ದಾಜಿದ್ದಿಗೂ ಸಜ್ಜಾಗಿದ್ದಾರೆ. ಅಂತಿಮವಾಗಿ ಯಾರೇ ಗೆದ್ದರೂ ಕೆ.ಜಿ. ಕೊಪ್ಪಲು ಕೀರ್ತಿ ಹೆಚ್ಚಲಿದೆ ಎಂಬ ಸಂತಸದಲ್ಲಿದ್ದಾರೆ.

ಮೈಸೂರು ನಗರದ ಹೃದಯ ಭಾಗದಲ್ಲಿರುವ ಕೆ.ಜಿ. ಕೊಪ್ಪಲು, ಈಗಲೂ ಗ್ರಾಮೀಣ ಸೊಗಡನ್ನು ಕಳೆದುಕೊಂಡಿಲ್ಲ. ಹಾಗಾಗಿ ಈಗಲೂ ಗ್ರಾಮವೆಂದೇ ಕರೆಯಲಾಗುತ್ತದೆ. ಹೀಗೆನ್ನುವುದು ಸ್ಥಳೀಯರಿಗೂ ಇಷ್ಟವಾಗುತ್ತದೆ. ಐತಿಹಾಸಿಕ ಹಿನ್ನೆಲೆಯುಳ್ಳ ಕೆ.ಜಿ.ಕೊಪ್ಪಲು ಗ್ರಾಮ, ಎಲ್ಲಾ ಕ್ಷೇತ್ರದಲ್ಲೂ ತನ್ನದೇ ಆದ ಛಾಪು ಮೂಡಿಸಿದೆ. ಮೈಸೂರು ಸಂಸ್ಥಾನದ ರಕ್ಷಣೆಯಲ್ಲೂ ಗ್ರಾಮದ ಕೊಡುಗೆ ಮಹತ್ವದ್ದಾಗಿದೆ. ಕೆ.ಜಿ.ಕೊಪ್ಪಲು ರೈತಾಪಿ ಸಮುದಾಯದವರಿಗೆ ಕೃಷಿಯೇ ಜೀವನಾಧಾರವಾಗಿತ್ತು. ▶ 9ನೇ ಪುಟಕ್ಕೆ

ಯಾರಿಗೆ ವಿಜಯಮಾಲೆ?

ಕೆ.ಪುಟ್ಟಸ್ವಾಮಿ, ಬಿ.ಎನ್.ಕೆಂಗೇಗೌಡ, ಹೆಚ್.ಕೆಂಪೇಗೌಡ, ಕೆ.ಕೆಂಪೀರೇಗೌಡ, ಪಿ.ಎಂ.ಚಿಕ್ಕಬೋರಯ್ಯ, ಕೆ.ಹರ್ಷಕುಮಾರ್‌ಗೌಡ, ಹೆಚ್.ಎಸ್. ಶಂಕರಲಿಂಗೇಗೌಡ, ವಾಸು ಹಾಗೂ ಎಲ್.ನಾಗೇಂದ್ರ(ಹಾಲಿ) ಚಾಮರಾಜ ಕ್ಷೇತ್ರದಲ್ಲಿ ಗೆದ್ದು ಶಾಸಕರಾಗಿದ್ದಾರೆ. ಈ ಬಾರಿ ಬಿಜೆಪಿಯ ನಾಗೇಂದ್ರ, ಕಾಂಗ್ರೆಸ್‌ನ ಕೆ.ಹರೀಶ್‌ಗೌಡ, ಜೆಡಿಎಸ್‌ನ ಹೆಚ್.ಕೆ.ರಮೇಶ್ ನಡುವೆ ತೀವ್ರ ಹಣಾಹಣಿ ನಡೆಯುವ ಸಾಧ್ಯತೆ ನಿಚ್ಚಳವಾಗಿದೆ. ಆಮ್ ಆದ್ಮಿ ಪಕ್ಷದ ಮಾಲವಿಕ ಗುಬ್ಬಿವಾಣಿ ಸೇರಿದಂತೆ ಇತರೆ ಪಕ್ಷಗಳಿಂದ ಹಾಗೂ ಪಕ್ಷೇತರವಾಗಿಯೂ ಅನೇಕರು ಸ್ಪರ್ಧಿಸಬಹುದು. ಆದಾಗ್ಯೂ ಕೆ.ಜಿ.ಕೊಪ್ಪಲು ಪೈಲ್ವಾನರ ನಡುವಿನ ಜಿದ್ದಾಜಿದ್ದಿ ವಿರೋಚಿತವಾಗಿರಲಿದೆ. ಅಂತಿಮವಾಗಿ ಕ್ಷೇತ್ರದ ಜನ ಯಾರಿಗೆ ಆಶೀರ್ವದಿಸುತ್ತಾರೆ, ಯಾರಿಗೆ ವಿಜಯಮಾಲೆ ಒಲಿಯಲಿದೆ ಎನ್ನುವುದಕ್ಕೆ ಮೇ 13ರಂದು ಉತ್ತರ ಸಿಗಲಿದೆ.


ಶಾಸಕ ಸ್ಥಾನಕ್ಕೆ ಶೆಟ್ಟರ್ ರಾಜೀನಾಮೆ

ನಾನಾಗಿ ಬಿಜೆಪಿಯನ್ನು ಬಿಟ್ಟಿಲ್ಲ, ನಮ್ಮನ್ನು ಮನೆಯಿಂದ ಬಲವಂತವಾಗಿ ಹೊರ ಹಾಕಿದ್ದಾರೆ: ಮಾಜಿ ಸಿಎಂ

ಶಿರಸಿ,ಏ.16–ಬಿಜೆಪಿ ಟಿಕೆಟ್ ವಂಚಿತ ಅತೃಪ್ತ ಶಾಸಕರ ರಾಜೀನಾಮೆ ಪರ್ವ ಮುಂದುವರೆದಿದ್ದು, ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಶಾಸಕ ಜಗದೀಶ ಶೆಟ್ಟರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಶಿರಸಿ ಕಚೇರಿಗೆ ಭಾನುವಾರ ತಮ್ಮ ಬೆಂಬಲಿಗರ ಜೊತೆಗೂಡಿ ಬಂದ ಶೆಟ್ಟರ್ ಕಾಗೇರಿ ಜೊತೆ ಕೆಲ ಸಮಯ ಚರ್ಚಿಸಿ ನಂತರ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು. ಶನಿವಾರ ಬಿಜೆಪಿ ಪ್ರಮುಖರು ಸೇರಿ ಹುಬ್ಬಳ್ಳಿಯಲ್ಲಿ ನಡೆಸಿದ ಸಂಧಾನ ವಿಫಲವಾದ ಕಾರಣ ಶೆಟ್ಟರ್ ರಾಜೀನಾಮೆ ಸಲ್ಲಿಸಿದರು.

ಬಲವಂತದಿಂದ ಹೊರ ಹಾಕಿದ್ದು: ನಾನಾಗಿ ಬಿಜೆಪಿಯನ್ನು ಬಿಟ್ಟಿಲ್ಲ, ನಮ್ಮನ್ನು ಮನೆಯಿಂದ ಬಲವಂತವಾಗಿ ಹೊರ ಹಾಕಿದ್ದಾರೆ ಎಂದು ಪಾರ್ಟಿಯ ಶಾಸಕ ಸ್ಥಾನ ಮತ್ತು ಪ್ರಾಥಮಿಕ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರ ಬಂದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಶೆಟ್ಟರ್ ಪ್ರತಿಕ್ರಿಯೆ ನೀಡಿದರು.



ಶಿರಸಿಯಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಶಾಸಕ ಸ್ಥಾನಕ್ಕೆ ಜಗದೀಶ ಶೆಟ್ಟರ್ ಭಾನುವಾರ ರಾಜೀನಾಮೆ ನೀಡಿದರು.

ಇಂದು 'ಕೈ' ವಶ

ಬೆಂಗಳೂರು: ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಜಗದೀಶ ಶೆಟ್ಟರ್ ಅವರು ಬಿಜೆಪಿ ತ್ಯಜಿಸಿ ಸೋಮವಾರ ಬೆಳಗ್ಗೆ 8.15ಕ್ಕೆ ಕಾಂಗ್ರೆಸ್ ಸೇರಲಿದ್ದಾರೆ. ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲಿ ಜಗದೀಶ್ ಶೆಟ್ಟರ್ ಕಾಂಗ್ರೆಸ್ ಸೇರಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಬಳಿಕ ಖರ್ಗೆ ಅವರು ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ನನ್ನ ಬೆಂಬಲಿಗರು, ಕಾರ್ಯಕರ್ತರ ಜೊತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ. ಮೂಲ ಬಿಜೆಪಿಗರನ್ನು ಪಕ್ಷದಿಂದ ಹೊರ ಹಾಕುವ, ಮೂಲೆಗುಂಪು ಮಾಡುವ ಕೆಲಸ ನಡೆಯುತ್ತಿದೆ. ನನಗೆ ಬಿಜೆಪಿ ಮೇಲೆ ಸಿಟ್ಟಿಲ್ಲ, ▶ 10ನೇ ಪುಟಕ್ಕೆ

ಶೆಟ್ಟರ್, ಸವದಿಯನ್ನು ರಾಜ್ಯದ ಜನ ಕ್ಷಮಿಸಲ್ಲ

ಬೆಂಗಳೂರು, ಏ.16– ಪಕ್ಷ ಹಲವು ಅವಕಾಶಗಳು, ಸ್ಥಾನಮಾನಗಳನ್ನು ನೀಡಿದ್ದರೂ ಇಂದು ಪಕ್ಷಕ್ಕೆ ಮರ್ಯಾದೆ, ಗೌರವ ನೀಡದೆ, ಸಿದ್ಧಾಂತವನ್ನು ಮರೆತು ಹೋಗಿರುವುದು ಅಕ್ಷಮ್ಯ ಅಪರಾಧ. ಈ ನಾಡಿನ ಜನತೆ ಜಗದೀಶ್ ಶೆಟ್ಟರ್ ಮತ್ತು ಲಕ್ಷ್ಮಣ್ ಸವದಿಯವರನ್ನು ಕ್ಷಮಿಸುವುದಿಲ್ಲ ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.



ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಬ್ಬರು ನಾಯಕರ ವಿರುದ್ಧವೂ ವಾಗ್ದಾಳಿ ನಡೆಸಿದರು. ಅಲ್ಲದೆ ತಾವು ರಾಜ್ಯದ ಉದ್ದಗಲಕ್ಕೂ ಸಂಚರಿಸಿ ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸಿ ಈ ಬಾರಿ 130ರಿಂದ 140 ಸ್ಥಾನಗಳನ್ನು ಪಡೆದು ಸ್ವಂತ ಬಲದಿಂದ ಅಧಿಕಾರಕ್ಕೆ ತರಲಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಜಗದೀಶ್ ಶೆಟ್ಟರ್ ಅವರು ಜನಸಂಘದ ಕಾಲದಿಂದಲೂ ಬಿಜೆಪಿಯಲ್ಲಿದ್ದರು. ಅವರನ್ನು ಶಾಸಕ, ಮಂತ್ರಿ, ಸಿಎಂ ಮಾಡಿದ್ದೆವು. ಅವರಿಗೆ ನಾನು, ಅನಂತಕುಮಾರ್ ಕಾವಲಾಗಿದ್ದೆವು. ನನ್ನ ಜತೆ ಹೆಜ್ಜೆ ಹಾಕುವ ಜವಾಬ್ದಾರಿ ಶೆಟ್ಟರ್‌ಗೆ ಇತ್ತು. ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಜಗತ್ತಿನಾದ್ಯಂತ ಗೌರವ ಇದೆ. ಇಂಥ ಸಂದರ್ಭದಲ್ಲಿ ಶೆಟ್ಟರ್ ಹೇಳಿಕೆ, ▶ 10ನೇ ಪುಟಕ್ಕೆ

ಕಾಂಗ್ರೆಸ್ ಶಾಸಕ ಅಖಂಡ ರಾಜೀನಾಮೆ

ಶಿರಸಿ, ಏ.16– ಬೆಂಗಳೂರಿನ ಪುಲಿಕೇಶಿ ನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸ್ಥಾನಕ್ಕೆ ಅಖಂಡ ಶ್ರೀನಿವಾಸಮೂರ್ತಿ ಭಾನುವಾರ ರಾಜೀನಾಮೆ ಸಲ್ಲಿಸಿದರು. ಉತ್ತರಕನ್ನಡ ಜಿಲ್ಲೆ ಶಿರಸಿಯಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿಯಾಗಿ, ಶಾಸಕ ಸ್ಥಾನಕ್ಕೆ ತಮ್ಮ ▶ 9ನೇ ಪುಟಕ್ಕೆ



ವಿರಾಜಪೇಟೆ ಬಳಿ ಗುಂಡಿಕ್ಕಿ ಕೈಗಾರಿಕೋದ್ಯಮಿ ಹತ್ಯೆ

ಮರ ಕಡಿಯುವುದನ್ನು ಆಕ್ಷೇಪಿಸಿದ್ದಕ್ಕೆ ಮೂವರಿಂದ ಈ ದುಷ್ಕೃತ್ಯ ಶಂಕೆ

ವಿರಾಜಪೇಟೆ,ಏ.16–ಅಕ್ರಮವಾಗಿ ಮರ ಕಡಿಯುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೈಗಾರಿಕೋದ್ಯಮಿಯೊಬ್ಬರನ್ನು ಗುಂಡಿಟ್ಟು ಹತ್ಯೆಗೈದ ಘಟನೆ ವಿರಾಜಪೇಟೆ ತಾಲೂಕು ತೋರ ಗ್ರಾಮದ ಪಡಚಿಕಾಡು ಎಂಬಲ್ಲಿ ಶನಿವಾರ ಮಧ್ಯರಾತ್ರಿ ನಡೆದಿದೆ.

ಮೂಲತಃ ತೋರ ಗ್ರಾಮದವರಾಗಿದ್ದು, ಬೆಂಗಳೂರಿನ ನಾಗರಬಾವಿಯಲ್ಲಿ ವಾಸವಿದ್ದು, ಸಣ್ಣ ಪ್ರಮಾಣದ ಕೈಗಾರಿಕೋದ್ಯಮ ನಡೆಸುತ್ತಿದ್ದ ಬಿ.ಎಸ್. ಮಧು(44) ಹತ್ಯೆಗೀಡಾದವರಾಗಿದ್ದು, ಸ್ವಗ್ರಾಮಕ್ಕೆ ಬಂದಿದ್ದ ಇವರು, ತಮ್ಮ ಸ್ನೇಹಿತನ ಮನೆಯಲ್ಲಿ ಆಚರಿಸಲ್ಪಟ್ಟ ವಿಶು (ಮಲಯಾಳಿಗಳ ಯುಗಾದಿ) ಹಬ್ಬದ ಊಟ ಮುಗಿಸಿ, ರಾತ್ರಿ 12 ಗಂಟೆ ಸುಮಾರಿನಲ್ಲಿ ಮನೆಗೆ ತೆರಳಲು ಕಾರಿನ ಬಳಿ ಬರುತ್ತಿದ್ದಂತೆಯೇ ದುಷ್ಕರ್ಮಿಗಳು ಅವರ ಮೇಲೆ ಗುಂಡು ಹಾರಿಸಿ, ಹತ್ಯೆಗೈದಿದ್ದಾರೆ.

ವಿವರ: ಉದ್ಯಮಿ ಮಧು ಬೆಂಗಳೂರಿನಲ್ಲಿ ವಾಸವಿದ್ದರೂ ಅವರು ತಂದೆ ಬೈಮನ ನಾಣಯ್ಯ ಮತ್ತು ತಾಯಿ ಸ್ವಗ್ರಾಮ ತೋರದಲ್ಲೇ ವಾಸವಿದ್ದಾರೆ. ಮಧು ಅವರು ಆಗಿಂದಾಗ್ಗೆ ಸ್ವಗ್ರಾಮಕ್ಕೆ ಬಂದು ▶ 9ನೇ ಪುಟಕ್ಕೆ



ಬಿ.ಎಸ್.ಮಧು

ಸಿದ್ದರಾಮಯ್ಯ ಹಠದಿಂದಲೋ ಇಲ್ಲವೇ ಚಟದಿಂದಲೋ ನನಗೆ ಟಿಕೆಟ್ ಕೈ ತಪ್ಪಿದೆ!

■ 2018ರ ನನ್ನ ಸೋಲಿಗೆ ಈಗ ಟಿಕೆಟ್ ಕೈ ತಪ್ಪಲು ಸಿದ್ದರಾಮಯ್ಯರೇ ಕಾರಣ ■ ಮೈಸೂರಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾಜಿ ಶಾಸಕ, ಕಾಂಗ್ರೆಸ್ ಟಿಕೆಟ್ ವಂಚಿತ ವಾಸು ತೀವ್ರ ವಾಗ್ದಾಳಿ ■ ನಮ್ಮಲ್ಲಿ ಕಾಂಗ್ರೆಸ್ ಪರಿಸ್ಥಿತಿ ಹುಲಿ ಬಾಯಿಗೆ ಸಿಕ್ಕಿಹಾಕಿಕೊಂಡಿರುವ ಮಗುವಿನಂತಾಗಿದೆ ■ ನನಗೆ ಅನ್ಯಾಯ ಮಾಡಿದವರಿಗೆ ಬುದ್ಧಿ ಕಲಿಸುವ ಶಕ್ತಿ ನನಗಿದೆ; ನನ್ನ ಧ್ವನಿ ಅಡಗಿಸಲು ಸಾಧ್ಯವಿಲ್ಲ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ವಾಸು ಮಾತನಾಡಿದರು.

ಇನ್ನೆರಡು ದಿನದಲ್ಲಿ ನಿರ್ಧಾರ ಪ್ರಕಟ

ನಾನು ಪಕ್ಷ ಬಿಡುವುದಿಲ್ಲ. ಟಿಕೆಟ್ ಸಿಗದಿರುವುದಕ್ಕೆ ಧೃತಿಗೆಡುವುದಿಲ್ಲ. ನಾನು ಪಕ್ಷ ತೊರೆದರೆ ನನ್ನನ್ನು ನಂಬಿರುವ ಅಪಾರ ಸಂಖ್ಯೆಯ ಬೆಂಬಲಿಗರಿಗೆ ತೊಂದರೆ ಮಾಡಿದಂತಾಗುತ್ತದೆ. ಅನ್ಯ ಪಕ್ಷಗಳ ಮುಖಂಡರು ನನ್ನನ್ನು ಸಂಪರ್ಕಿಸಿ, ಪಕ್ಷಕ್ಕೆ ಆಹ್ವಾನಿಸಿದ್ದಾರೆ. ಅಲ್ಲದೆ ಕೆಲವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆಯೂ ಮನವಿ ಮಾಡಿದ್ದಾರೆ. ಆದರೆ, ನನ್ನ ಅಭಿಮಾನಿಗಳು, ಹಿತೈಷಿಗಳೊಂದಿಗೆ ಚರ್ಚಿಸಿ ಇನ್ನೆರಡು ದಿನದಲ್ಲಿ ನನ್ನ ನಿರ್ಧಾರ ಪ್ರಕಟಿಸುತ್ತೇನೆ. ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕೋ, ಬೇರೆ ಪಕ್ಷದಿಂದ ಕಣಕ್ಕಿಳಿಯಬೇಕೋ ಅಥವಾ ತಟಸ್ಥವಾಗಿರಬೇಕೋ ಎಂಬುದನ್ನು ತಿಳಿಸುತ್ತೇನೆ. -ವಾಸು, ಮಾಜಿ ಶಾಸಕ

ಮೈಸೂರು, ಏ.16 (ಎಂಟಿವೈ)–2018ರ ವಿಧಾನಸಭಾ ಚುನಾವಣೆಯಲ್ಲಿ ನನ್ನ ಸೋಲು ಹಾಗೂ ನನಗೆ ಈಗ ಚಾಮರಾಜ ಕ್ಷೇತ್ರದ ಟಿಕೆಟ್ ಕೈ ತಪ್ಪಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರೇ ಕಾರಣ ಎಂದು ಮಾಜಿ ಶಾಸಕ ವಾಸು ಕಿಡಿಕಾರಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ವಿಚಾರ ಅನಿರೀಕ್ಷಿತ ಬೆಳವಣಿಗೆಯಾಗಿದೆ. ಜಿಲ್ಲಾ ಸಮಿತಿ, ರಾಜ್ಯ ಸಮಿತಿ ಹಾಗೂ ರಾಷ್ಟ್ರೀಯ ಸಮಿತಿ ನನ್ನ ಪರವಾಗಿದ್ದರೂ ಮಾಜಿ ಸಿಎಂ ಸಿದ್ದರಾಮಯ್ಯ ಹಠದಿಂದಲೋ ಅಥವಾ ಚಟದಿಂದಲೋ ನನಗೆ ಟಿಕೆಟ್ ತಪ್ಪಿದೆ. 2013ರಲ್ಲಿ ಶಾಸಕನಾಗಿದ್ದಾಗ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲೇ ಹೆಚ್ಚು ಅನುದಾನವನ್ನು ಚಾಮರಾಜ ಕ್ಷೇತ್ರಕ್ಕೆ ತಂದು ಆಸ್ಪತ್ರೆ, ಕಾಲೇಜು ಕಟ್ಟಡ ನಿರ್ಮಿಸಲು ಶ್ರಮಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಮುಖ್ಯಮಂತ್ರಿಗಳ ಬಳಿ ಒಂದು ವರ್ಗಾವಣೆ ಸೇರಿದಂತೆ ಯಾವುದೇ ವೈಯಕ್ತಿಕ ಕೆಲಸ ಮಾಡಿಸಿಕೊಂಡಿಲ್ಲ. ಯಾರಿಗೂ ಶಿಫಾರಸ್ಸು ಪತ್ರ ನೀಡಿಲ್ಲ. ಆದರೂ, ನನಗೆ ಈಗ ಟಿಕೆಟ್ ಕೈತಪ್ಪಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನನಗೂ ಹಾಗೂ ಸಿದ್ದರಾಮಯ್ಯ ಅವರಿಗೂ ಹಲವು ವರ್ಷದಿಂದ ಹಗೆತನವಿದೆ. ನಾನು ಸಾಕಷ್ಟು ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ತಪ್ಪು ನಿರ್ಧಾರವನ್ನು ನೇರವಾಗಿಯೇ ಖಂಡಿಸಿದ್ದೇನೆ. ಕಟುವಾಗಿ, ನಿಷ್ಠುರವಾಗಿ ಮಾತಾಡಿದ್ದರಿಂದಲೇ ನನಗೆ ಟಿಕೆಟ್ ಕೈ ತಪ್ಪಿದೆ. ಸಿದ್ದರಾಮಯ್ಯ ಅವರ ಹಗೆತನಕ್ಕೆ ಹಲವರು ಬಲಿಯಾಗಿದ್ದಾರೆ. ಅಕ್ಕಪಕ್ಕದವರು ಹೇಳುವುದನ್ನು ಕೇಳುವ ಗುಣ ಅವರಿಗಿದೆ. ವೈಯಕ್ತಿಕವಾಗಿ ಅವರಿಂದ ಕಿಂಚಿತ್ ಲಾಭ ಪಡೆದಿಲ್ಲ. ನನ್ನಿಂದ ಅವರಿಗೆ ಅನುಕೂಲವಾಗಿದೆ. ಅವರಿಗೂ ಕೋಲಾರ ಟಿಕೆಟ್ ತಪ್ಪಲಿಲ್ಲವೇ? ರಾಜಕಾರಣ ಇಲ್ಲದಿದ್ದರೆ ಅವರು ನಿರುದ್ಯೋಗಿ. ನಾನು ಟಿಕೆಟ್ ಸಿಗದ ಮಾತ್ರಕ್ಕೆ ನಿರುದ್ಯೋಗಿಯಾಗಲಾರೆ. ನನಗೆ ಸಮಾಜ ಸೇವೆ ಮಾಡುವುದಕ್ಕೆ ಸಾಕಷ್ಟು ದಾರಿಗಳಿವೆ ಎಂದು ವಾಸು ವಾಗ್ದಾಳಿ ನಡೆಸಿದರು.

ಎಲ್ಲಾ ಪಕ್ಷಗಳಲ್ಲೂ ಗೆಲ್ಲಿಸುವ ನಾಯಕನಿಗಿಂತ ಸೋಲಿಸುವವರನ್ನು ಕಂಡರೆ ಹೆದರಿಕೆ ಜಾಸ್ತಿ. ಅದಕ್ಕೆ ಬಹುತೇಕರು ಜೀತದಾಳಂತೆ ಇರುತ್ತಾರೆ. ಇಲ್ಲಿ ಕಾಂಗ್ರೆಸ್ ಪರಿಸ್ಥಿತಿ ಹುಲಿ ಬಾಯಿಗೆ ಸಿಕ್ಕಿಕೊಂಡಿರುವ ಮಗುವಿನಂತಾಗಿದೆ. ಅದರಿಂದ ಸೂಕ್ಷ್ಮವಾಗಿ ಬಿಡಿಸಿಕೊಳ್ಳಬೇಕು. ಇಲ್ಲದಿದ್ದರೆ ಮಗುವಿಗೆ ಸಮಸ್ಯೆಯಾಗುತ್ತದೆ. ಇಂತಹ ಕೃತ್ಯದಿಂದ ಅಮಾಯಕರು ▶ 9ನೇ ಪುಟಕ್ಕೆ



ವ್ಯವಸ್ಥಿತವಾಗಿ ಚುನಾವಣಾ ಕಾರ್ಯ ನಿರ್ವಹಿಸಿ

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ನಿರ್ದೇಶನ



ಮಡಿಕೇರಿ,ಏ.16– ವಿಧಾನಸಭಾ ಚುನಾವಣೆ ಸಂಬಂಧ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಮಾಡದೆ ವ್ಯವಸ್ಥಿತವಾಗಿ ಚುನಾವಣಾ ಕಾರ್ಯ ನಿರ್ವಹಿಸುವಂತೆ ಮತಗಟ್ಟೆ ಅಧಿಕಾರಿಗಳು ಮತ್ತು ಸಹಾಯಕ ಮತಗಟ್ಟೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಬಿ.ಸಿ.ಸತೀಶ ಅವರು ನಿರ್ದೇಶನ ನೀಡಿದ್ದಾರೆ.

ನಗರದ ಸಂತ ಜೋಸೆಫರ ಕಾಲೇಜಿನಲ್ಲಿ ಪಿಆರ್‌ಓ ಮತ್ತು ಎಪಿಆರ್‌ಗಳಿಗೆ ಭಾನುವಾರ ನಡೆದ ಚುನಾವಣಾ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಜಿಲ್ಲಾಧಿಕಾರಿ ಅವರು ಮಾತನಾಡಿದರು.

ಚುನಾವಣಾ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಯಾವುದೇ ರೀತಿಯ ಆತಂಕ ಅಥವಾ ಭಯ ಪಡಬಾರದು, ಚುನಾವಣಾ ಆಯೋಗದ ನಿರ್ದೇಶನದಂತೆ ವಿದ್ಯುನ್ಮಾನ ಮತಯಂತ್ರ, ವಿವಿಪ್ಯಾಟ್ ಮತ್ತಿತರ ಬಗ್ಗೆ ಮಾಹಿತಿ ಪಡೆದು ವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಅವರು ಸೂಚಿಸಿದರು. ಚುನಾವಣೆಗೆ ನಿಯೋಜಿಸಿರುವ ಎಲ್ಲಾ ಹಂತದ ಅಧಿಕಾರಿಗಳಿಗೆ ಅಂಚೆ ಮತದಾನಕ್ಕೆ ಅವಕಾಶವಿದ್ದು, ನಮೂನೆಯನ್ನು ವಿತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಹೇಳಿದರು.

ಚುನಾವಣೆ ಸಂಬಂಧ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಾಗಾರದಲ್ಲಿ ಪಿಆರ್‌ಓ, ಎಪಿಆರ್‌ಓ ಹಾಗೂ ಸೆಕ್ಟರ್ ಅಧಿಕಾರಿಗಳಿಂದ ಹಲವು ಮಾಹಿತಿ ಪಡೆದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಮಾತನಾಡಿ, ವಿಧಾನಸಭಾ ಚುನಾವಣೆಗೆ ನಿಯೋಜನೆ ಆಗಿರುವ ಮತಗಟ್ಟೆ ಅಧಿಕಾರಿಗಳು ಹಾಗೂ ಸಹಾಯಕ ಮತಗಟ್ಟೆ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಿಳಿದು ಕರ್ತವ್ಯ ನಿರ್ವಹಿಸಬೇಕು. ಸಂಶಯ ಇದ್ದಲ್ಲಿ ಸೆಕ್ಟರ್ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಿಕೊಳ್ಳಬೇಕು ಎಂದರು.

ಮಾಸ್ಟರ್ ತರಬೇತಿದಾರ ಕೆ.ಜೆ.ದಿವಾಕರ ಮಾತನಾಡಿ, ಚುನಾವಣಾ ಆಯೋಗ ನೀಡಿರುವ ಮಾರ್ಗಸೂಚಿಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಯಾವುದೇ ಗೊಂದಲಗಳಿಗೆ ಅವಕಾಶ ಆಗುವುದಿಲ್ಲ, ಆ ನಿಟ್ಟಿನಲ್ಲಿ ಆತ್ಮವಿಶ್ವಾಸ ಇರಬೇಕು, ಆದರೆ ಅತಿಯಾದ ಆತ್ಮವಿಶ್ವಾಸವೂ ಬೇಡ ಎಂದು ದಿವಾಕರ ಅವರು ನುಡಿದರು.'

ವಿದ್ಯುನ್ಮಾನ ಮತಯಂತ್ರಗಳ ನಿರ್ವಹಣೆ, ಅಣಕು ಮತದಾನ ಮತ್ತಿತರ ಸಂಬಂಧ ಮತಗಟ್ಟೆ ಅಧಿಕಾರಿಗಳು ಜಾಗೃತಿ ವಹಿಸಬೇಕು. ಚುನಾವಣಾ ಪಾವಿತ್ರ್ಯತೆ ಕಾಪಾಡಬೇಕು ಎಂದು ಕೆ.ಜೆ.ದಿವಾಕರ ಹೇಳಿದರು.

ಮತ್ತೊಬ್ಬ ಮಾಸ್ಟರ್ ತರಬೇತಿದಾರ ಕೆ.ಸಿ.ದಯಾನಂದ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿ, ಏಜೆಂಟ್ ಅವರು ಚುನಾವಣೆ ಸಂಬಂಧ ಆಯೋಗದ ನಿರ್ದೇಶನ ಪಾಲಿಸಬೇಕು ಎಂದರು.

ತಹಸೀಲ್ದಾರ ಕಿರಣ್ ಜಿ.ಗೌರಯ್ಯ, ಎಸ್.ಎನ್.ನರಗುಂದ, ಟಿ.ಎಂ.ಪ್ರಕಾಶ್, ಚುನಾವಣಾ ತಹಸೀಲ್ದಾರ್ ರವಿಕುಮಾರ್, ಶಾಲ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ರಂಗಧಾಮಯ್ಯ, ಸೆಕ್ಟರ್ ಅಧಿಕಾರಿಗಳು, ಪಿಆರ್‌ಓ, ಎಪಿಆರ್‌ಓ, ಇತರರು ಇದ್ದರು.

ಸಿಎನ್‌ಸಿಯಿಂದ ಎಡಮ್ಯಾರ್ ಆಚರಣೆ



ಮಡಿಕೇರಿ,ಏ.16– ಕೊಡವ ಹೊಸ ವರ್ಷಾಚರಣೆ ಎಡಮ್ಯಾರ್ ಒಂದ್‌ರ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಬೆಟ್ಟತ್ತೂರು ಗ್ರಾಮದ ಕೂಪದಿರ ಮೋಹನ್ ಅವರ ಗದ್ದೆಯಲ್ಲಿ ಉಳುಮೆ ಕಾರ್ಯ ಮಾಡಿ ಭೂದೇವಿಗೆ ನಮಿಸಿತು. ದೇವಟ್ ಪರಂಬುವಿನ ಕೊಡವ ನರಮೇಧದ ಸ್ಮಾರಕದಲ್ಲಿ ಪುಷ್ಪ ನಮನ ಸಲ್ಲಿಸಿ ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆ ಆವರಣದಲ್ಲಿ ಹತ್ಯೆಗೀಡಾದ ಕೊಡವರ ಪರವಾಗಿ ಪ್ರಾರ್ಥಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಎತ್ತುಗಳ ಸಹಾಯದಿಂದ ಗದ್ದೆಯನ್ನು ಸಾಂಪ್ರದಾಯಿಕವಾಗಿ ಉಳುಮೆ ಮಾಡಿದರು. ಕೊಡವ ಸಾಂಪ್ರದಾಯಿಕ ಆಚರಣೆಗಳು ಭೂತಾಯಿಯ ಮಣ್ಣಿನೊಂದಿಗೆ ಕೊಡವ ಬುಡಕಟ್ಟಿನ ಅವಿನಾಭಾವ ಬಂಧವನ್ನು ಪ್ರದರ್ಶಿಸುತ್ತದೆ ಎಂದು ಅವರು ಇದೇ ಸಂದರ್ಭ ಹೇಳಿದರು. ಬುಡಕಟ್ಟು ಜನಾಂಗವಾಗಿರುವ ಕೊಡವರ ಮೂಲ ಸಂಸ್ಕೃತಿಯನ್ನು ಸಂರಕ್ಷಿಸಲು ಈ ರೀತಿಯ ಆಚರಣೆಗಳು ಸಾರ್ವಜನಿಕವಾಗಿ ನಡೆಯಬೇಕು. ಕೊಡವ ಸಂಪ್ರದಾಯವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಸಿಎನ್‌ಸಿ ಮಾಡುತ್ತಿದೆ ಎಂದರು.

ಕೂಪದಿರ ಮೋಹನ್, ಕೂಪದಿರ ಗಂಗಮ್ಮ, ಕೂಪದಿರ ತಂಗಮ್ಮ, ಕೂಪದಿರ ಕಾವೇರಮ್ಮ, ಕೂಪದಿರ ರೋಶನ್, ಕೂಪದಿರ ಎನ್.ದಿಲೀಪ್, ಕೂಪದಿರ ಮನು ದೇವಯ್ಯ, ಕೂಪದಿರ ಸಾಬು ತಿಮ್ಮಯ್ಯ, ಕೂಪದಿರ ಪ್ರಣಾವ್, ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಚರಸ್, ಗಾಂಜಾ ವಶ: ನಾಲ್ವರ ಬಂಧನ



ಮಡಿಕೇರಿ, ಏ.16– ಅಕ್ರಮವಾಗಿ ಸಾಗಿಸಲಾಗುತ್ತಿದ್ದ 10 ಗ್ರಾಂ ಚರಸ್ ಹಾಗೂ 35 ಗ್ರಾಂ ಗಾಂಜಾವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ಕಾರ್ಮಾಡು ಚೆಕ್‌ಪೋಸ್ಟ್ ಬಳಿ ನಡೆದಿದೆ.

ವಿರಾಜಪೇಟೆ ಉಪ ವಿಭಾಗ ಕಚೇರಿಯ ಅಬಕಾರಿ ಉಪ ಅಧೀಕ್ಷಕ ಎಂ.ಎನ್. ನಟರಾಜು ಹಾಗೂ ಸಿಬ್ಬಂದಿಗಳಾದ ಎನ್.ಜಿ. ಮದನ್‌ಕುಮಾರ್, ಅಬಕಾರಿ ಕಾನ್ಸ್‌ಟೇಬಲ್ ಸುತೋಷ್ ಹಾಗೂ ವಾಹನ ಚಾಲಕ ಅರ್ದನ್ ಅವರೊಂದಿಗೆ ವಿಧಾನಸಭಾ ಚುನಾವಣೆ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿಯಾದ ಸಂತೋಷ್ ಕುಮಾರ್ ಹಾಗೂ ಅರಣ್ಯ ಇಲಾಖಾ ಸಿಬ್ಬಂದಿಯಾದ ಉದಯ್‌ಕುಮಾರ್ ಅವರುಗಳೊಂದಿಗೆ ಕಾರ್ಮಾಡು ಚೆಕ್‌ಪೋಸ್ಟ್ ಬಳಿ ವಾಹನ ತಪಾಸಣೆ ನಡೆಸುತ್ತಿದ್ದರು.

ಈ ಸಂದರ್ಭ ಆಂಧ್ರಪ್ರದೇಶ ನೋಂದಣಿ ಸಂಖ್ಯೆ ಹೊಂದಿದ್ದ ಕಾರು ಚೆಕ್ ಪೋಸ್ಟ್ ಬಳಿ ಆಗಮಿಸಿದ್ದು ಅದನ್ನು ತಪಾಸಣೆ ನಡೆಸಿದ ಸಂದರ್ಭ 10 ಗ್ರಾಂ ಚರಸ್ ಮತ್ತು 35 ಗ್ರಾಂ ಗಾಂಜಾ ಇರುವುದು ಪತ್ತೆಯಾಗಿದೆ. ಮಾತ್ರವಲ್ಲದೇ ಕಾರಿನಲ್ಲಿದ್ದ ಆರೋಪಿಗಳಾದ ತುಮ್ಮಪ್ನ ಸರ್ಕಾರ್, ಬೀಬವ್ ಸಿಂಗ್, ದೇವಾಂಸ್ ಶರ್ಮಾ ಹಾಗೂ ಆದಿತ್ಯ ಕುಮಾರ್ ಎಂಬವರನ್ನು ಬಂಧಿಸಿ ಇವರ ವಿರುದ್ಧ ಎನ್.ಡಿ.ಪಿ.ಎಸ್ ಕಾಯ್ದೆಯ ಪ್ರಕಾರ ಪ್ರಕರಣ ದಾಖಲಿಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಂದು ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಡಾ.ಮಂಥರ್ ಗೌಡ ನಾಮಪತ್ರ ಸಲ್ಲಿಕೆ


ಬೋಪಯ್ಯ


ಅಪ್ಪಚ್ಚು ರಂಜನ್


ಡಾ.ಮಂಥರ್ ಗೌಡ

ಮಡಿಕೇರಿ, ಏ.16– ಸೋಮವಾರ ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಹಾಲಿ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್‌ಗೌಡ ನಾಮಪತ್ರ ಸಲ್ಲಿಸಲಿದ್ದಾರೆ. ವಿರಾಜಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಜಿ.ಬೋಪಯ್ಯ, ಪಕ್ಷದ ಪ್ರಮುಖರು ಮತ್ತು ತಮ್ಮ ಬೆಂಬಲಿಗರೊಂದಿಗೆ ಬೆಳಗ್ಗೆ 9.30 ಗಂಟೆಗೆ ವಿರಾಜಪೇಟೆ ಶ್ರೀಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ತೆಲುಗರ ಬೀದಿಯ ಮಾರಿಯಮ್ಮ ದೇವಾಲಯದಿಂದ ಮೆರವಣಿಗೆ ಮೂಲಕ ತೆರಳಿ ಬೆಳಗ್ಗೆ 10 ಗಂಟೆಗೆ ವಿರಾಜಪೇಟೆ ಕ್ಷೇತ್ರ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಲಿದ್ದಾರೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಪಿ. ಅಪ್ಪಚ್ಚು ರಂಜನ್, ನಗರದ ಮಹದೇವಪೇಟೆಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಲಿದ್ದು, ಬಳಿಕ ಬಿಜೆಪಿ ಕಾರ್ಯಕರ್ತರೊಂದಿಗೆ ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದವರೆಗೆ ಮೆರವಣಿಗೆ ತೆರಳಿ, ಮಧ್ಯಾಹ್ನ 12 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ.

ಮಡಿಕೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಬೆಳಗ್ಗೆ 12.15 ಗಂಟೆಗೆ ಚೌಡೇಶ್ವರಿ ದೇವಾಲಯದಿಂದ ಮೆರವಣಿಗೆ ತೆರಳಿ ನಂತರ ನಾಮಪತ್ರ ಸಲ್ಲಿಸಲಿದ್ದಾರೆ. ಮಧ್ಯಾಹ್ನ 1.30ರಿಂದ ಗಾಂಧಿ ಮೈದಾನದಲ್ಲಿ ಕಾಂಗ್ರೆಸ್ ಸಮಾವೇಶ ನಡೆಯಲಿದ್ದು, ಸಂಜೆ 4 ಗಂಟೆಯವರೆಗೆ ನಡೆಯಲಿರುವ ಸಮಾವೇಶದಲ್ಲಿ ಡಿ.ಕೆ.ಶಿವಕುಮಾರ್ ಭಾಗಿಯಾಗಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ಪ್ರಮುಖರು ತಿಳಿಸಿದ್ದಾರೆ.

ಶಾಸಕ ಸಿ.ಎಸ್.ಪುಟ್ಟರಾಜು ಬಿರುಸಿನ ಪ್ರಚಾರ



ಚಿನಕುರಳಿ, ಏ.16– ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಪಾಂಡವಪುರ ತಾಲೂಕಿನ ಮಲ್ಲಿಗೆರೆ, ಹಳೇಸಾಯಪನಹಳ್ಳಿ ಗ್ರಾಮದಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಮಲ್ಲಿಗೆರೆಗೆ ಆಗಮಿಸಿದ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಗ್ರಾಮಸ್ಥರು, ಮಹಿಳೆಯರು ಪೂರ್ಣಕುಂಭ, ಕಲಾ ತಂಡಗಳ ಮೆರವಣಿಗೆಯೊಂದಿಗೆ ಹೂ ಮಳೆ ಸುರಿಸಿ, ಕ್ರೇನ್ ಮೂಲಕ ಬೃಹತ್ ಸೇಬಿನ ಹಾಕಿ ಅದ್ಧೂರಿಯಾಗಿ ಸ್ವಾಗತಿಸಿದರು. ಬಳಿಕ ಗ್ರಾಮದ ಶ್ರೀಲಕ್ಷ್ಮಿದೇವಿ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ಸಿಎಸ್‌ಪಿ ಗ್ರಾಮದ ಅಂಬೇಡ್ಕರ್ ಭವನಕ್ಕೆ ತೆರಳಿ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಬಳಿಕ ಹಳೇ ಸಾಯಪನಹಳ್ಳಿ ಗ್ರಾಮಕ್ಕೆ ತೆರಳಿ ಗ್ರಾಮದ ಶ್ರೀಮಾರಮ್ಮ ದೇವಿಗೆ ಪೂಜೆ ಸಲ್ಲಿಸಿ ಪ್ರಚಾರ ನಡೆಸಿದರು.

ಸಿ.ಎಸ್.ಪುಟ್ಟರಾಜು ಮಾತನಾಡಿ, ನಿಮ್ಮೆಲ್ಲರ ಆಶೀರ್ವಾದದಿಂದ ಶಾಸಕ, ಸಚಿವನಾಗಿ ಕೆಲಸ ಮಾಡಿದ್ದೇನೆ. ಮಲ್ಲಿಗೆರೆ ಗ್ರಾಮದಲ್ಲಿದ್ದ ಮಲ್ಲಿಗೆರೆ ಏತ ನೀರಾವರಿಯನ್ನು 26 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಯಿತು. ಅಲ್ಲದೇ ಕೆಆರ್‌ಎಸ್‌ನಲ್ಲಿ 90 ಅಡಿ ನೀರಿದ್ದರೂ ಈ ಭಾಗದ 27ಕ್ಕೂ ಹೆಚ್ಚು ಕೆರೆ ತುಂಬಿಸುವ ಮೂಲಕ ಕೃಷಿಗೆ ಅನುಕೂಲ ಮಾಡಿಕೊಟ್ಟಿದ್ದೇನೆ. ಗ್ರಾಮದ ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿದ್ದೇನೆ. ಅಲ್ಲದೇ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದ ಜನತೆ ಈ ಚುನಾವಣೆಯಲ್ಲಿ ನನಗೆ ಆಶೀರ್ವದಿಸುವ ಮೂಲಕ ಮತ್ತೊಮ್ಮೆ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಏ.18ರಂದು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತಿದ್ದೇನೆ. ಹಾಗಾಗಿ ಹೆಚ್ಚಿನ ಮತದಾರರು, ಕಾರ್ಯಕರ್ತರು ಆಗಮಿಸಿ ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್‌ಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಸದಸ್ಯ ರವಿ, ಮಾಜಿ ಅಧ್ಯಕ್ಷರಾದ ಎಂ.ಎಸ್.ರವಿಕು, ಚಂದ್ರೇಗೌಡ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ಎಸ್.ಜಗದೀಶ್ ಸೇರಿದಂತೆ ಹಲವಾರು ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ವಿರೋಧಿಗಳಿಂದ ನನ್ನ ವಿರುದ್ಧ ಅಪಪ್ರಚಾರ: ಕಿಡಿ

ಮಳವಳ್ಳಿ, ಏ.16– ನಾನು ಕಾಂಗ್ರೆಸ್ ಪಕ್ಷದವರಿಗೆ ಬುಕ್ ಆಗಿದ್ದೇನೆ ಎಂದು ವಿರೋಧಿಗಳು ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದು, ಅಂತಹ ನೀಚ ಕೆಲಸವನ್ನು ಎಂದಿಗೂ ಮಾಡುವುದಿಲ್ಲ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಿ.ಮುನಿರಾಜು ಸ್ಪಷ್ಟಪಡಿಸಿದ್ದಾರೆ.

ಪಟ್ಟಣದ ಶಾಂತಿ ಭವನದಲ್ಲಿ ಆಯೋಜಿಸಿದ್ದ ಬೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಸೋಲಿನ ಭೀತಿಯಿಂದ ಕಾಂಗ್ರೆಸ್‌ನವರು ಇಂತಹ ಅಪಪ್ರಚಾರ ನಡೆಸುತ್ತಿದ್ದು, ವಿರೋಧಿಗಳನ್ನೇ ಬುಕ್ ಮಾಡುವ ಶಕ್ತಿ ಇರುವ ನನ್ನನ್ನು ಬೇರೆಯವರು ಬುಕ್ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ಕ್ಷೇತ್ರದ ಜನತೆ ಈ ಬಾರಿ ಬದಲಾವಣೆ ಬಯಸುತ್ತಿರುವುದರಿಂದ ಈ ಚುನಾವಣೆಯಲ್ಲಿ ನನ್ನ ಗೆಲುವು ನಿಶ್ಚಿತ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಬಿಜೆಪಿ ಉಸ್ತುವಾರಿ ಸತೀಶ್, ಬಿಜೆಪಿ ಪ್ರಕೋಷ್ಠಗಳ ಜಿಲ್ಲಾ ಸಂಚಾಲಕ ಅಶೋಕ್ ಕುಮಾರ್, ತಾಲೂಕು ಬಿಜೆಪಿ ಅಧ್ಯಕ್ಷ ಕೃಷ್ಣ, ಪ್ರಧಾನ ಕಾರ್ಯದರ್ಶಿ ನಾಗೇಗೌಡ, ಮುಖಂಡರಾದ ಬಸವರಾಜು, ಕುಮಾರಸ್ವಾಮಿ, ಚಿಕ್ಕಣ್ಣ, ಶಿವಸ್ವಾಮಿ, ಮತ್ತಿತರರಿದ್ದರು.

ಇಂದು ಘಟಾನುಘಟಿಗಳಿಂದ ನಾಮಪತ್ರ ಸಲ್ಲಿಕೆ



ಮಂಡ್ಯ, ಏ.16– ಸಕ್ಕರೆ ನಾಡು ಮಂಡ್ಯದಲ್ಲಿ ಚುನಾವಣಾ ಅಖಾಡ ರಂಗೇರಿದ್ದು, ಏ.17ರಂದು (ಸೋಮವಾರ) ಘಟಾನುಘಟಿಗಳು ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ.

ಕೆ.ಆರ್.ಪೇಟೆಯಲ್ಲಿ ನಾರಾಯಣಗೌಡ ನಾಮಪತ್ರ: ಕ್ರೀಡೆ ಹಾಗೂ ರೇಷ್ಮೆ ಸಚಿವ, ಕೆ.ಆರ್.ಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡ ಸೋಮವಾರ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದು, ಪಟ್ಟಣದಲ್ಲಿ ಮೆರವಣಿಗೆ ಮೂಲಕ ತಾಲೂಕು ಕಚೇರಿಗೆ ತೆರಳಿ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಈ ಸಂದರ್ಭ ಜಿಲ್ಲೆ ಹಾಗೂ ತಾಲೂಕು ಬಿಜೆಪಿ ಮುಖಂಡರು ಸಾಥ್ ನೀಡಲಿದ್ದಾರೆ.

ಚಲುವರಾಯಸ್ವಾಮಿ ಉಮೇದುವಾರಿಕೆ: ನಾಗಮಂಗಲದಲ್ಲಿ ಮಾಜಿ ಸಚಿವ ಹಾಗೂ ಕೈ ಹುರಿಯಾಳು ಎನ್.ಚಲುವರಾಯಸ್ವಾಮಿ ನಾಮಪತ್ರ ಸಲ್ಲಿಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಪಟ್ಟಣದ ಸೌಮ್ಯ ಕೇಶವ ದೇಗುಲದಿಂದ ಕಾಲ್ನಡಿಗೆಯಲ್ಲಿ ಮೆರವಣಿಗೆ ಹೊರಟು ತಾಲೂಕು ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಲಿದ್ದು, ಚಲುವರಾಯಸ್ವಾಮಿಗೆ ಮಂಡ್ಯ ಜಿಲ್ಲೆ ಹಾಗೂ ತಾಲೂಕು ಘಟಕದ 'ಕೈ' ಮುಖಂಡರು ಸಾಥ್ ನೀಡಲಿದ್ದಾರೆ.

ಸುರೇಶ್‌ಗೌಡ ನಾಮಪತ್ರ ಸಲ್ಲಿಕೆ: ಹಾಲಿ ಶಾಸಕ ಕೆ.ಸುರೇಶ್‌ಗೌಡ ಸಹ ಜೆಡಿಎಸ್ ಪಕ್ಷದಿಂದ ನಾಮಪತ್ರ ಸಲ್ಲಿಕೆ ಮಾಡಲಿದ್ದು, ಪಟ್ಟಣದ ದೊಡ್ಡಗುಡಿಯಿಂದ ಮೆರವಣಿಗೆ ಹೊರಟು ತಾಲೂಕು ಕಚೇರಿಗೆ ಆಗಮಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಸುರೇಶ್‌ಗೌಡಗೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅಥವಾ ನಿಖಿಲ್ ಕುಮಾರಸ್ವಾಮಿ ಸಾಥ್ ನೀಡುವ ಸಾಧ್ಯತೆ ಇದೆ.

ರಮೇಶ್ ಬಂಡಿಸಿದ್ದೇಗೌಡ ನಾಮಪತ್ರ ಸಲ್ಲಿಕೆ: ಶ್ರೀರಂಗಪಟ್ಟಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಮೇಶ್ ಬಾಬು ಬಂಡಿಸಿದ್ದೇಗೌಡ ಸೋಮವಾರ ನಾಮಪತ್ರ ಸಲ್ಲಿಸಲಿದ್ದು, ಪಟ್ಟಣದ ಹಳೇ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ತಾಲೂಕು ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಬಾಬುಗೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಸಾಥ್ ನೀಡಲಿದ್ದಾರೆ.

ಸಚ್ಚಿದಾನಂದ ನಾಮಪತ್ರ ಸಲ್ಲಿಕೆ: ಮತ್ತೊಂದೆಡೆ ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಚ್ಚಿದಾನಂದ ಉಮೇದುವಾರಿಕೆ ಸಲ್ಲಿಸಲಿದ್ದು, ಹಳೇ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ತಾಲೂಕು ಕಚೇರಿಯಲ್ಲಿ ತಮ್ಮ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಸಚ್ಚಿಗೆ ಸಂಸದೆ ಸುಮಲತಾ ಸೇರಿದಂತೆ ಕೆಲ ಸಿನಿಮಾ ನಟರು ಸಾಥ್ ನೀಡಲಿದ್ದಾರೆ.

ನರೇಂದ್ರಸ್ವಾಮಿ ನಾಮಪತ್ರ ಸಲ್ಲಿಕೆ: ಮಳವಳ್ಳಿ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಸಹ ಉಮೇದುವಾರಿಕೆ ಸಲ್ಲಿಸಲಿದ್ದು, ಪಟ್ಟಣದಲ್ಲಿ ಮೆರವಣಿಗೆ ನಡೆಸಿ, ಬಳಿಕ ತಾಲೂಕು ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಕೆ ಮಾಡಲಿದ್ದು, ನರೇಂದ್ರಸ್ವಾಮಿಗೆ ಮಳವಳ್ಳಿ ಕಾಂಗ್ರೆಸ್ ನಾಯಕರು ಸಾಥ್ ನೀಡಲಿದ್ದಾರೆ.

ಇವರೊಂದಿಗೆ ಮದ್ದೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಪಿ.ಸ್ವಾಮಿ, ಮೇಲುಕೋಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಇಂದ್ರೇಶ್ ಕುಮಾರ್, ಶ್ರೀರಂಗಪಟ್ಟಣ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಚಂದ್ರಶೇಖರ್ ಸೇರಿದಂತೆ ಇನ್ನಿತರರು ನಾಮಪತ್ರ ಸಲ್ಲಿಸಲಿದ್ದಾರೆ.

ಎಸ್.ಡಿ.ಜಯರಾಂ ರೀತಿ ಕೆಲಸ ಮಾಡಲು ಬೆಂಬಲಿಸಿ: ಅಶೋಕ್

ಮಂಡ್ಯ, ಏ.16– ಮಾಜಿ ಸಚಿವ ಎಸ್.ಡಿ.ಜಯರಾಂ ಅವರಂತೆ ಕೆಲಸ ಮಾಡಲು ಬಿಜೆಪಿ ಬೆಂಬಲಿಸಿ ಎಂದು ಮಂಡ್ಯ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ಮನವಿ ಮಾಡಿದರು.


ನಗರದ 26 ಮತ್ತು 27ನೇ ವಾರ್ಡ್‌ಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಳೀಯ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಮತ್ತು ಪ್ರಚಾರ ನಡೆಸಿ ಮಾತನಾಡಿದ ಅವರು, ನಮ್ಮ ತಂದೆ ಎಸ್.ಡಿ.ಜಯರಾಂ ಕಳೆದ 25 ವರ್ಷಗಳ ಹಿಂದೆ ಸ್ಥಳೀಯ ಮುಖಂಡರ ಸಹಕಾರದೊಂದಿಗೆ ಸಮಗ್ರ ಅಭಿವೃದ್ಧಿಯ ಆಧುನಿಕ ಮಂಡ್ಯ ನಿರ್ಮಾಣಕ್ಕೆ ಮುಂದಾದರು. ಅಂದು ಜನ ಕಂಡಂತಹ ಅಭಿವೃದ್ಧಿ ಕೆಲಸಗಳು ಮತ್ತೆ ಕಾಣದಾದವು. ನಾನು ಜೆಡಿಎಸ್‌ನಲ್ಲಿ 2 ಬಾರಿ ಟಿಕೆಟ್ ಕೇಳಿದರೂ ನಿರಾಕರಿಸಿದರು ಎಂದರು.

ಏ.20 ರಂದು ನಾಮಪತ್ರ ಸಲ್ಲಿಸಲಿದ್ದು, ಇದಕ್ಕೂ ಮುನ್ನಾ ನಗರದ ಶ್ರೀಕಾಳಿಕಾಂಬ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು ಆಗಮಿಸಿ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ವಿವಿಧ ವಾರ್ಡ್‌ಗಳ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ, ಮತದಾರರಿಗೆ ಕರಪತ್ರಗಳನ್ನು ನೀಡಿ ಬಿಜೆಪಿ ಬೆಂಬಲಿಸುವಂತೆ ಕೋರಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಡಾ.ಸದಾನಂದ, ಪದಾಧಿಕಾರಿಗಳಾದ ಶಿಶಿಕುಮಾರ್, ಶಂಕರ್, ಧರಣಿ, ಮಂಜುನಾಥ್, ನಗರಸಭಾ ನಾಮಿನಿ ಸದಸ್ಯರಾದ ಚಂದ್ರ, ಪ್ರಸನ್ನ, ಮೂಡಾ ಸದಸ್ಯ ಹನುಮಂತು ಮತ್ತಿತರರಿದ್ದರು.

ಇಂದು ಶಾಸಕ ನಿರಂಜನಕುಮಾರ್ ನಾಮಪತ್ರ ಸಲ್ಲಿಕೆ



ಗುಂಡ್ಲುಪೇಟೆ, ಏ.16– ಹಾಲಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಸಿ.ಎಸ್. ನಿರಂಜನ ಕುಮಾರ್ ಏ.17ರ ಸೋಮವಾರದಂದು ಬೆಳಗ್ಗೆ 10.30ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ.

ಪಟ್ಟಣದ ದೇವರಾಜ ಅರಸು ಕ್ರೀಡಾಂಗಣದ ಮುಂಭಾಗದಿಂದ ಬೆಳಗ್ಗೆ 9.30ಕ್ಕೆ ಸಹಸ್ರಾರು ಅಭಿಮಾನಿಗಳು ಮತ್ತು ಕಾರ್ಯಕರ್ತರ ಸಮ್ಮುಖದಲ್ಲಿ ಹಾಲಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನಕುಮಾರ್ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ತೆರಳಿ ತಾಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮಾಧ್ಯಮ ವಕ್ತಾರ ಎಸ್.ಸಿ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಮ್ಮತ್ತೂರಲ್ಲಿ ಬಸವ ಪುತ್ಥಳಿ ಅನಾವರಣ



ಚಾಮರಾಜನಗರ, ಏ.16– ಜಗಜ್ಯೋತಿ ಬಸವೇಶ್ವರರು ಭಕ್ತಿ ಜ್ಞಾನ ಭಂಡಾರವಾಗಿದ್ದರು. ಬಸವಾದಿ ಶರಣರು ರಚನೆ ಮಾಡಿದ್ದ ವಚನಗಳನ್ನು ಸಂರಕ್ಷಣೆ ಮಾಡುವಲ್ಲಿ ಅವರ ಅನುಯಾಯಿಗಳು ವಹಿಸಿದ್ದ ಪಾತ್ರ ಮಹತ್ತರವಾದದ್ದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಉಮ್ಮತ್ತೂರು ಗ್ರಾಮದ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಸವ ಪುತ್ಥಳಿ ನಿರ್ಮಾಣ ಸಮಿತಿ ಉಮ್ಮತ್ತೂರು ಹಾಗೂ ಸುತ್ತ–ಮುತ್ತಲ ಗ್ರಾಮಸ್ಥರ ವತಿಯಿಂದ ಆಯೋಜನೆ ಮಾಡಿದ್ದ ಬಸವ ಪುತ್ಥಳಿ ಉದ್ಘಾಟನೆ ಹಾಗೂ ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸಿ ಅವರು ಮತನಾಡಿದರು.

ಕಲ್ಯಾಣ ಕ್ರಾಂತಿಯಾದ ಬಳಿಕ ಶರಣರು ಚೆಲ್ಲಾಪಿಲ್ಲಿಯಾದರು. ಅಂದು ಅವರೆಲ್ಲರೂ ರಚನೆ ಮಾಡಿದ್ದ ವಚನಗಳನ್ನು ಸಂರಕ್ಷಣೆ ಮಾಡದಿದ್ದರೆ ಬಸವ ಧರ್ಮ ರಕ್ಷಣೆ ಕಷ್ಟವಾಗಿತ್ತು. ಅವರ ಅನುಯಾಯಿಗಳು ಬಹಳ ಜೋಪಾನವಾಗಿ ತಾಳೆಗರಿಗಳು ಹಾಗು ಹಸ್ತ ಅಕ್ಷರ ಪ್ರತಿಗಳನ್ನು ಮಠಮಾನ್ಯಗಳು ಹಾಗೂ ಮನೆಗಳಲ್ಲಿಟ್ಟು ಪೂಜೆ ಸಲ್ಲಿಸುವ ಮೂಲಕ ಸಂರಕ್ಷಣೆ ಮಾಡಿದರು. ವಚನ ಪಿತಾಮಹ ಫ.ಗು. ಹಳಕಟ್ಟಿ ಅವರು ಬಹಳ ಶ್ರಮಪಟ್ಟು ಎಲ್ಲವನ್ನು ದಾಖಲೆ ಮಾಡಿದರು. ಇಂಥ ಬಸವ ತತ್ವವನ್ನು ಸಾರುವ ನಾಡು ನಮ್ಮದಾಗಿದೆ ಎಂದರು.

ಉಮ್ಮತ್ತೂರಿನಲ್ಲಿರುವ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ಬಸವ ಪುತ್ಥಳಿ ಬಹಳ ಸುಂದರವಾಗಿ ಮೂಡಿ ಬಂದಿದೆ. ಧ್ಯಾನ ನಿರತ ಬಸವಮೂರ್ತಿ ಬಹಳ ವಿರಳ. ಈ ಭಾಗಕ್ಕೆ ಬರುವ ಜನರು ಕೊಟ್ಟೂರು ಬಸವೇಶ್ವರಿಗೆ ಪೂಜೆ ಸಲ್ಲಿಸಿ, ಧ್ಯಾನದ ಮಗ್ನರಾಗಿರುವ ಬಸವಣ್ಣನನ್ನು ನೋಡುವ ಭಾಗ್ಯ ಲಭಿಸಿದೆ. ಇಲ್ಲಿ ಸುಂದರವಾದ ಉದ್ಯಾನವನ ನಿರ್ಮಾಣಗೊಂಡು ಮನಸ್ಸಿಗೆ ನೆಮ್ಮದಿಯನ್ನು ನೀಡುವ ತಾಣವಾಗಲಿ ಎಂದು ಶ್ರೀಗಳು ಆಶಿಸಿದರು.

ಕುಂದೂರು ಮಠದ ಶ್ರೀ ಶರತ್ ಚಂದ್ರಸ್ವಾಮೀಜಿ ಬಸವಣ್ಣರವರ ಕುರಿತು ಪ್ರವಚನ ನೀಡಿದರು. ಕಾರ್ಯಕ್ರಮದಲ್ಲಿ ಸೋಮಹಳ್ಳಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ವಾಟಾಳ್ ಮಠದ ಶ್ರೀ ಸಿದ್ದಲಿಂಗ ಶಿವಚಾರ್ಯ ಸ್ವಾಮೀಜಿ, ಮರಳಗವಿ ಕ್ಷೇತ್ರದ ಮಠದ ಶ್ರೀ ಮುಮ್ಮಡಿ ಶಿವರುದ್ರ ಮಹಾಸ್ವಾಮೀಜಿ, ಮರಿಯಾಲ ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಮಾತನಾಡಿದರು.

ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಹರಗುರು ಚರಮೂರ್ತಿಗಳು ಉಪಸ್ಥಿತರಿದ್ದರು. ಬಸವ ಪುತ್ಥಳಿ ನಿರ್ಮಾಣ ಸಮಿತಿಯ ಅಧ್ಯಕ್ಷ ಉಮ್ಮತ್ತೂರು ಜಗದೀಶ, ಗೌರವ ಅಧ್ಯಕ್ಷ ಉಮ್ಮತ್ತೂರು ಬಸವರಾಜು, ಜಿಲ್ಲಾ ಬಸವ ಕೇಂದ್ರ ಅಧ್ಯಕ್ಷ ಎಚ್ಎಚ್ ಮಹದೇವ ಸ್ವಾಮಿ, ಸಮಿತಿಯ ನಿರ್ದೇಶಕರಾದ ಫಣೀರಾಜಮೂರ್ತಿ, ಬಾಗಳಿ ಮಲ್ಲೇಶ್, ಸುಭಾಷ್ ಇತರರು ಹಾಜರಿದ್ದರು.

ಅಬಕಾರಿ ಭದ್ರತಾ ಚೀಟಿ ಇಲ್ಲದ 14.65 ಲಕ್ಷ ಮೌಲ್ಯದ ಮದ್ಯ ವಶ

ಚಾಮರಾಜನಗರ, ಏ.16– ಅಬಕಾರಿ ಭದ್ರತಾ ಚೀಟಿಗಳು ಇಲ್ಲದ ಕಾರಣದಿಂದ ಒಟ್ಟಾರೆ 14,65,015 ರೂ. ಮೌಲ್ಯದ 9012 ಲೀಟರ್ ಬಿಯರ್ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ಸಂಬಂಧಪಟ್ಟವರ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಶನಿವಾರ (ಏ.15) ದಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಚಾಮರಾಜನಗರದ ಕೆ.ಎಸ್.ಬಿ.ಸಿ.ಎಲ್ ಡಿಪೋಗೆ ನೆಲಮಂಗಲದ ಯುನೈಟೆಡ್ ಬ್ರಿವರಿಸ್ ಪ್ರೈ.ಲಿ. ನಿಂದ ಸರಬರಾಜಾದ ಬಿಯರ್‌ನ 1,150 ರಟ್ಟಿನ ಪೆಟ್ಟಿಗೆಗಳಲ್ಲಿ 7 ರಟ್ಟಿನ ಪೆಟ್ಟಿಗೆಗಳ ಮೇಲೆ ಅಬಕಾರಿ ಭದ್ರತಾ ಚೀಟಿಗಳು ಇಲ್ಲದಿರುವುದು ಕಂಡು ಬಂತು. ಈ ಹಿನ್ನೆಲೆಯಲ್ಲಿ ಅಬಕಾರಿ ಅಧಿಕಾರಿಗಳು ಒಟ್ಟಾರೆ 14,65,015 ರೂ. ಮೌಲ್ಯದ 9012 ಲೀಟರ್ ಬಿಯರ್ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ಬ್ರಿವರಿಸ್ ಸನ್ನದುದಾರರು ಹಾಗೂ ಚಾಲಕರ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ಆಯುಕ್ತ ಆರ್. ನಾಗಶಯನ, ಅಬಕಾರಿ ಉಪ ಅಧೀಕ್ಷಕ ಮೋಹನ್ ಕುಮಾರ್, ಚಾಮರಾಜನಗರ ಉಪವಿಭಾಗ ಅಬಕಾರಿ ನಿರೀಕ್ಷಕ ಸಿ.ಎಂ.ಮಹದೇವ, ಕೆ.ಎಸ್.ಬಿ.ಸಿ.ಎಲ್ ಡಿಪೊ ವ್ಯವಸ್ಥಾಪಕ ಬಸವರಾಜು, ಅಬಕಾರಿ ನಿರೀಕ್ಷಕ ಗುರುನಾಥ ಶೆಟ್ಟಿ ಭಾಗವಹಿಸಿದ್ದರು.

ಸೋಮಣ್ಣ ಗೆಲುವಿಗಾಗಿ ಶ್ರಮಿಸುತ್ತೇನೆ

ನಾಗಶ್ರೀ ಪ್ರತಾಪ್ ಘೋಷಣೆ



ಚಾಮರಾಜನಗರ, ಏ.16– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬೇಕು ಹಾಗೂ ಪಕ್ಷ ಹಾಗೂ ಕಾರ್ಯಕರ್ತರ ಹಿತದೃಷ್ಟಿಯಿಂದ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಪರವಾಗಿ ಕೆಲಸ ಮಾಡುತ್ತೇನೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಿ. ನಾಗಶ್ರೀ ಪ್ರತಾಪ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎಂಟು ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸಿಕೊಂಡು ಬಂದಿದ್ದೇನೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ಟಿಕೆಟ್ ಕೇಳಿದ್ದೆ. ಆಗಲೂ ಟಿಕೆಟ್ ಕೈತಪ್ಪಿತ್ತು. ಟಿಕೆಟ್ ತಪ್ಪಿದಾಗಲೂ ವಿಧಾನಸಭೆ, ಲೋಕಸಭೆ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ, ಗ್ರಾಮ ಪಂಚಾಯಿತಿ, ಚಾಮುಲ್, ಕೊಳ್ಳೇಗಾಲ ನಗರಸಭೆ ಉಪ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ಪಕ್ಷದ ಸಂಘಟನೆಯ ಜೊತೆಗೆ ಜನಪರ ಕೆಲಸಗಳನ್ನು ಸಹ ಮಾಡುತ್ತಿದ್ದೇನೆ ಎಂದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಚಾ.ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಬಹುದೆಂಬ ಆಶಾಭಾವನೆ ಇಟ್ಟುಕೊಂಡಿದ್ದೆ. ಹೆಣ್ಣು ಮಗಳು ರಾಜಕಾರಣದಲ್ಲಿ ತೊಡಗಿಕೊಂಡು ಕೆಲಸ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಕಾರ್ಯಕರ್ತರ ಬೆಂಬಲದಿಂದ ಸಂಘಟನೆ ಮಾಡಿದ್ದೇನೆ. ಆದರೆ ಈ ಬಾರಿಯೂ ನನಗೆ ಟಿಕೆಟ್ ಸಿಗಲಿಲ್ಲ. ಇದರಿಂದ ನನಗೆ ಬಹಳ ನೋವಾಯಿತು. ಆದರೆ ಬಂಡಾಯವಾಗಿ ಸ್ಪರ್ಧಿಸಬೇಕೆಂಬ ಯೋಚನೆ ಕನಸು ಮನಸಿನಲ್ಲೂ ಬಂದಿರಲಿಲ್ಲ ಎಂದ ಅವರು, ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎಂದು ಪಕ್ಷ ನನಗೆ ಹೇಳಿಕೊಟ್ಟಿದೆ. ಪಕ್ಷ ನನಗೆ ತಾಯಿ ಇದ್ದಂತೆ. ಆ ಪಕ್ಷವನ್ನು ನಂಬಿ ಲಕ್ಷಾಂತರ ಕಾರ್ಯಕರ್ತರಿದ್ದಾರೆ. ನಮ್ಮ ಆಸೆ–ಆಕಾಂಕ್ಷೆಗಳು ಬಹಳಷ್ಟು ಇವೆ. ದಿನ ಬೆಳಗಾದರೆ ಹೊಸ ಆಶಾಭಾವನೆಗಳನ್ನು ಇಟ್ಟುಕೊಂಡಿರುತ್ತೇವೆ. ನಮ್ಮ ತಂದೆಯವರ ಆಸೆ ಪೂರೈಸಬೇಕೆಂದು ಹೋರಾಟ ನಡೆಸಿದೆ. ಆದರೆ ಪಕ್ಷ ತನ್ನದೇ ಆದ ಉದ್ದೇಶದಿಂದ ತೀರ್ಮಾನ ಕೈಗೊಂಡಿದೆ. ಅದಕ್ಕೆ ಬದ್ಧಳಾಗಿದ್ದೇನೆ ಎಂದು ಹೇಳಿದರು.

ಮುಖಂಡ ಉಡಿಗಾಲ ಆರ್. ಕುಮಾರಸ್ವಾಮಿ, ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು, ಎನ್. ಬಸವನಾಯಕ, ಎಪಿಎಂಸಿ ಮಾಜಿ ನಿರ್ದೇಶಕ ಎಸ್. ಮಹೇಶ್, ರಾಮಸಮುದ್ರ ಪ್ರಸನ್ನ, ಗ್ರಾ.ಪಂ. ಮಾಜಿ ಸದಸ್ಯ ಚಿಕ್ಕಮಹದೇವೇಗೌಡ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ನಗರದಲ್ಲಿ 695 ಕೋಟಿ ವೆಚ್ಚದ ರಸ್ತೆ ಡಾಂಬರೀಕರಣ

ಮುಡಾದ 377.6 ಕೋಟಿ, ಪಾಲಿಕೆಯ 200 ಕೋಟಿ, ಲೋಕೋಪಯೋಗಿ ಇಲಾಖೆಯ 118 ಕೋಟಿ ವೆಚ್ಚದ ಕಾಮಗಾರಿ ಪ್ರಗತಿಯಲ್ಲಿ

ಎಸ್.ಟಿ.ರವಿಕುಮಾರ್

ಮೈಸೂರು, ಏ.16(ಆರ್‌ಕೆ)–ಒಂದೆಡೆ ರಾಜಕೀಯ ಮುಖಂಡರು, ಜನಪ್ರತಿನಿಧಿಗಳು ವಿಧಾನಸಭಾ ಚುನಾವಣೆಯಲ್ಲಿ ಬ್ಯುಸಿಯಾಗಿದ್ದರೆ, ಮತ್ತೊಂದೆಡೆ ಮೈಸೂರು ನಗರದಾದ್ಯಂತ ಬಹುತೇಕ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ ನಡೆಯುತ್ತಿದೆ.

2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ವೇಳಾಪಟ್ಟಿ ಪ್ರಕಟಗೊಳ್ಳುವ ಮೊದಲೇ ಮೈಸೂರು ಮಹಾನಗರ ಪಾಲಿಕೆ (MCC), ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA) ಹಾಗೂ ಲೋಕೋಪಯೋಗಿ ಇಲಾಖೆ (PWD)ಗಳು ಮೈಸೂರು ನಗರದ ಗುಂಡಿ ಬಿದ್ದ ರಸ್ತೆಗಳು ಹಾಗೂ ಕೆಲವೆಡೆ ಚೆನ್ನಾಗಿರುವ ರಸ್ತೆಗಳಿಗೂ ಡಾಂಬರೀಕರಣ ಮಾಡುವ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ, ಟೆಂಡರ್ ಪ್ರಕ್ರಿಯೆ ಮೂಲಕ ಯಶಸ್ವಿ ಗುತ್ತಿಗೆದಾರರಿಗೆ ಕಾರ್ಯಾದೇಶ (Work Order) ನೀಡಿ ಆಯಾ ವ್ಯಾಪ್ತಿಯ ಶಾಸಕರು ಹಾಗೂ ಮೈಸೂರು ಮೇಯರ್‌ರಿಂದ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗಳಿಗೆ ಚಾಲನೆ ಕೊಡಿಸಿತ್ತು.

2022ರ ನವೆಂಬರ್ 15ರಿಂದೀಚೆಗೆ ಮುಡಾದಿಂದ 377.6 ಕೋಟಿ ರೂ., ಮೈಸೂರು ಮಹಾನಗರ ಪಾಲಿಕೆಯಿಂದ 200 ಕೋಟಿ ರೂ. ಹಾಗೂ ಲೋಕೋಪಯೋಗಿ ಇಲಾಖೆಯಿಂದ 118 ಕೋಟಿ ರೂ. ಸೇರಿ ಒಟ್ಟು 695 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿವೆ.

ಮೈಸೂರು ಮಹಾನಗರ ಪಾಲಿಕೆಯು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ 50 ಕೋಟಿ ರೂ. ಅನುದಾನದಲ್ಲಿ 11 ಪ್ಯಾಕೇಜ್‌ಗಳ ಕಾಮಗಾರಿಗಳನ್ನು ಕೈಗೊಂಡಿದ್ದು, ಅಡ್ಡ ರಸ್ತೆ, ವಸತಿ ಬಡಾವಣೆಗಳ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗಳನ್ನು ನಡೆಸಲಾಗುತ್ತಿದೆ.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್ ಅವರು ತಂದಿರುವ 20 ಕೋಟಿ ರೂ. ಅನುದಾನದಲ್ಲಿ 4 ಪ್ಯಾಕೇಜ್‌ಗಳ ರಸ್ತೆ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಅದೇ ರೀತಿ ಈ ಹಿಂದೆ ಮೇಯರ್ ಆಗಿದ್ದ ಸುನಂದಾ ಪಾಲನೇತ್ರ ಅವರು ಮುಖ್ಯಮಂತ್ರಿಗಳಿಂದ ತಂದ 25 ಕೋಟಿ ರೂ. ವಿಶೇಷ ಅನುದಾನದಿಂದ 7 ಪ್ಯಾಕೇಜ್‌ಗಳ ಕಾಮಗಾರಿಗಳೂ ಪ್ರಗತಿಯಲ್ಲಿವೆ.

ಅದರ ಜೊತೆಗೆ ಕೇಂದ್ರದ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ 63 ಕೋಟಿ ರೂ. ವೆಚ್ಚದಲ್ಲಿ 11 ಪ್ಯಾಕೇಜ್‌ಗಳ ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಮೈಸೂರು ಮಹಾನಗರ ಪಾಲಿಕೆಯು ನಡೆಸುತ್ತಿದೆ. ಅದರ ಜೊತೆಗೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ (KRDC)ದಿಂದಲೂ, ಕೆಲ ರಸ್ತೆಗಳ ಕಾಮಗಾರಿಗಳನ್ನು ನಡೆಸಲಾಗುತ್ತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೈಸೂರು ನಗರದ ಪ್ರಮುಖ ರಸ್ತೆಗಳ ಗುಂಡಿ ಮುಚ್ಚಿ ಚರಂಡಿ ಸಮೇತ ಡಾಂಬರೀಕರಣಕ್ಕೆ 377.6 ಕೋಟಿ ರೂ. ವೆಚ್ಚದಲ್ಲಿ 106 ಕಾಮಗಾರಿಗಳನ್ನು ನಡೆಸುತ್ತಿದ್ದು, ಬಹುತೇಕ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

ಒಂದು ಬಾರಿ ಅಭಿವೃದ್ಧಿ (One Time Development)ಯೋಜನೆಯಡಿ ನಗರಾಭಿವೃದ್ಧಿ ಇಲಾಖೆಯಿಂದ ಅನುಮೋದನೆ ಪಡೆದು ಪ್ರಾಧಿಕಾರವು ರಸ್ತೆಗಳಿಗೆ ಮೆಟ್ಲಿಂಗ್, ಡಾಂಬರೀಕರಣ, ಸಿಮೆಂಟ್ ಕಾಂಕ್ರೀಟ್ ಬಾಕ್ಸ್ ಡ್ರೇನ್, ಫುಟ್‌ಪಾತ್, ಒಳ ಚರಂಡಿ ಕಾಮಗಾರಿಗಳಿಗೆ 4 ತಿಂಗಳ ಹಿಂದೆಯೇ ಚಾಲನೆ ನೀಡಿದ್ದು, ಶೇ.80ರಷ್ಟು ಕೆಲಸ ಪೂರ್ಣಗೊಂಡಿದೆ.

ಅದೇ ರೀತಿ ಲೋಕೋಪಯೋಗಿ ಇಲಾಖೆಯು ಮೈಸೂರು ನಗರ ವ್ಯಾಪ್ತಿಯ 12 ಮೀಟರ್, 16 ಮೀಟರ್ ಅಗಲದ ದೊಡ್ಡ ರಸ್ತೆಗಳ ಕಾಮಗಾರಿಗಳನ್ನು ನಡೆಸುತ್ತಿದೆ ಡಿ.ದೇವರಾಜ ಅರಸು ರಸ್ತೆ ಜೆಎಲ್‌ಬಿ ರಸ್ತೆ, ನ್ಯೂ ಕಾಂತರಾಜ ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆ ಸಿದ್ಧಾರ್ಥ ಬಡಾವಣೆ, ಚಾಮುಂಡೇಶ್ವರಿ ಮತ್ತು ಕೆ.ಆರ್. ಕ್ಷೇತ್ರಗಳಲ್ಲಿ ಒಟ್ಟು 140 ಕಿ.ಮೀ. ರಸ್ತೆ ಡಾಂಬರೀಕರಣಗಳು ಪ್ರಗತಿಯಲ್ಲಿವೆ.

ಅಶೋಕ ರಸ್ತೆ ಓಲ್ಡ್ ಬ್ಯಾಂಕ್ ರಸ್ತೆ ಗಾಂಧಿ ಸ್ಕ್ವೇರ್, ವಿದ್ಯಾರಣ್ಯಪುರಂನ ಸಿವೇಜ್ ಫಾರಂ ಹಿಂಭಾಗದ ರಸ್ತೆ ಸೇರಿದಂತೆ 2022ರ ನವೆಂಬರ್ 15ರಿಂದೀಚೆಗೆ ಒಂದು ಬಾರಿ ಅಭಿವೃದ್ಧಿ (One Time Improvement), ಅಪೆಂಡಿಕ್ಸ್–ಸಿ, ಎಂಡಿಆರ್ ರಿನೀವಲ್ ಯೋಜನೆಯಡಿ ಇಲಾಖೆ ಬಿಡುಗಡೆ ಮಾಡಿದ ಅನುದಾನದಲ್ಲಿ ಒಟ್ಟು 118 ಕೋಟಿ ರೂ.ಗಳನ್ನು ರಸ್ತೆ ಅಭಿವೃದ್ಧಿಗೆ ಖರ್ಚು ಮಾಡುತ್ತಿದೆ.

ಅನುದಾನ ಬಳಕೆ ಮಾಡುವ ಭರದಲ್ಲಿ ಮುಡಾ, ಪಾಲಿಕೆ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕೆಲವೆಡೆ ಇತ್ತೀಚೆಗಷ್ಟೇ ಡಾಂಬರ್ ಹಾಕಿದ, ಚೆನ್ನಾಗಿರುವ ರಸ್ತೆಗಳ ಮೇಲೆ ಮತ್ತೆ ಡಾಂಬರೀಕರಣ ಮಾಡುತ್ತಿರುವುದು ತೆರಿಗೆದಾರರ ಹಣವನ್ನು ಅನಗತ್ಯ ವ್ಯಯ ಮಾಡಲಾಗುತ್ತಿದೆ ಎಂಬ ಆರೋಪವೂ ಕೇಳಿ ಬರುತ್ತಿದೆ.

ಮತ್ತೊಂದೆಡೆ ಗುಂಡಿ ಬಿದ್ದು ಹಾಳಾಗಿರುವ ಬನ್ನಿಮಂಟಪದ ಜೋಡಿ ತೆಂಗಿನ ಮರದ ರಸ್ತೆಯಲ್ಲಿ ಓಡಾಡುವುದೇ ದುಸ್ತರವಾಗಿದ್ದರೂ, ಅಂತಹ ರಸ್ತೆಗಳನ್ನು ಬಿಟ್ಟು ಚೆನ್ನಾಗಿಯೇ ಇರುವ ರಸ್ತೆಗಳ ಮೇಲೆ ಮತ್ತೆ ಡಾಂಬರ್ ಹಾಕುತ್ತಿರುವ ಬಗ್ಗೆಯೂ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಒಟ್ಟು 695 ಕೋಟಿ ರೂ. ಅನುದಾನವನ್ನು ಮೈಸೂರು ನಗರದ ರಸ್ತೆಗಳ ಮೇಲೆ ತೊಡಗಿಸಲಾಗುತ್ತಿದ್ದು, ಇದೇ ಮೊದಲ ಬಾರಿ ಏಕ ಕಾಲದಲ್ಲಿ ಅತೀ ಹೆಚ್ಚು ರಸ್ತೆ ಕಾಮಗಾರಿಗಳನ್ನು ಕೈಗೊಂಡಿದ್ದು, ಎಲ್ಲಿ ನೋಡಿದರಲ್ಲಿ ಕೆಲಸಗಳು ವೇಗವಾಗಿ ನಡೆಯುತ್ತಿರುವುದನ್ನು ಕಾಣ ಬಹುದಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮೊದಲೇ ರಸ್ತೆ ಚರಂಡಿ, ಫುಟ್‌ಪಾತ್, ಒಳ ಚರಂಡಿ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದುಕೊಂಡು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಗುದ್ದಲಿ ಪೂಜೆಯನ್ನು ನೆರವೇರಿಸಲಾಗಿತ್ತು.



ಬೀರಿಹುಂಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಬೀರಿಹುಂಡಿ ಗ್ರಾಪಂ ಮಾಜಿ ಅಧ್ಯಕ್ಷ ಮಾಲೇಗೌಡ, ಸದಸ್ಯರುಗಳಾದ ಡಿ.ಬಿ.ಶಂಕರ್, ಪುಟ್ಟಸ್ವಾಮಿ, ನುಗ್ಗಳ್ಳಿ ವನಿತಾ ಮಂಜು, ಪಚ್ಚೆಗೌಡ, ಮಮತಾ ಉದ0ಯ್ ಕುಮಾರ್, ದ್ರಾಕ್ಷಿಯಿಣಿ ಸೋಮೇಶ್, ಪುಟ್ಟಲಕ್ಷ್ಮಮ್ಮ, ಪ್ರಭಾ ಶಿವಕುಮಾರ್, ಹುಚ್ಚೇಗೌಡ (ಸುಮುಖ ಡೆವಲಪರ್ಸ್) ಹಿರಿ0ಯ ಮುಖಂಡರು ಹಾಗೂ ನೂರಾರು 0ಯುವಕರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಕೋಟೆಹುಂಡಿ ಮಹದೇವ್, ಬೀರಿಹುಂಡಿ ಶಿವಣ್ಣ, ಬಡಗಲಹುಂಡಿ ಸಿದ್ದೇಗೌಡ, ಟಿ.ಕೆ ಲೇಔಟ್ ರಾಜು, ಕೆ.ಸಾಲುಂಡಿ ರಾಜು, ಮಾದಳ್ಳಿ ಮಾದಪ್ಪ, ಕೇರ್ಗಳ್ಳಿ ಶಿವಪ್ಪ, ರವಿಶೆಟ್ಟಿ, ಬೋಳೆಗೌಡ, ಕುಮಾರ್ ಬೀಡು ಶಂಕರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 17 ಏಪ್ರಿಲ್ 2023

ಕುಟುಂಬ ಮಾತ್ರವಲ್ಲ, ಎಲ್ಲಾ ಕ್ಷೇತ್ರಕ್ಕೂ ಮಹಿಳೆ ಅನಿವಾರ್ಯ

ಕವಯಿತ್ರಿ ಸಮ್ಮೇಳನ ಪ್ರಧಾನ ಕಾರ್ಯದರ್ಶಿ ಡಾ.ಜಿ.ಎಸ್.ಸರೋಜಾ ಅಭಿಮತ



ಮೈಸೂರು, ಏ.16(ಎಂಕೆ)– ಮಹಿಳೆಯರು ಕುಟುಂಬದಲ್ಲಷ್ಟೇ ಅಲ್ಲ ಸಾಹಿತ್ಯ ಸೇರಿದಂತೆ ಎಲ್ಲಾ ಕ್ಷೇತ್ರಕ್ಕೂ ಅವಶ್ಯಕವಾಗಿದ್ದಾರೆ ಎಂದು ಅಖಿಲ ಭಾರತ ಕವಯಿತ್ರಿ ಸಮ್ಮೇಳನ ಪ್ರಧಾನ ಕಾರ್ಯದರ್ಶಿ ಡಾ.ಜಿ.ಎಸ್.ಸರೋಜಾ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಾಹಿತ್ಯ ಸಭಾಂಗಣದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಕವಯಿತ್ರಿ ಸಮ್ಮೇಳನ ಜಿಲ್ಲಾ ಘಟಕ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಬಲ್ಲವರಾಗಿದ್ದಾರೆ. ರಾಜಕೀಯ, ಕ್ರೀಡಾ, ಸಾಹಿತ್ಯ, ನೃತ್ಯ, ಆಡಳಿತ ಸೇರಿದಂತೆ ಹಲವಾರು ಕ್ಷೇತ್ರದಲ್ಲಿ ಮಹಿಳೆಯರು ಇಂದು ಪಾಲ್ಗೊಂಡಿರುವುದು ನೋಡಬಹುದು ಎಂದರು.

ಮಹಿಳೆ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಅಭಿವೃದ್ಧಿ ಹೊಂದಬೇಕು. ಎಲ್ಲಾ ಕ್ಷೇತ್ರಗಳಲ್ಲಿಯೂ ಉತ್ತಮ ಅವಕಾಶ ಪಡೆಯಬೇಕು. ಇದಕ್ಕೆ ಪ್ರತಿಯೊಬ್ಬರ ಸಹಕಾರ ಅವಶ್ಯವಾಗಿದೆ ಅಲ್ಲದೆ ಸೂಕ್ತ ವೇದಿಕೆ ಒದಗಿಸುವುದು ಮುಖ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಶಿಕ್ಷಿತರಾಗಬೇಕು: ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಿ, ಪ್ರತಿಯೊಬ್ಬ ಹೆಣ್ಣು ಮಕ್ಕಳು ಮೊದಲು ಶಿಕ್ಷಿತರಾಗಬೇಕು. ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರು ಭಾಗವಹಿಸುವ ಮೂಲಕ ಪ್ರಧಾನ ಪಾತ್ರ ವಹಿಸಬೇಕು. ಇಂದು ಮಹಿಳೆಯರಲ್ಲಿ ಪ್ರಬುದ್ಧತೆ, ನಿರ್ಭೀತಿ ಹೆಚ್ಚಿದೆ. ಮಹಿಳಾ ಸಬಲೀಕರಣದಿಂದ ಮಾತ್ರ ಸಮ–ಸಮಾಜದ ಏಳಿಗೆ ಸಾಧ್ಯ ಎಂದರು.

ಅಖಿಲ ಭಾರತ ಕವಯಿತ್ರಿ ಸಮ್ಮೇಳನ ಉಪಾಧ್ಯಕ್ಷರಾದ ಪ್ರೊ.ವಿಜಯಲಕ್ಷ್ಮಿ ಕೋಸಗಿ ಮಾತನಾಡಿ, ಅಖಿಲ ಭಾರತ ಕವಯಿತ್ರಿ ಸಮ್ಮೇಳನ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದ್ದು, ಮಹಿಳೆಯರಲ್ಲಿರುವ ಪ್ರತಿಭೆಯನ್ನು ಗುರ್ತಿಸಿ, ಪ್ರೋತ್ಸಾಹ ನೀಡಲು ಈ ಸಂಸ್ಥೆ ಬಹಳಷ್ಟು ಶ್ರಮಿಸಿದೆ. ದೇಶದಾದ್ಯಂತ 13 ಸಾವಿರ ಸದಸ್ಯರಿದ್ದು, ರಾಜ್ಯದಿಂದ 4 ಸಾವಿರ ಸದಸ್ಯರು ಹೊಂದಿದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲೇಖಕ ಸತೀಶ್ ಜವರೇಗೌಡ, ಅಖಿಲ ಭಾರತ ಕವಯಿತ್ರಿ ಸಮ್ಮೇಳನ ಜಿಲ್ಲಾ ಘಟಕ ಸದಸ್ಯರಾದ ಇಂದಿರಾ ಪಾಟೀಲ್, ಕಾರ್ಯದರ್ಶಿ ಡಾ.ಗೀತಾಂಜಲಿ, ಸಾಹಿತಿ ಕೆರೋಡಿ ಎಂ.ಲೋಲಾಕ್ಷಿ ಮತ್ತಿತರರಿದ್ದರು.



ಸೋಮವಾರ ನಾಮಪತ್ರ ಸಲ್ಲಿಸಲಿರುವ ಮೈಸೂರು ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಭಾನುವಾರ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಬಿಜೆಪಿ ಮುಖಂಡರಾದ ಭಾನುಪ್ರಕಾಶ್, ಮುರಳಿಧರ್, ಸ್ವಾಮಿಗೌಡ, ಜಗದೀಶ್, ಸ್ಮಾರ್ಟ್ ಮಂಜು, ವಿನೋದ್ ಕುಮಾರ್, ಸಾತ್ವಿಕ್, ಸಮರ್ಥ್, ಶ್ರೀಕಂಠಮೂರ್ತಿ ಉಪಸ್ಥಿತರಿದ್ದರು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಭಾನುವಾರ ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆದರು. ನಗರ ಪಾಲಿಕೆ ಸದಸ್ಯ ಜೆ.ಗೋಪಿ, ಕಾಂಗ್ರೆಸ್ ಮುಖಂಡರಾದ ರವಿಶಂಕರ್, ಎಂ.ಸುನೀಲ್, ಮಾರ್ಬಳ್ಳಿ ಕುಮಾರ್, ಪ್ರದೀಪ್ ಕುಮಾರ್, ಸುಬ್ಬಣ್ಣ, ಪರಶಿವಮೂರ್ತಿ, ಗುರುಸ್ವಾಮಿ, ಸಿದ್ದು, ಧರ್ಮೇಂದ್ರ, ರವಿ, ವಿಶ್ವ, ಮಹದೇವು, ನಟರಾಜು, ಮಹೇಶ್, ಚೇತು, ಅನಿಲ್, ಬಸವಣ್ಣ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಲಿರುವ ಕವೀಶ್ ಗೌಡ ಅವರು ತಮ್ಮ ಪತ್ನಿ ಡಾ. ಪ್ರಜ್ಞಾ ಕವೀಶ್ ಅವರೊಡಗೂಡಿ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಕವಿಶ್ ಗೌಡರ ಸಹೋದರ ಅವಿಷ್ ಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್. ನಾಗೇಂದ್ರ ಅವರ ಹೆಸರಿನಲ್ಲಿ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮನೆ ಮನೆಗೆ ತೆರಳಿ ಮತಯಾಚಿಸಲಾಯಿತು. ನಗರ ಪಾಲಿಕೆ ಸದಸ್ಯ ಸುಬ್ಬಯ್ಯ, ಬಿಜೆಪಿ ಮುಖಂಡರಾದ ರಮೇಶ್ ಸತೀಶ್, ವಸಂತ್, ಶ್ರೀಕಾಂತ್, ಅವಿನಾಶ್, ಅನು, ಮಂಜುಳಾ, ರಶ್ಮಿ, ರಾಜೇಶ್ವರಿ, ಪುಷ್ಪ, ಆಶಾ, ಹಂಸವೇಣಿ ಮತ್ತಿತರರಿದ್ದರು.

ಪ್ರೊ.ಸೋಮಶೇಖರಗೌಡರ 'ದೇವರ ದಿನಗಳು' ಆತ್ಮಕಥನ ಬಿಡುಗಡೆ

ಜಗತ್ತಿನ ಮೂಲೆ ಮೂಲೆಯನ್ನೂ ಭಗವಂತ ವ್ಯಾಪಿಸಿದ್ದಾನೆ

ಉಪನಿಷತ್ತಿನ ಉಲ್ಲೇಖ ತಿಳಿಸಿದ ಆದಿಚುಂಚನಗಿರಿ ಮಠದ ಶ್ರೀ ಸೋಮನಾಥ ಸ್ವಾಮೀಜಿ

ಮೈಸೂರು,ಏ.16(ಪಿಎಂ)– ಜಗತ್ತಿನ ಮೂಲೆ ಮೂಲೆಯಲ್ಲಿ ಭಗವಂತ ವ್ಯಾಪಿಸಿದ್ದಾನೆಂದು ಉಪನಿಷತ್ತಿನಲ್ಲಿ ಋಷಿಗಳು ಹೇಳಿದ್ದಾರೆ ಎಂದು ಶ್ರೀ ಕ್ಷೇತ್ರ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಸೋಮಶೇಖರಗೌಡ ಅವರ 75ನೇ ಜನ್ಮದಿನಾಚರಣೆ ಹಾಗೂ ಅವರ 'ದೇವರ ದಿನಗಳು' ಆತ್ಮಕಥನ ಕೃತಿ ಬಿಡುಗಡೆ ಸಮಾರಂಭದಲ್ಲಿ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪ್ರೊ.ಸೋಮಶೇಖರಗೌಡ ತಮ್ಮ 75ನೇ ಸಂವತ್ಸರದ ಸಂದರ್ಭದಲ್ಲಿ ತಮ್ಮ ಆತ್ಮಕಥನದ ಮೂಲಕ ಸಮಾಜಕ್ಕೆ ಸಾಹಿತ್ಯಕ ಕೊಡುಗೆ ಸಹ ನೀಡಿದ್ದಾರೆ. ಸೋಮಶೇಖರಗೌಡರು ಹಳ್ಳಿಯ ಸೊಗಡಿನಿಂದ ಬಂದವರು. ಹಾಗಾಗಿ ತಮ್ಮ ಹಳ್ಳಿಯ ಬಗೆಗಿನ ಭಾವನೆಗಳನ್ನು ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಸಾಹಿತ್ಯಕ ಚಿಂತಕರು ದೇವರನ್ನು ನಂಬುವುದು ವಿರಳ. ಆದರೆ ಸೋಮಶೇಖರಗೌಡರು ದೇವರ ಬಗ್ಗೆ ಅಪಾರವಾದ ನಂಬಿಕೆ ಹೊಂದಿದ್ದಾರೆ ಎಂದು ತಿಳಿಸಿದರು.

ಕೃತಿ ಕುರಿತು ಮಾತನಾಡಿದ ಬೆಳಗಾವಿ ರಾಯಭಾಗದ ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸೋಮಶೇಖರಗೌಡರು ತಮ್ಮ ಬದುಕಿನ ಪ್ರತಿಯೊಂದು ಕ್ಷಣವನ್ನು ದೇವರ ಆಶೀರ್ವಾದವೆಂದು ಭಾವಿಸಿದ್ದಾರೆ. ಬಹಳಷ್ಟು ಜನ ಬಚ್ಚಿಕೊಂಡು ಆತ್ಮಕಥನ ಬರೆಯುವುದಿದೆ. ಆದರೆ ಸೋಮಶೇಖರಗೌಡರು ಎಲ್ಲವನ್ನೂ ಬಿಚ್ಚಿಟ್ಟು ಆತ್ಮಕಥನ ಬರೆದಿದ್ದಾರೆ ಎಂದು ಹೇಳಿದರು.

ಈ ಆತ್ಮಕಥನದಲ್ಲಿ ಅದ್ಭುತವಾದ ವಿಚಾರಗಳಿವೆ. ಬಹಳಷ್ಟು ಮಡಿವಂತಿಕೆ ಸಾಹಿತಿಗಳು ಇದನ್ನು ಓದಿದರೆ ಇದನ್ನು ಬರೆಯಬಾರದಿತ್ತು ಎಂದುಕೊಳ್ಳುವ ಅಂಶಗಳೂ ಇಲ್ಲಿವೆ. ಇರುವುದನ್ನು ಇದ್ದಂತೆ ಹೇಳುವುದೇ ನಿಜವಾದ ಆತ್ಮಕಥನ. 'ದೇವರ ದಿನಗಳು' ಇರುವುದನ್ನು ಇದ್ದಂತೆ ಹೇಳಿರುವ ಅಪರೂಪದ ಕೃತಿ ಎಂದು ತಿಳಿಸಿದರು.

ಈ ಕೃತಿ ಒಟ್ಟು 424 ಪುಟಗಳನ್ನು ಒಳಗೊಂಡಿದೆ. ಭಾರತೀಯ ಪರಂಪರೆಯಲ್ಲಿ ವ್ಯಕ್ತಿಯ ಎಲ್ಲಾ ಸಾಧನೆಗಳ ಮೂಲ ಕುಟುಂಬ ಎಂಬ ನಂಬಿಕೆ ಇದೆ ಆ ನಿಟ್ಟಿನಲ್ಲಿ ಸೋಮಶೇಖರಗೌಡರು ತಮ್ಮ ಕುಟುಂಬದ ಸಹಕಾರವನ್ನು ಮನದುಂಬಿ ಆತ್ಮಕಥನದಲ್ಲಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.


ಶ್ರೀರಂಗಪಟ್ಟಣದ ಚಂದ್ರವನ ಆಶ್ರಮ ಮತ್ತು ಬೇಬಿಮಠದ ಪೀಠಾಧಿಪತಿ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಪ್ರತಿ ಕ್ಷಣವೂ ಸಹ ನಮಗೆ ಭಗವಂತನೇ ಕೊಟ್ಟಿದ್ದು. ಹಾಗಾಗಿ ಕೃತಿಗೆ ದೇವರ ದಿನಗಳು ಎಂದು ಶೀರ್ಷಿಕೆ ನೀಡಿರುವುದು ಸೂಕ್ತವಾಗಿದೆ. ನನ್ನದು ಎನ್ನುವುದು ನಮ್ಮ ಸಮಯ ಮಾತ್ರ. ಅದನ್ನು ಭಗವಂತ ಕರುಣಿಸಿದ್ದಾನೆ. ದೇವರು ನೀಡಿದ ಸಮಯದಲ್ಲಿ ನಾವು ಮಾಡುವ ಒಳ್ಳೆಯ ಕೆಲಸವೇ ಮುಖ್ಯವಾಗುತ್ತವೆ ಎಂದು ತಿಳಿಸಿದರು.

ಸಮಯ ಕಳೆದುಕೊಂಡರೇ ಎಷ್ಟೇ ಕೋಟಿ ಕೊಟ್ಟರು ಅದು ವಾಪಸ್ಸು ಬರುವುದಿಲ್ಲ. ಹಾಗಾಗಿ ಭಗವಂತ ಕೊಟ್ಟ ಸಮಯ ವ್ಯರ್ಥ ಮಾಡಿಕೊಳ್ಳಬಾರದು. ದೇವರು ಕೊಟ್ಟ ಒಂದೊಂದು ಕ್ಷಣವನ್ನೂ ಸೋಮಶೇಖರಗೌಡರು ದೇವರ ನಾಮಸ್ಮರಣೆಯಲ್ಲಿ ಕಳೆದಿದ್ದಾರೆ. ಆ ಮೂಲಕ ಭಗವಂತನಿಗೆ ಸೋಮಶೇಖರಗೌಡ ಕೃತಜ್ಞತೆ ಸಲ್ಲಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ.ಸೋಮಶೇಖರಗೌಡ ಮಾತನಾಡಿ, 'ದೇವರ ದಿನಗಳು' ನನ್ನ ಬದುಕಿನ ನಿಜ ಕಥನ. ದೇವರನ್ನು ನಂಬಿದರೆ ಆತ ಎಂದಿಗೂ ಕೈಬಿಡುವುದಿಲ್ಲ ಎಂಬುದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿ. ನನ್ನ ಆತ್ಮಕಥೆಯ ಬಹುಭಾಗ ನನ್ನ ಮಡದಿಯ ಆತ್ಮಕಥೆಯೂ ಆಗಿದೆ ಎಂದು ಹೇಳಿದರು.

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್ ಪ್ರಸ್ತಾವಿಕವಾಗಿ ಮಾತನಾಡಿ, ನನ್ನ ಪತಿ ಪ್ರೊ.ಸೋಮಶೇಖರಗೌಡ ಅವರು ಇಂದಿಗೆ 75 ವರ್ಷಗಳನ್ನು ಪೂರೈಸಿ, 76ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ನಿವೃತ್ತಿಯಾಗಿ 15 ವರ್ಷ ಕಳೆದರೂ ಬರೆಯಿರಿ ಎಂದರೂ ಬರೆಯದೇ ಇದ್ದವರು ಕೇವಲ 2 ತಿಂಗಳಲ್ಲಿ ತಮ್ಮ ಆತ್ಮಕಥನ ಬರೆದು ಮುಗಿಸಿದ್ದಾರೆ. ಶ್ರೀರಾಮ ಅವರ ಆರಾಧ್ಯ ದೈವ. ಕಾಲದ ಜೊತೆಗೆ ಸಂಯಮ ಮತ್ತು ಸಹನೆಯಿಂದ ಹೆಜ್ಜೆ ಹಾಕಿದರೆ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂಬುದಕ್ಕೆ ನಮ್ಮ ಬದುಕು ಸಾಕ್ಷಿ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರೊ.ಸೋಮಶೇಖರಗೌಡ ಮತ್ತು ಪ್ರೊ.ಪದ್ಮಾಶೇಖರ್ ದಂಪತಿಯನ್ನು ಸನ್ಮಾನಿಸಲಾಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರೊ.ಸೋಮಶೇಖರಗೌಡರ ಪುತ್ರ ಪ್ರೀತಮ್ ಎಸ್.ಗೌಡ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ಭಾನುವಾರ ಪ್ರೊ.ಸೋಮಶೇಖರಗೌಡ ಅವರ 'ದೇವರ ದಿನಗಳು' ಆತ್ಮಕಥನ ಬಿಡುಗಡೆ ಮಾಡಲಾಯಿತು.

ದೇವರು ಕೊಟ್ಟ ಬೋನಸ್

'ದೇವರ ದಿನಗಳು' ಆತ್ಮಕಥನದಲ್ಲಿ 3ನೇ ಒಂದು ಭಾಗ ಹೆಸರುಗಳೇ ಇವೆ. ಅಷ್ಟೂ ಹೆಸರುಗಳನ್ನು ಪ್ರೊ.ಸೋಮಶೇಖರಗೌಡ ನೆನಪು ಇಟ್ಟುಕೊಂಡಿದ್ದಾರೆ. ಆ ಮೂಲಕ ತಮ್ಮ ಸಹಾಯಕ್ಕೆ ಧಾವಿಸಿದ ಯಾರನ್ನೂ ಮರೆಯದೇ ಕೃತಿಯಲ್ಲಿ ಕೃತಜ್ಞತೆ ಅರ್ಪಿಸಿದ್ದಾರೆ. ಜೀವನದ ಪ್ರತಿಯೊಂದು ಕ್ಷಣ ಕೂಡ ದೇವರಲ್ಲಿ ನಂಬಿಕೆ ಹೊಂದಿರುವ ಅವರು, ಪ್ರತಿಯೊಂದು ಕ್ಷಣವನ್ನು ದೇವರು ಕೊಟ್ಟ ಬೋನಸ್ ಎಂದು ಭಾವಿಸಿದ್ದಾರೆ. ಸಹಜ ಸರಳ ಭಾಷೆಯಲ್ಲಿ ತಮ್ಮ ಜೀವನದಲ್ಲಿ ನೆಡೆದಿದ್ದನ್ನು ವಿವರಿಸಿದ್ದಾರೆ.

-ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ

ಆರು ದಶಕ ಆಳಿದ ಕಾಂಗ್ರೆಸ್ ರೈತರ ಬದುಕ ಬರಡಾಗಿಸಿತು

● ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ನಂಜುಂಡೇಗೌಡ ಆರೋಪ ● ರೈತರ ಬದುಕು ಹಸನು ಮಾಡಲು ಬಿಜೆಪಿ ಸರ್ಕಾರ ಸಾಕಷ್ಟು ಯೋಜನೆ ನೀಡಿದೆ

ಮೈಸೂರು, ಏ.16(ಎಸ್‌ಬಿಡಿ)– ದೇಶದಲ್ಲಿ ಆರು ದಶಕಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿರುವ ಕಾಂಗ್ರೆಸ್, ರೈತರ ಬದುಕನ್ನು ನಿರ್ಲಕ್ಷಿಸಿದೆ ಎಂದು ಬಿಜೆಪಿ ರೈತಮೋರ್ಚಾ ರಾಜ್ಯ ಉಪಾಧ್ಯಕ್ಷ ನಂಜುಂಡೇಗೌಡ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸುದೀರ್ಘ ಆಡಳಿತ ನಡೆಸಿದ ಕಾಂಗ್ರೆಸ್ ರೈತರ ಆರ್ಥಿಕ ಅಭಿವೃದ್ಧಿಗೆ ಪ್ರಯತ್ನವನ್ನೇ ಮಾಡಲಿಲ್ಲ. ಆದರೆ ರೈತರ ಬದುಕನ್ನು ಹಸನು ಮಾಡುವ ನಿಟ್ಟಿನಲ್ಲಿ ಬಿಜೆಪಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರಧಾನಿ ಮೋದಿಯವರು ರೈತರ ಆದಾಯವನ್ನು ದ್ವಿಗುಣಗೊಳಿಸಲು ನೆರವಾಗುವ ಕಾರ್ಯಕ್ರಮಗಳನ್ನು ನೀಡಿದ್ದಾರೆ ಎಂದು ಹೇಳಿದರು.

ದೇಶದ 80 ಕೋಟಿ ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹ ಧನ ತಲುಪಿಸುವ ವ್ಯವಸ್ಥೆ ಜಾರಿಗೆ ತರುವ ಮೂಲಕ ಮೋದಿ ಅವರು, ನೆರವು ಸೋರಿಕೆಯಾಗದಂತೆ ತಡೆದರು. ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ 80 ಕೋಟಿ ಜನರಿಗೆ ಆಹಾರ ಧಾನ್ಯ ಕಲ್ಪಿಸಿದರು. ಇಂತಹ ಹತ್ತಾರು ಕ್ರಮಗಳನ್ನು ಹಳ್ಳಿಯ ಜನ ಮೆಚ್ಚಿದ್ದಾರೆ. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಹೈನುಗಾರಿಕೆಗೆ ಪ್ರೋತ್ಸಾಹ ನೀಡಿದರು. ಸರ್ಕಾರದ ವತಿಯಿಂದ ಲೀಟರ್ ಹಾಲಿಗೆ 3 ರೂ. ಪ್ರೋತ್ಸಾಹ ಧನ ನೀಡುವ ಯೋಜನೆ ಆರಂಭಿಸಿದರು. ಬಸವರಾಜ ಬೊಮ್ಮಾಯಿ ಅವರು ಸಿಎಂ ಆದ ಮೇಲೆ ಪ್ರೋತ್ಸಾಹ ಧನವನ್ನು 5 ರೂ.ಗೆ ಹೆಚ್ಚಳ ಮಾಡಿದರು. ಈ ಮೂಲಕ ಬಿಜೆಪಿ ಲಕ್ಷಾಂತರ ಮಂದಿ ರೈತರ ಬದುಕಿಗೆ ಆಸರೆಯಾಗಿದೆ ಎಂದು ತಿಳಿಸಿದರು.

ಜೆಡಿಎಸ್ ಹಾಗೂ ಕಾಂಗ್ರೆಸ್‌ನವರು ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮನ್‌ಮುಲ್)ವನ್ನು ಹಾಳು ಮಾಡಿದರು. ಒಕ್ಕೂಟದಲ್ಲಿ ಭ್ರಷ್ಟಾಚಾರ, ಹಗರಣಗಳ ಬಗ್ಗೆ ತನಿಖೆ ನಡೆಸಿ, ವರದಿ ನೀಡಲಾಗಿದ್ದು ಅದನ್ನು ಮುಚ್ಚಿ ಹಾಕಿದ್ದಾರೆ. ಒಕ್ಕೂಟದ ನಿರ್ದೇಶಕರು ಕೋಟಿ ಕೋಟಿ ಆಸ್ತಿ ಮಾಡಿಕೊಂಡು, ಎಂಎಲ್‌ಎ ಆಗುವ ಮಟ್ಟಕ್ಕೆ ಬೆಳೆದಿದ್ದಾರೆ ಎಂದು ಇದೇ ವೇಳೆ ಆರೋಪಿಸಿದರು.

ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಡಾ.ನವೀನ್ ಮಾತನಾಡಿ, ಅಮೂಲ್‌ನೊಂದಿಗೆ ನಂದಿನಿ ಹಾಲು ಒಕ್ಕೂಟವನ್ನು ಯಾವುದೇ ಕಾರಣಕ್ಕೂ ವಿಲೀನ ಮಾಡುವುದಿಲ್ಲ. ಕೇಂದ್ರ ಸಹಕಾರ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಅಮೂಲ್ ಸಹಕಾರವನ್ನು ಪಡೆದು ನಂದಿನಿ ಹಾಲು ಒಕ್ಕೂಟ ಮತ್ತಷ್ಟು ಬೆಳೆಯಬೇಕು ಎಂದು ಹೇಳಿದರು. ಆದರೆ ಕಾಂಗ್ರೆಸ್ ಹಾಗೂ ಜೆಡಿಎಸ್‌ನವರು ಅಮಿತ್ ಶಾ ಅವರ ಹೇಳಿಕೆಯನ್ನೇ ತಿರುಚಿ, ಅಮೂಲ್‌ನೊಂದಿಗೆ ನಂದಿನಿ ವಿಲೀನ ಮಾಡುತ್ತಾರೆ ಎಂಬ ಸುಳ್ಳು ಸುದ್ದಿ ಹರಡಿ, ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರ ಹೈನುಗಾರಿಕೆ, ಪಶುಸಂಗೋಪನೆ ಇಲಾಖೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದರಿಂದ ರೈತರು ಸಂಕಷ್ಟಕ್ಕೆ ಸಿಲುಕುವಂತಾಯ್ತು. ಜಾನುವಾರುಗಳಿಗೆ ಚರ್ಮಗಂಟು ರೋಗ ಹರಡಿರುವುದು ಹಾಗೂ ಬೇಸಿಗೆಯಿಂದ ಹಸಿರು ಮೇವು ಸಮರ್ಪಕವಾಗಿಲ್ಲದ ಕಾರಣ ಹಾಲು ಉತ್ಪಾದನೆ ಸ್ವಲ್ಪ ಮಟ್ಟಿಗೆ ಕುಸಿದಿದೆ ಆದರೆ ಇದು ಅಮುಲ್–ನಂದಿನಿ ವಿಲೀನಗೊಳಿಸುವ ಹುನ್ನಾರ ಎಂದು ಕಾಂಗ್ರೆಸ್ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಕಾಂಗ್ರೆಸ್ ಆಡಳಿತದ ಕಾಲದಲ್ಲಿ ಗೋಮಾಳಗಳನ್ನೂ ಇಲ್ಲದಂತೆ ಮಾಡಿ, ಗೋಹತ್ಯೆ ಹೆಚ್ಚಿಸಿದರು. ಅಧಿಕಾರಕ್ಕೆ ಬಂದರೆ ಗೋಹತ್ಯೆ ನಿಷೇಧ ಕಾಯ್ದೆಯನ್ನೇ ರದ್ದು ಮಾಡುವುದಾಗಿ ಹೇಳಿದ್ದಾರೆ. ಇದಕ್ಕೆಲ್ಲಾ ಜನ ಉತ್ತರಿಸುತ್ತಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ರಮೇಶ್, ನಗರಾಧ್ಯಕ್ಷ ದೇವರಾಜ್, ಬಿಜೆಪಿ ವಕ್ತಾರ ಡಾ.ವಸಂತ್ ಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಪ್ರದೀಪ್ ಕುಮಾರ್, ನಾಗೇಶ್ ಮತ್ತಿತರರಿದ್ದರು.



ಸುಡಾನ್ ಸೇನಾ ಸಂಘರ್ಷ: 65 ಮಂದಿ ಸಾವು

ಖಾರ್ಟೂಮ್, ಏ.16– ಸುಡಾನ್ ನಡೆಯುತ್ತಿರುವ ಸೇನಾ ಸಂಘರ್ಷದಲ್ಲಿ ಓರ್ವ ಭಾರತೀಯ ಸೇರಿದಂತೆ ಕನಿಷ್ಠ 65 ಮಂದಿ ಸಾವಿಗೀಡಾಗಿದ್ದು, 500 ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.


ಇಲ್ಲಿನ ಮಿಲಿಟರಿ ಹಾಗೂ ಪ್ಯಾರಾ ಮಿಲಿಟರಿ ನಡುವೆ ಸಂಘರ್ಷ ಸಂಭವಿಸಿದ ಪರಿಣಾಮ ಕನಿಷ್ಠ 65 ಮಂದಿ ಸಾವಿಗೀಡಾಗಿದ್ದು, ಈ ಪೈಕಿ ಸುಡಾನ್ ನಲ್ಲಿ ಕೆಲಸ ಮಾಡುತ್ತಿದ್ದ ಓರ್ವ ಭಾರತ ಮೂಲದ ವ್ಯಕ್ತಿ ಕೂಡ ಸೇರಿದ್ದಾರೆ ಎನ್ನಲಾಗಿದೆ. ಮೃತ ವ್ಯಕ್ತಿಯ ದೇಹದ ಮೇಲೆ ಗುಂಡಿನ ಗಾಯಗಳಾಗಿದ್ದು, ಆತ ಸೇನಾ ಗುಂಡಿಗೆ ಬಲಿಯಾಗಿರಬಹುದು ಎಂದು ಶಂಕಿಸಲಾಗಿದೆ.

"ಸೂಡಾನ್‌ನ ದಾಲ್ ಗ್ರೂಪ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಪ್ರಜೆ ಆಲ್ಬರ್ಟ್ ಆಗಸ್ಟಿನ್ ನಿನ್ನೆ ದಾರಿತಪ್ಪಿ ಸಂಘರ್ಷ ಪೀಡಿತ ಪ್ರದೇಶಕ್ಕೆ ತೆರಳಿದ್ದಾಗ ಗುಂಡು ತಗುಲಿ ಗಾಯಗೊಂಡು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ' ಎಂದು ಸುಡಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಟ್ವೀಟ್ ಮಾಡಿದೆ.

ಅಂತೆಯೇ ರಾಯಭಾರ ಕಚೇರಿ ಆಗಸ್ಟೀನ್ ಅವರ ಕುಟುಂಬ ಮತ್ತು ವೈದ್ಯಕೀಯ ಪ್ರಾಧಿಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮುಂದಿನ ವ್ಯವಸ್ಥೆಗಳನ್ನು ಮಾಡುತ್ತಿದೆ ಎಂದು ಮಾಹಿತಿ ನೀಡಿದೆ. ಇನ್ನು ಈ ಘಟನೆಯಲ್ಲಿ 500ಕ್ಕೂ ಹೆಚ್ಚಿನವರಿಗೆ ಗಂಭೀರ ಗಾಯಗಳಾಗಿವೆ ಎಂದು ಸುಡಾನ್ ಕೇಂದ್ರ ವೈದ್ಯಕೀಯ ಮಂಡಳಿಯು ತಿಳಿಸಿದೆ.

ಟೈಕಾನ್ ಮೈಸೂರು–2023 ಸಮ್ಮೇಳನಕ್ಕೆ ತೆರೆ

ಉದ್ಯಮ ಬೆಳವಣಿಗೆ, ನವೋದ್ಯಮಿಗಳಿಗೆ ಪ್ರೇರಣಾಪೂರ್ವಕ ಅನೇಕ ಮೌಲಿಕ ಚರ್ಚೆ





'ಟೈ' ಮೈಸೂರು ಘಟಕದ ವತಿಯಿಂದ ಕೇನ್ಸ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್ ಅವರಿಗೆ ಟೈಕಾನ್ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮತ್ತೊಂದು ಚಿತ್ರದಲ್ಲಿ 'ಟೈಕಾನ್ ಮೈಸೂರು–2023' ಸಮ್ಮೇಳನದ ಸರ್ವ ಸದಸ್ಯರನ್ನು ಕಾಣಬಹುದು

ಮೈಸೂರು, ಏ.16(ಎಂಕೆ)– ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ 'ಟೈ' ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ಟೈಕಾನ್ ಮೈಸೂರು–2023(TiECON Mysuru 2023) ಸಮ್ಮೇಳನ'ಕ್ಕೆ ತೆರೆಬಿದ್ದಿತು.

'ಉದ್ಯಮ ಬೆಳವಣಿಗೆ (Scalability) ಮತ್ತು ಸುಸ್ಥಿರತೆ (Sustainability) ವಿಷಯಾಧಾರಿತವಾಗಿ ನಡೆದ ಸಮ್ಮೇಳನದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು ಅವರು 'ಬೆಂಗಳೂರಿನ ಆಚೆ' ಪರಿಕಲ್ಪನೆ ಬಗ್ಗೆ ವಿಚಾರ ಮಂಡಿಸಿದರೆ, 'ಎರಡನೇ ಶ್ರೇಣಿ ನಗರಗಳಲ್ಲಿ ಉದ್ಯಮದ ಬೆಳವಣಿಗೆಯ ಸವಾಲುಗಳು' ವಿಷಯ ಕುರಿತು ಸೇಫ್ ಹ್ಯಾಂಡ್ಸ್ 24/7 ಸರ್ವೀಸಸ್‌ನ ಸಂಸ್ಥಾಪಕ ನಿರ್ದೇಶಕಿ ಶ್ರಾವಣಿ ಪವಾರ್ ಮತ್ತು ಆರ್–ಪ್ರೋಸೆಸ್ ಔಟ್‌ಸೋರ್ಸಿಂಗ್ ಸರ್ವೀಸಸ್‌ನ ಸಂಸ್ಥಾಪಕಿ ಮತ್ತು ಸಿಇಓ ಸವಿತಾ ಮಲ್ಲಪ್ಪ ಅವರೊಂದಿಗೆ ಪ್ಯಾನೆಲ್ ಚರ್ಚೆ ನಡೆಯಿತು.

ಹಾಗೆಯೇ ಹೊಸ ತಂತ್ರಜ್ಞಾನಗಳು, ಹೊಸ ಮಾರುಕಟ್ಟೆಗಳು ಮತ್ತು ಹೊಸ ವ್ಯವಸ್ಥೆಗಳು' ಕುರಿತು ಮುಕುಂದ ಫುಡ್ಸ್‌ನ ಸಿಇಓ ಈಶ್ವರ್ ಕೆ.ವಿಕಾಸ್, ಆರ್ಟ್ ಪಾರ್ಕ್‌ನ ಸಿಇಓ ಉಮಾಕಾಂತ್ ಸೋನಿ ಹಾಗೂ ಸಿಪ್ಲೈನ ಸಿಇಓ ಸೌಸ್ತವ್ ಚಕ್ರವರ್ತಿ ಅವರೊಂದಿಗೆ ಪ್ಯಾನೆಲ್ ಚರ್ಚೆಯಾಯಿತು.

ಸಾಧನೆಗೆ ಸಂವಹನ ಅತ್ಯಂತ ಅಗತ್ಯ: 'ಸ್ಟೋರಿ ಆಫ್ ರೆಸಿಲಿಯೆನ್ಸ್ ಅಂಡ್ ಟಾಲೆರೆನ್ಸ್' ಕುರಿತು ಮಾತನಾಡಿದ ಭಾರತದ ಅಂಧರ ಕ್ರಿಕೆಟ್ ತಂಡದ ಕ್ಯಾಪ್ಟನ್ ಶೇಖರ್ ನಾಯ್ಕ್, ಸಾಧನೆಗೆ ಸಂವಹನ ಅತ್ಯಂತ ಅಗತ್ಯವಾಗಿದೆ. ಕ್ರಿಕೆಟ್ ತಂಡದಲ್ಲಿ ಪರಸ್ಪರ ಚರ್ಚೆ ಮೂಲಕ ಯೋಜನೆಗಳನ್ನು ರೂಪಿಸಬೇಕು. 2002ರ ಅಂಧರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಸಂವಹನದ ಕೊರತೆಯಿಂದಾಗಿ ಸೋತೆವು. ಅಂದಿನಿಂದಲೇ ಹಲವು ಭಾಷೆಗಳನ್ನು ಕಲಿಯಲು ಆರಂಭಿಸಿದೆ. ಇಂದು ನನಗೆ 9 ಭಾಷೆಗಳನ್ನು ಅರ್ಥಮಾಡಿಕೊಂಡು ಮಾತನಾಡಲು ಬರುತ್ತದೆ ಎಂದರು.

ಕಲಿಕೆಯೇ ಜೀವನ: ಕಲಿಕೆ ಬಹಳ ಮುಖ್ಯವಾಗಿದ್ದು, ಮನುಷ್ಯನ ಕಡೆಯ ಉಸಿರಿರುವವರೆಗೂ ನಿರಂತರವಾಗಿರುತ್ತದೆ. ಹೇಗಾದರೂ ಸರಿಯೇ ಕಲಿಯುವುದು ಮುಖ್ಯ. 2006ರಲ್ಲಿ ನಡೆದ ಅಂಧರ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಾಗಿ ಪಾಕಿಸ್ತಾನಕ್ಕೆ ಹೋಗುವಾಗ ವೈಯಕ್ತಿಕವಾಗಿ ಹೆಮ್ಮೆ ಎನ್ನಿಸಿತ್ತು. 2010ರಲ್ಲಿ ತಂಡ ನಾಯಕನಾಗಿ ಆಯ್ಕೆಯಾದಾಗ ನಮ್ಮ ತಾಯಿ ಹೇಳಿದ್ದನ್ನು ಸ್ಮರಿಸಿಕೊಳ್ಳುತ್ತಿದ್ದೆ. ನಂತರ ಇಂಗ್ಲೆಂಡ್ ವಿರುದ್ಧ ನಡೆದ ಏಕದಿನ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಮಾಡಿದ್ದೆವು. 2012ರಲ್ಲಿ ನಡೆದ ಮೊದಲ ಟಿ20 ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆವು. ಇದೆಲ್ಲಕ್ಕೂ ನಿರಂತರ ಕಲಿಕೆ, ಆತ್ಮವಿಶ್ವಾಸವೇ ಕಾರಣ. ಅಂಗವಿಕಲತೆ ಸಮಸ್ಯೆ ಇದ್ದರೂ ಸಾಧಿಸಬಹುದು. ಆದರೆ ನಮ್ಮ ಆಲೋಚನೆಯಲ್ಲಿ ಅಂಗವಿಕಲತೆ ಇರಬಾರದು ಎಂದು ಸಲಹೆ ನೀಡಿದರು.

'ಭಾರತಕ್ಕಾಗಿ ನಿರ್ಮಾಣ' ಕುರಿತು ವಿಚಾರ ಮಂಡಿಸಿದ ಟೈ ಬೆಂಗಳೂರು ಅಧ್ಯಕ್ಷ ಮದನ್ ಪದಕಿ, 'ಆತ್ಮನಿರ್ಭರ್ ಭಾರತ್' ಸಾಕಾರಗೊಳ್ಳಬೇಕಾದರೆ 'ಆಕಾಂಕ್ಷೆ, 'ಆತ್ಮವಿಶ್ವಾಸ', 'ಅಂತರ್ ಪ್ರೇರಣಾ' ಹಾಗೂ 'ಅಂತರ್ಜಾಲ' ಅತೀ ಮುಖ್ಯವಾಗಿದೆ. ಉದ್ಯಮಿಗಳು ಎಲ್ಲೆಡೆ ಇದ್ದಾರೆ. ಆದರೆ ಅವರಿಗೆ ಸೂಕ್ತ ಮಾರ್ಗ ದರ್ಶನ ಹಾಗೂ ಆತ್ಮವಿಶ್ವಾಸ ತುಂಬುವ ಕಾರ್ಯವಾಗಬೇಕಾಗಿದೆ ಎಂದು ಹೇಳಿದರು. ಬಳಿಕ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಅಭಿನಂದಿಸಲಾಯಿತು.

ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ...

ಇದೇ ವೇಳೆ ಕೇನ್ಸ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್ ಅವರಿಗೆ ಟೈಕಾನ್ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅವರೊಂದಿಗೆ ನಡೆದ 'ಐಪಿಓಗೆ ಹಾದಿ' ಕುರಿತ ಚರ್ಚೆಯಲ್ಲಿ ಸರ್ಕಾರ ಎಲೆಕ್ಟ್ರಾನಿಕ್ ಸಿಸ್ಟಂ ಜಾರಿಗೊಳಿಸಿದ್ದರಿಂದ ಎಲೆಕ್ಟ್ರಾನಿಕ್ ವಸ್ತುಗಳಿಗೆ ಮಾರುಕಟ್ಟೆ ಸೃಷ್ಟಿಯಾಗಿದೆ. ದೊಡ್ಡ ದೊಡ್ಡ ಕಂಪನಿಗಳಿಂದ ಎಲೆಕ್ಟ್ರಾನಿಕ್ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಮುಂದಿನ 8–10 ವರ್ಷದಲ್ಲಿ ಭಾರತ ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಬಹುದೊಡ್ಡ ಸ್ಥಾನಕ್ಕೆ ತಲುಪಲಿದೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಶೆಟ್ಟರ್ ಕರೆತರಲು ಶಿವಶಂಕರಪ್ಪ, ಎಂ.ಬಿ.ಪಾಟೀಲ್‌ಗೆ ಜವಾಬ್ದಾರಿ



ಬೆಂಗಳೂರು, ಏ.16– ಟಿಕೆಟ್ ಕೈ ತಪ್ಪಿದ್ದರಿಂದ ಬಿಜೆಪಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಿರಿಯ ನಾಯಕ ಜಗದೀಶ್ ಶೆಟ್ಟರ್ ಅವರನ್ನು ಕಾಂಗ್ರೆಸ್‌ಗೆ ಕರೆತರಲು ಲಿಂಗಾಯಿತ ನಾಯಕರಾದ ಎಂಬಿ ಪಾಟೀಲ್ ಹಾಗೂ ಶಾಮನೂರು ಶಿವಶಂಕರಪ್ಪ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಬೀಗರಾಗಿರುವ ಜಗದೀಶ್ ಶೆಟ್ಟರ್ ಜೊತೆಗೆ ಶಾಮನೂರು ಶಿವಶಂಕರಪ್ಪ ಮಾತುಕತೆ ನಡೆಸಿ, ಕಾಂಗ್ರೆಸ್ ಪಕ್ಷ ಸೇರುವಂತೆ ಮನವೊಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶಾಮನೂರು ಶಿವಶಂಕರಪ್ಪ ಅವರ ಸೂಚನೆ ಮೇರೆಗೆ ಜಗದೀಶ್ ಶೆಟ್ಟರ್ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಆಗಮಿಸಿದ್ದು, ರಾತ್ರಿ ಕಾಂಗ್ರೆಸ್ ಮುಖಂಡರೊಂದಿಗೆ ಚರ್ಚೆ ಬಳಿಕ ನಾಳೆ ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ ಎಂದು ನಂಬಲರ್ಹ ಮೂಲಗಳು ತಿಳಿಸಿವೆ. ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿರುವ ಎಂಬಿ ಪಾಟೀಲ್ ಕೂಡ ಶೆಟ್ಟರ್ ಅವರ ಸಂಬಂಧಿಯಾಗಿದ್ದು, ಕಾಂಗ್ರೆಸ್ ವರಿಷ್ಠರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶೆಟ್ಟರ್ ಪಕ್ಷ ಸೇರ್ಪಡೆ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಶೆಟ್ಟರ್ ಸೇರ್ಪಡೆಯಿಂದ ಬಿಎಸ್ ಯಡಿಯೂರಪ್ಪ ಪ್ರಭಾವದಿಂದ ಬಿಜೆಪಿಗೆ ವೋಟ್ ಬ್ಯಾಂಕ್ ಆಗಿರುವ ಲಿಂಗಾಯತ ಮತದಾರರನ್ನು ಕಾಂಗ್ರೆಸ್‌ನತ್ತ ಸೆಳೆಯಲು ನೆರವಾಗಲಿದೆ ಎಂದು ಮೂಲಗಳು ಹೇಳಿವೆ.

ಐದನೇ ಪುಟದಿಂದ

ಪೈಲ್ವಾನರ ಅಖಾಡ 'ಚಾಮರಾಜ'

ಕಾಲಾನುಸಾರ ನಗರೀಕರಣದಿಂದ ಕೃಷಿಯಿಂದ ಜನ ವಿಮುಖರಾದರೂ ಈ ನೆಲದಲ್ಲಿ ಹಳ್ಳಿಯ ಸೊಗಡು ಕರಗಿಲ್ಲ. ಹಸು, ಹೋರಿ, ಎತ್ತು ಇನ್ನಿತರ ಜಾನುವಾರು ಸಲಹುವುದು ಸೇರಿದಂತೆ ಹಿಂದಿನ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕೆ.ಜಿ.ಕೊಪ್ಪಲು ಸಾಂಪ್ರದಾಯಿಕ ಕುಸ್ತಿ ಕ್ರೀಡೆ, ಪೌರಾಣಿಕ ನಾಟಕವೂ ಸೇರಿದಂತೆ ಜಾನಪದ ಕಲೆಗೆ ಪ್ರಸಿದ್ಧಿ. ಹಿಂದೆ ಅಜಾನುಭಾಹು ಪೈಲ್ವಾನರುಗಳಿದ್ದರಂತೆ. ಈಗಲೂ ಸಾಕಷ್ಟು ಗರಡಿ ಮನೆಗಳಿದ್ದು, ಕುಸ್ತಿಯನ್ನು ಉಳಿಸಿಕೊಂಡು ಬರಲಾಗಿದೆ. ಚಿಕ್ಕ ವಯಸ್ಸಿನಿಂದಲೂ ಕುಸ್ತಿ ಕಲಿಸಲಾಗುತ್ತದೆ. ಇನ್ನು ಪರಂಪರಾಗತ ಧಾರ್ಮಿಕ ಆಚರಣೆಗಳನ್ನೂ ಮರೆತಿಲ್ಲ. ಚಾಮುಂಡೇಶ್ವರಿ ಹಬ್ಬ, ಗ್ರಾಮ ದೇವತೆ ಹಬ್ಬ ಸೇರಿದಂತೆ ಹಲವು ಹಬ್ಬಗಳನ್ನು ಅತ್ಯಂತ ವೈಭವದಿಂದ ನೆರವೇರಿಸಲಾಗುತ್ತದೆ. ಪ್ರತಿ ಹಬ್ಬದಲ್ಲೂ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಆಚರಣೆಯಲ್ಲೂ ಸಾರ್ಥಕತೆ ಮೆರೆಯಲಾಗುತ್ತದೆ. ಈ ವೇಳೆ ಕುಸ್ತಿ, ನಾಟಕ ಮನರಂಜನೆ ಇದ್ದೇ ಇರುತ್ತದೆ.

ರೈತಾಪಿ ಸಮುದಾಯದ ನೆಲೆಯಾಗಿದ್ದ ಕೆ.ಜಿ.ಕೊಪ್ಪಲು, ಪ್ರಮುಖ ಆರ್ಥಿಕ ಕೇಂದ್ರವೂ ಆಗಿತ್ತು. ನಂತರದಲ್ಲಿ ಸಾಮಾಜಿಕ ಸೇವೆಯ ಮೂಲಕವೂ ಪ್ರಸಿದ್ಧಿ ಪಡೆಯಿತು. ಕಾಲ ಕಳೆದಂತೆ ಇಲ್ಲಿನ ಜನರಲ್ಲಿ ರಾಜಕೀಯ ಆಸಕ್ತಿಯೂ ಹೆಚ್ಚಾಯಿತು. ರಾಜಕೀಯವಾಗಿಯೂ ಪ್ರಬಲರಾಗಬೇಕೆಂಬ ನಿಟ್ಟಿನಲ್ಲಿ ಮುನ್ನಡೆದರು. ಇದೀಗ ವಿಧಾನಸಭಾ ಚುನಾವಣೆಯಲ್ಲೂ ಸ್ಪರ್ಧಿಸುವಷ್ಟು ಪ್ರವರ್ಧಮಾನ ಸೃಷ್ಟಿಯಾಗಿದೆ. ಪರಿಣಾಮವಾಗಿ ಪ್ರಮುಖ ಮೂರೂ ಪಕ್ಷಗಳ ಟಿಕೆಟ್ ಪಡೆಯುವಲ್ಲಿ ಕೆ.ಜಿ.ಕೊಪ್ಪಲಿನವರು ಯಶಸ್ವಿಯಾಗಿದ್ದಾರೆ.

ಅಖಂಡ ರಾಜೀನಾಮೆ

ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಟಿಕೆಟ್ ಪ್ರಕಟವಾಗದಿದ್ದರಿಂದ ಆಕ್ರೋಶಗೊಂಡಿರುವ ಶ್ರೀನಿವಾಸ ಮೂರ್ತಿ ಕಾಂಗ್ರೆಸ್ ತೊರೆಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಇಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಅನಂತರ ಪಕ್ಷಕ್ಕೂ ರಾಜೀನಾಮೆ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ. ಸಿದ್ದರಾಮಯ್ಯ ಅವರು ಅಖಂಡ ಪರವಿದ್ದು, ಡಿಕೆಶಿಯವರು ಬೇರೆಯವರಿಗೆ ಟಿಕೆಟ್ ಕೊಡಬೇಕೆಂದಿದ್ದಾರೆ. ಈ ಕಾರಣದಿಂದ ಅಖಂಡ ಅವರು ಪಕ್ಷ ತೊರೆಯುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಡಿಜೆ ಹಳ್ಳಿ ಹಾಗೂ ಕೆಜಿ ಹಳ್ಳಿ ಗಲಭೆಗೆ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಧೋರಣೆಯೇ ಕಾರಣ ಎಂದು ಅಲ್ಪಸಂಖ್ಯಾತ ಮುಖಂಡರು ಆರೋಪಿಸಿದ್ದು, ಅವರಿಗೆ ಟಿಕೆಟ್ ನೀಡದಂತೆ ಕಾಂಗ್ರೆಸ್‌ಗೆ ಒತ್ತಡ ಹಾಕಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪುಲಿಕೇಶಿನಗರ ಟಿಕೆಟ್ ಘೋಷಣೆ ಗೊಂದಲದ ಗೂಡಾಗಿದೆ. ಈ ಬೆಳವಣಿಗೆಯಿಂದ ಬೇಸತ್ತಿರುವ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

ಕೈಗಾರಿಕೋದ್ಯಮಿ ಹತ್ಯೆ

ತಂದೆ–ತಾಯಿಯ ಯೋಗಕ್ಷೇಮ ವಿಚಾರಿಸಿ ಒಂದೆರಡು ದಿನ ಗ್ರಾಮದಲ್ಲೇ ಇದ್ದು ಬೆಂಗಳೂರಿಗೆ ಹಿಂತಿರುಗುತ್ತಿದ್ದರು. ಹೀಗೆ ಅವರು ಕಳೆದ ಫೆಬ್ರವರಿಯಲ್ಲಿ ಸ್ವಗ್ರಾಮಕ್ಕೆ ಬಂದಿದ್ದಾಗ, ಅದೇ ಗ್ರಾಮದ ಮೂವರು ಇವರ ಮನೆ ಬಳಿ ರಾತ್ರಿ ವೇಳೆ ಬೀದಿ ದೀಪ ಆರಿಸಿ ಅಕ್ರಮವಾಗಿ ಮರ ಕಡಿಯುತ್ತಿದ್ದರು ಎಂದು ಹೇಳಲಾಗಿದ್ದು, ಇದಕ್ಕೆ ಮಧು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಆ ಸಂದರ್ಭದಲ್ಲಿ ಮರ ಕಡಿಯುತ್ತಿದ್ದವರು ಮಧು ಅವರಿಗೆ ಗುಂಡಿಟ್ಟು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು ಎಂದು ಹೇಳಲಾಗಿದೆ. ಆ ಒಂದು ದ್ವೇಷದ ಹಿನ್ನೆಲೆಯಲ್ಲಿ ಅದೇ ವ್ಯಕ್ತಿಗಳು ಮಧು ಅವರ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿರಬಹುದು ಎಂದು ಶಂಕಿಸಿರುವ ಪೊಲೀಸರು, ಈ ಮೂವರಿಗಾಗಿ ಹುಡುಕಾಟ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಕೆ. ರಾಮರಾಜನ್, ಅಡಿಷನಲ್ ಎಸ್ಪಿ ಸುಂದರರಾಜ್, ವಿರಾಜಪೇಟೆ ಡಿವೈಎಸ್ಪಿ ಮೋಹನ್ ಕುಮಾರ್, ವಿರಾಜಪೇಟೆ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವರುದ್ರ, ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನನಗೆ ಕೈ ತಪ್ಪಿದೆ

ಬಲಿಯಾಗುತ್ತಾರೆ ಎಂದು ವಿಷಾದ ವ್ಯಕ್ತಪಡಿಸಿದರು. ಸಾಕಷ್ಟು ವರ್ಷದ ಬಳಿಕ ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿ ಆಡಳಿತ ನಡೆಸಿದರೂ 2019ರ ಲೋಕಸಭಾ ಚುನಾ ವಣೆಯಲ್ಲಿ ಕಾಂಗ್ರೆಸ್ 27 ಸ್ಥಾನಗಳಲ್ಲಿ ಸೋತಿತು. 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿತು. ಇದರ ನೈತಿಕ ಹೊಣೆ ಹೊರಬೇಕಿದ್ದವರು ಯಾರು? ಆದರೆ, ಸೋಲಿನ ಹೊಣೆ ಮಾತ್ರ ತೆಗೆದು ಕೊಳ್ಳಲಿಲ್ಲ. 2018ರ ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಯಾರು ಕಾರಣ ಎಂದು ಪಕ್ಷದ ವರಿಷ್ಠರಿಗೆ ತಿಳಿಸಲಾಗಿದೆ. ಆದರೂ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಿಲ್ಲ. ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆಪ್ತರ ವಿರುದ್ಧ ಕ್ರಮ ಕೈಗೊಳ್ಳದಂತೆ ನೋಡಿ ಕೊಂಡರು. ಆದರೆ ಟೀಕೆ ಮಾಡಿದ ಮಾತ್ರಕ್ಕೆ ಶಾಸಕ ತನ್ವೀರ್ ಸೇಠ್ ಬೆಂಬಲಿಗನನ್ನು ಅಮಾನತು ಮಾಡಲಾಯಿತು. ಇತ್ತ ಚಾಮರಾಜ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿದವರನ್ನು ರಕ್ಷಿಸಿದ್ದಾರೆ ಎಂದು ಕಿಡಿಕಾರಿದರು.

45 ವರ್ಷಗಳಿಂದ ಯಾವ ಕಪ್ಪು ಚುಕ್ಕೆ ಇಲ್ಲದಂತೆ ರಾಜಕಾರಣ ಮಾಡಿದ್ದೇನೆ. ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರದ ನಾಯಕರು ನನ್ನ ಬೆನ್ನು ತಟ್ಟಿದ್ದರು. ನನ್ನದಲ್ಲದ ತಪ್ಪಿಗೆ, ಯಾರದೋ ವೈಯಕ್ತಿಕ ಹಠಕ್ಕೆ ಅನಿರೀಕ್ಷಿತ ಫಲಿತಾಂಶ ಬಂದಿದೆ. ಅನ್ಯಾಯ ಆದಾಗಲೂ ಸಹಿಸಿ ದ್ದೇನೆ. ಅನ್ಯಾಯ ಮಾಡಿದವರಿಗೆ ಬುದ್ಧಿ ಕಲಿಸುವ ಶಕ್ತಿಯೂ ನನಗಿದೆ. ನನಗೆ ಟಿಕೆಟ್ ತಪ್ಪಿಸಿದ ಮಾತ್ರಕ್ಕೆ ನನ್ನ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ. ನಿಷ್ಠುರವಾಗಿ ಮಾತನಾಡುವುದನ್ನು, ಅನ್ಯಾಯದ ವಿರುದ್ಧ ಧ್ವನಿ ಎತ್ತುವು ದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಕವೀಶ್ ಗೌಡ ಬಿಜೆಪಿ ಸೇರ್ಪಡೆಯಿಂದ ಟಿಕೆಟ್ ದೊರೆಯದಿರಲು ಕಾರಣವೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿ ಸಂಸದ ಬಿ.ಎನ್.ಬಚ್ಚೇಗೌಡ ಪುತ್ರನಿಗೆ ಕಾಂಗ್ರೆಸ್ ನೀಡಿಲ್ಲವೇ? ನಮ್ಮ ಸರ್ಕಾರದಲ್ಲಿ ಸಚಿವ ರಾಗಿದ್ದ ಎ.ಮಂಜು ಜೆಡಿಎಸ್‌ನಿಂದ ಸ್ಪರ್ಧಿಸುತ್ತಿದ್ದಾರೆ. ಅವರ ಮಗನಿಗೆ ಕಾಂಗ್ರೆಸ್ ನೀಡಿಲ್ಲವೇ? ಈ ರೀತಿಯ 50 ಉದಾಹರಣೆಗಳನ್ನು ನೀಡಬಲ್ಲೆ ಎಂದು ಪ್ರತಿಕ್ರಿಯಿಸಿದರು. ಚಾಮರಾಜ ಕ್ಷೇತ್ರದಲ್ಲಿ ಆಸ್ಪತ್ರೆ, ಕೈಗಾರಿಕೆ, ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ 5 ಜಿಲ್ಲೆಯ ಜನರಿಗೆ ಅನುಕೂಲವಾಗುವ ಅಭಿವೃದ್ಧಿ ಕೆಲಸ ಮಾಡಿದೆ. ಮಂತ್ರಿಯಾಗಲು ಆಸೆ ಪಡದೇ ಸಾರ್ವಜನಿಕರ ಸೌಲಭ್ಯಕ್ಕೆ ಹೋರಾಟ ಮಾಡಿದೆ. 2018ರಲ್ಲಿ ಗೆಲುವು ಪಡೆದಿದ್ದರೆ ನಿಮ್ಹಾನ್ಸ್ ಘಟಕ, ಕಿದ್ವಾಯಿ ಕೇಂದ್ರ ಸ್ಥಾಪಿಸುವ ಗುರಿ ಹೊಂದಿದ್ದೆ ಎಂದು ತಿಳಿಸಿದರು.

ನನಗೆ ಈ ಹಿಂದೆಯೂ ಅನ್ಯಾಯವಾಗಿತ್ತು. 2000ನೇ ಇಸವಿಯಲ್ಲಿ ಕಾಂಗ್ರೆಸ್ ಸೇರಿದ ಸಂದೇಶ್ ನಾಗರಾಜ್ ಅವರಿಗೆ 2004ರಲ್ಲಿ ಟಿಕೆಟ್ ಕೊಟ್ಟರು. ಆಗಲೂ ನಾನು ಬೇಸರ ಮಾಡಿಕೊಳ್ಳಲಿಲ್ಲ. ಟಿಕೆಟ್ ಸಿಗದಿದ್ದಾಗ, ನಾನು ಸೋತಾಗಲೂ ಪಕ್ಷ ಸಂಘಟನೆ ಮಾಡಿದ್ದೇನೆ. ಚುನಾವಣೆಯಿಂದ ಚುನಾವಣೆಗೆ ಮತ ಪ್ರಮಾಣ ಹೆಚ್ಚಿಸಲು ಪ್ರಯತ್ನಿಸಿದ್ದೇನೆ ಎಂದು ವಿವರಿಸಿದರು. ವರುಣಾ ಕ್ಷೇತ್ರದಲ್ಲಿ ಪ್ರಚಾರಕ್ಕೆ ಕರೆದರೆ ಹೋಗುವ ಧೈರ್ಯ ಮಾಡುವುದಿಲ್ಲ. ಅವರೂ ನನ್ನನ್ನು ಕರೆಯುವುದಿಲ್ಲ ಬಿಡಿ ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿ ದರಲ್ಲದೆ, ಆರ್‌ಎಸ್‌ಎಸ್ ಹಿನ್ನೆಲೆ ಯುಳ್ಳ ಕೆ.ಎಸ್. ಈಶ್ವರಪ್ಪ, ಜಗದೀಶ್ ಶೆಟ್ಟರ್ ಅವರಿಗೆ ಟಿಕೆಟ್ ಕೊಟ್ಟಿಲ್ಲ. ಲಕ್ಷ್ಮಣ್ ಸವದಿ ವಿರುದ್ಧ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸದನದಲ್ಲೇ ಗಲಾಟೆ ಮಾಡಿದ್ದರು. ಈಗ ಸವದಿ ಕಾಂಗ್ರೆಸ್ ಸೇರಿದ್ದಾರೆ. ರಮೇಶ್ ಜಾರಕಿ ಹೊಳಿ ಅವರನ್ನು ನೋಡಿದರೆ ಎಲ್ಲ ಪಕ್ಷ ಗಳಲ್ಲೂ ಆಯಾರಾಮ್ ಗಯಾರಾಮ್ ಮಿತಿ ಮೀರಿದೆ ಎಂದು ಮಾರ್ಮಿಕವಾಗಿ ನುಡಿದರು.

ಪ್ರಾಣಿಗಿಂತ ಕಡೆಯಾಗಿ ಕಾಯಕ ಸಮಾಜದ ಮನುಷ್ಯನ ಕಾಣುವಂತಹ ಪರಿಸ್ಥಿತಿ; ಒಂದು ರೋಗವೇ ಸರಿ!

- ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ವಿಷಾದ
- ಮೈಸೂರು ನ್ಯಾಯಾಲಯದ ಆವರಣದಲ್ಲಿ ಅಂಬೇಡ್ಕರ್ ಜಯಂತಿ



ಮೈಸೂರು, ಏ.16(ಎಸ್‌ಪಿಎನ್)– ನಮ್ಮ ಸಮಾಜದಲ್ಲಿ ನಾಯಿ– ನರಿ, ಕತ್ತೆ, ಹಂದಿ ಸೇರಿದಂತೆ ಇತರೆ ಎಲ್ಲಾ ಪ್ರಾಣಿಗಳನ್ನು ಮುಟ್ಟಿಕೊಳ್ಳುತ್ತೇವೆ. ಆದರೆ, ನಮ್ಮ ಪಕ್ಕದಲ್ಲಿರುವ ಕಾಯಕ ಸಮಾಜದ ಮನುಷ್ಯನನ್ನು ಮುಟ್ಟಿದಾಗ ನಮ್ಮೊಳಗೆ ಕೀಳರಿಮೆ ಬೆಳೆಸಿಕೊಳ್ಳುತ್ತೇವೆ. ಇದು ಸಮಾಜಕ್ಕೆ ಅಂಟಿರುವ ಒಂದು ತರಹದ ರೋಗ ಅಲ್ಲವೇ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಸಭಿಕರನ್ನು ಪ್ರಶ್ನಿಸಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ 132ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಣ್ಣ ಬಸವಣ್ಣ ನೇತೃತ್ವದಲ್ಲಿ ನಡೆದ 12ನೇ ಶತಮಾನದ ವಚನ ಚಳವಳಿ ಅನೇಕ ಸಾಮಾಜಿಕ ಸುಧಾರಣೆಗಳಿಗೆ ಹೆಸರುವಾಸಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮಾದರಿಯ ಅನುಭವ ಮಂಟಪ ಸ್ಥಾಪಿಸಲಾಗಿತ್ತು. ಇಲ್ಲಿ ಎಲ್ಲಾ ವರ್ಗದ ಶರಣರಿಗೆ ಅವಕಾಶ ನೀಡಿ, ಅನೇಕ ಚರ್ಚೆಗಳಿಗೆ ಅನುವು ಮಾಡಿಕೊಟ್ಟ ಕೀರ್ತಿ ಬಸವಣ್ಣರಿಗೆ ಸಲ್ಲುತ್ತದೆ. ಇದಕ್ಕೆ ಕಾರಣೀಭೂತರಾದ ಅಣ್ಣಾ ಬಸವಣ್ಣನವರ ಭಾವಚಿತ್ರವನ್ನು ನಮ್ಮ ಸಂವಿಧಾನ ಗ್ರಂಥದಲ್ಲಿ ಅಳವಡಿಸದೇ ಇರುವುದು ಬೇಸರದ ಸಂಗತಿ ಎಂದರು.

ರಾಮಾಯಣ ರಚಿಸಿದ ವಾಲ್ಮೀಕಿ ಕುರಿತು ನಾವೆಲ್ಲ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಇತಿಹಾಸ ಓದದವರು, ಸಾಮಾಜಿಕ ವ್ಯವಸ್ಥೆಯನ್ನು ಪರಿವರ್ತಿಸಲು ಸಾಧ್ಯವೇ ಇಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದರು. ಅವರು ಸದಾ ಅಧ್ಯಯನಶೀಲರಾಗಿರುತ್ತಿದ್ದವರು. ಅವರು ಸಂಪಾದಿಸಿದ ಜ್ಞಾನ ಭಂಡಾರದಿಂದ ಇಂದು ಜಗತ್ತೇ ಮೆಚ್ಚುವಂತಹ ಸಂವಿಧಾನ ನಮಗೆ ಸಿಕ್ಕಿದೆ. ಈ ಗ್ರಂಥ ರಚಿಸಲು ತೆಗೆದುಕೊಂಡ(ಸಂವಿಧಾನ ಕರಡು) ಸಮಯ 2 ವರ್ಷ 11 ತಿಂಗಳು 18 ದಿನಗಳು. ಈ ಕರಡು ರಚನೆಗೆ ವೆಚ್ಚವಾದ ಹಣದ ಮೊತ್ತ 64 ಲಕ್ಷ ರೂ.ಗಳು ಎಂದು ತಿಳಿಸಿದರು.

ಇತ್ತೀಚೆಗೆ ಸಮಾಜದಲ್ಲಿ ಕೆಲವರು ತೆಗಳುವುದೇ ಕಾಯಕ ಮಾಡಿಕೊಂಡಿದ್ದಾರೆ. ಅದು ಎಷ್ಟರಮಟ್ಟಿಗೆ ಅಂದರೆ, ಆ ಮಾತುಗಳನ್ನು ಕೇಳಿದರೆ, ಮತ್ತೊಮ್ಮೆ ಸ್ನಾನ ಮಾಡಬೇಕು ಅನ್ನಿಸುತ್ತದೆ. ಅವರ ಮಾತಿನಲ್ಲಿ ಪ್ರೀತಿ ಇರಲ್ಲ, ಸೌಜನ್ಯ ಇರಲ್ಲ. ಆದರೆ, ಅಂಬೇಡ್ಕರ್, ಪ್ರೀತಿಯಿಂದ, ಸಹಬಾಳ್ವೆಯಿಂದ ನಮ್ಮ ನವಭಾರತ ಕೂಡಿರಬೇಕು ಎಂದು ಅಂದುಕೊಂಡಿದ್ದರು. ಅವರ ನಿಲುವುಗಳನ್ನು ಜಾರಿಗೆ ತರಲು ನಾವು–ನೀವು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

'ಸಂಸ್ಕೃತ' ರಾಷ್ಟ್ರೀಯ ಭಾಷೆ ಆಗಬೇಕು: ಸೆ.11ರ 1949ರ ಭಾರತದ ಸಂವಿಧಾನ ತಿದ್ದುಪಡಿ ಸಂದರ್ಭದಲ್ಲಿ 'ಸಂಸ್ಕೃತ' ನಮ್ಮ ರಾಷ್ಟ್ರೀಯ ಭಾಷೆ ಆಗಬೇಕು ಎಂದು ಪ್ರತಿಪಾದಿಸಿದ್ದರು. ಏಕೆಂದರೆ, ಅವರಿಗೆ ಸಂಸ್ಕೃತ ಸೇರಿದಂತೆ ಎಲ್ಲಾ ಭಾಷೆಗಳ ಜ್ಞಾನ ಇರಬೇಕು ಎಂಬುದು ಅವರ ನಿಲುವಾಗಿತ್ತು. ಏಳೆಂಟು ಭಾಷೆಗಳ ಹಿಡಿತ ಅವರಿಗಿತ್ತು ಎಂದು ಹಲವು ಸಂಗತಿಗಳನ್ನು ತಿಳಿಸಿದರಲ್ಲದೆ, ಸಮಾಜದ ಸಾಕ್ಷಿ ಪ್ರಜ್ಞೆಯಾದ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರು ಈ ಸಭೆಯಲ್ಲಿ ಉಪಸ್ಥಿತರಿದ್ದಾರೆ. ಅವರು ರಚಿಸಿದ 'ವಂಶವೃಕ್ಷ', 'ಸಾಕ್ಷಿ' ಸೇರಿದಂತೆ ಇತರೆ ಪುಸ್ತಕಗಳನ್ನು ಓದಬೇಕು. ಅವರ ಬರಹಗಳಲ್ಲಿ ಅನೇಕ ಐತಿಹಾಸಿಕ ಘಟನೆಗಳನ್ನು ಉಲ್ಲೇಖಿಸಿದ್ದಾರೆ ಎಂದು ತಿಳಿಸಿದರು.

ಅಧ್ಯಯನಶೀಲರಾಗಬೇಕು: ನಾವು ನಿತ್ಯ ಅಧ್ಯಯನಶೀಲರಾದರೆ, ಜಗತ್ತಿನ ಎಲ್ಲಾ ಸಂಗತಿ ತಿಳಿದುಕೊಳ್ಳಬಹುದು. ಅದರಲ್ಲೂ ವಕೀಲರು ಬೇರೆ ರಾಷ್ಟ್ರಗಳ ಸಂವಿಧಾನ ತಿದ್ದುಪಡಿ ಹಾಗೂ ಅಲ್ಲಿನ ಕೋರ್ಟ್‌ಗಳ ಅಪರೂಪದ ತೀರ್ಪುಗಳನ್ನು ಓದಬೇಕು. ಸಾಧ್ಯವಾದಷ್ಟು ಆ ಪ್ರತಿಗಳನ್ನು ಸಂಗ್ರಹಿಸಲು ಪ್ರಯತ್ನಿಸಬೇಕು. ಇತ್ತೀಚೆಗೆ ಭಾರತದ ಸೇರಿದಂತೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಕೊರೊನಾ ಕಾಣಿಸಿಕೊಂಡಿತು. ಆಗ ಭಾರತ ಸ್ಥಿತಿ–ಗತಿ ಬಗ್ಗೆ ಮಾಧ್ಯಮಗಳು ಅನೇಕ ಕಲ್ಪಿತ ವರದಿಗಳನ್ನು ಪ್ರಕಟಿಸಿದ್ದವು. ಆದರೆ, ಅಂಬೇಡ್ಕರ್ ನೀಡಿದ ಸಂವಿಧಾನದಿಂದ ಅಂತಹ ಕಷ್ಟದ ದಿನಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಲ್ಲಲು ಸಾಧ್ಯವಾಯಿತು ಎಂದು ತಿಳಿಸಿದರು.

ಈ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯರಿಯೂರ್, ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ, ಮುಂಡರಗಿ ತೋಂಟದಾರ್ಯ ಮಠದ ಶ್ರೀ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್. ಚಂದ್ರಮೌಳಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಹೆಚ್.ಎಸ್. ಮಹದೇವಸ್ವಾಮಿ, ಜಿ.ಎಂ.ನಾಗೇಶ್, ಬಿ.ಎಸ್.ಭಾಗ್ಯಮ್ಮ, ಕೆ.ಎಸ್.ಲೋಕೇಶ್, ಎ.ಕೆ.ಮಾಳಪ್ಪ ಎನ್.ಲೋಕೇಶ್, ಎನ್.ಗಿರೀಶ್, ಅಭಿಷೇಕ್, ಸಿ.ಯೋಗೇಶ್, ಎಂ.ಎಸ್. ಮೈತ್ರಿ, ಎಂ.ಜಗದೀಶ್ ಉಪಸ್ಥಿತರಿದ್ದರು.

ಈ ನೆಲದ ಸಂಸ್ಕೃತಿ ಬಿಂಬಿಸುತ್ತವೆ

ಅವರು ರಚಿಸಿದ ಭೀಮಕಾಯ, ಧರ್ಮಶ್ರೀ, ನಾಯಿ– ನೆರಳು ಸೇರಿದಂತೆ ಅನೇಕ ಕಾದಂಬರಿಗಳು ಈ ನೆಲದ ಪರಂಪರೆ, ಸಂಸ್ಕೃತಿಯನ್ನು ಬಿಂಬಿಸುತ್ತವೆ. ಆ ಬರಹಗಳನ್ನು ಕೆಲ ನ್ಯಾಯಾಧೀಶರು ತಮ್ಮ ತೀರ್ಪುಗಳಲ್ಲಿ ಸಂದರ್ಭಕ್ಕೆ ಅನುಗುಣವಾಗಿ 'ಕೋಟ್' ಮಾಡುತ್ತಾರೆ ಎಂದು ಕೆಲವು ಘಟನೆಗಳನ್ನು ಉಲ್ಲೇಖಿಸಿದರು. ಅದರಂತೆ 'ವಂಶವೃಕ್ಷ', 'ಸಾಕ್ಷಿ' ಕಾದಂಬರಿಗಳಲ್ಲಿ ಕೆಲವು ಉಲ್ಲೇಖಗಳನ್ನು ವಿವರಿಸಿ ತಿಳಿಸಿದರಲ್ಲದೆ, ಕುವೆಂಪು ರಚಿತ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಹಾಗೂ ಅಂಬೇಡ್ಕರ್ ಕುರಿತಾಗಿ ಅಮೂಲ್ಯ ಮಾಹಿತಿಗಳನ್ನು ಮಹಾರಾಷ್ಟ್ರ ಸರ್ಕಾರ ಪುಸ್ತಕ ರೂಪದಲ್ಲಿ ಹೊರತಂದಿದೆ. ಈ ಪುಸ್ತಕವನ್ನು ಯುವ ವಕೀಲರು ಅಧ್ಯಯನ ನಡೆಸಬೇಕು.

– ಕೃಷ್ಣ ಎಸ್.ದೀಕ್ಷಿತ್
ಹೈಕೋರ್ಟ್ ನ್ಯಾಯಮೂರ್ತಿ

ಅಮುಲ್‌ನೊಂದಿಗೆ ಕೆಎಂಎಫ್ ವಿಲೀನ ಪ್ರಸ್ತಾಪ ಖಂಡಿಸಿ ರೈತಸಂಘ ಪ್ರತಿಭಟನೆ



ಮೈಸೂರು, ಏ16(ಎಂಟಿವೈ)– ಗುಜರಾತ್‌ನ ಅಮುಲ್ ಸಂಸ್ಥೆಯೊಂದಿಗೆ ಕೆಎಂಎಫ್ ಹಾಗೂ ನಂದಿನಿ ಬ್ರಾಂಡ್ ವಿಲೀನ ಮಾಡದಂತೆ ಆಗ್ರಹಿಸಿ ಮೈಸೂರಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ರೈತ ಸಂಘಟನೆಯ ಕಾರ್ಯಕರ್ತರು, ಕರ್ನಾಟಕದ ಅಸ್ಮಿತೆಯಾಗಿರುವ ನಂದಿನಿ ಉತ್ಪನ್ನಗಳ ಮೇಲೆ ದುಷ್ಟರ ಕಣ್ಣು ಬಿದ್ದಿದೆ. ಕರ್ನಾಟಕ ಹಾಗೂ ಕನ್ನಡಿಗರ ಪ್ರತಿಷ್ಠೆಯಾಗಿರುವ ನಂದಿನಿ ಸಂಸ್ಥೆಯನ್ನು ಕಬಳಿಸುವ ಹುನ್ನಾರ ನಡೆಯುತ್ತಿದೆ. ಲಕ್ಷಾಂತರ ರೈತರ ಒಡನಾಡಿಯಾಗಿರುವ ಕೆಎಂಎಫ್ ಸಂಸ್ಥೆ ರಕ್ಷಣೆ ಮಾಡಲು ನಾವು ಉಗ್ರ ಹೋರಾಟ ನಡೆಸುತ್ತೇವೆ. ಕರ್ನಾಟಕದಿಂದ ಅಮುಲ್ ಉತ್ಪನ್ನಗಳನ್ನು ಓಡಿಸಿ, ನಂದಿನಿ ಉತ್ಪನ್ನಗಳನ್ನು ಖರೀದಿಸುವ ಅಭಿಯಾನ ನಡೆಸಿ, ಕೇಂದ್ರ ಸರ್ಕಾರಕ್ಕೆ ತಕ್ಕಪಾಠ ಕಲಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಇದೇ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ನಮ್ಮ ಹೆಮ್ಮೆಯಾಗಿರುವ ನಂದಿನಿ ಉತ್ಪನ್ನಗಳ ರಕ್ಷಣೆಗೆ ಕನ್ನಡಿಗರು ಹೋರಾಟ ಮಾಡಬೇಕಾದ ಅನಿವಾರ್ಯತೆ ಒದಗಿ ಬಂದಿದೆ. ಗುಜರಾತ್‌ನ ಅಮುಲ್ ಸಂಸ್ಥೆ ಮೇಲೆ ಈಗಾಗಲೇ ಅಂಬಾನಿ ಕಣ್ಣಿಟ್ಟಿದ್ದಾರೆ. ಇದೀಗ ರಾಜ್ಯದ ಪ್ರತಿಷ್ಠೆಯಾಗಿರುವ ಕರ್ನಾಟಕ ಹಾಲು ಒಕ್ಕೂಟದ ಮೇಲೆ ವಕ್ರದೃಷ್ಟಿ ಹರಿಸಿದ್ದಾರೆ. ರಾಜ್ಯದಲ್ಲಿ ಲಕ್ಷಾಂತರ ಮಂದಿ ಸಣ್ಣ ರೈತರು ಹೈನುಗಾರಿಕೆ ಅವಲಂಬಿಸಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಹೆಸರು ಮಾಡಿದೆ. ಕೆಎಂಎಫ್ ಲಾಭದಾಯಕ ಸಂಸ್ಥೆಯಾಗಿದೆ. ಆದರೆ, ಅದನ್ನು ಮುಳುಗಿಸುವ ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಕೆಎಂಎಫ್ ಸಂಸ್ಥೆಯನ್ನು ಮೊದಲು ನಷ್ಟದ ಸುಳಿಗೆ ತಳ್ಳುವ ಸಂಚು ನಡೆಸಲಾಗುತ್ತದೆ. ಆ ಬಳಿಕ ನಷ್ಟದ ನೆಪವೊಡ್ಡಿ ಅಮುಲ್ ವಹಿಸುವ ಹುನ್ನಾರ ನಡೆಸಲಾಗುತ್ತಿದೆ. ರಾಜ್ಯದ ಜನತೆ ಈ ಸಂಚಿನ ಬಗ್ಗೆ ಎಚ್ಚರದಿಂದ ಇರಬೇಕು. ನಂದಿನಿ ಉತ್ಪನ್ನಗಳನ್ನು ಖರೀದಿಸಿ, ಕೆಎಂಎಫ್ ಉಳಿಸಬೇಕು. ಇಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸುತ್ತಿದ್ದೇವೆ. ಚುನಾವಣೆ ಮುಗಿದ ಬಳಿಕ ದೊಡ್ಡಮಟ್ಟದ ಚಳುವಳಿ ನಡೆಸಲು ಉದ್ದೇಶಿಸಲಾಗಿದೆ. ರಾಜ್ಯದಿಂದ ಅಮುಲ್ ಓಡಿಸುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ಹೊಸೂರ್ ಕುಮಾರ್, ಪಣಿಸ್ವಾಮಿ, ಪಿ.ಮರಂಕಯ್ಯ, ಆನಂದ, ಪ್ರಭಾಕರ್, ಮಹೇಶ್, ಚಿಕ್ಕಣ್ಣ ಕರೋಟಿ, ಕುಮಾರಸ್ವಾಮಿ, ಮಾದೇವನಾಯಕ, ಮಂಡಕಳ್ಳಿ ಮಹೇಶ್ ನಾಗನಹಳ್ಳಿ, ವಿಜೇಂದ್ರ, ಸಿಂಗೇಗೌಡ, ಮಹಾಲಿಂಗ ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಿದ್ವತ್ ವ್ಯಕ್ತಿಗಳು ವಿರಳವಾದಂತೆ ವಿದ್ವತ್ ಪೂರ್ಣ ಬರಹಗಳ ಅಭಾವವೂ ಕಾಡುತ್ತಿದೆ



ಮೈಸೂರು, ಏ.16(ಜಿಎ)–ವಿದ್ವತ್ ವ್ಯಕ್ತಿಗಳ ಸಂಖ್ಯೆ ವಿರಳವಾದಂತೆ, ವಿದ್ವತ್ ಪೂರ್ಣ ಬರಹಗಳ ಅಭಾವವೂ ಕಾಡುತ್ತಿದೆ ಎಂದು ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬೇಸರ ವ್ಯಕ್ತಪಡಿಸಿದರು. ವಿದ್ಯುತ್ ಪ್ರಕಾಶನ ಮತ್ತು ಕನ್ನಡ ಸಾಹಿತ್ಯ ಕಲಾಕೂಟವು ಎಂಜಿನಿಯರ್‌ಗಳ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಕೆ.ಲೀಲಾಪ್ರಕಾಶ್ ರಚಿಸಿದ 'ಸಂಸ್ಕೃತ ಭಾಷೆ', 'ಲೇಖನಾಭಿನಂದನಾ' ಹಾಗೂ 'ಮುನ್ನುಡಿ ಹೊನ್ನುಡಿ' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ವಿದ್ವತ್ ಜೊತೆಗೆ ವಿನಯವೂ ಸೇರಿಕೊಂಡಾಗ ಪಾಂಡಿತ್ಯದ ಮೌಲ್ಯ ಹೆಚ್ಚುತ್ತದೆ. ಆದರೆ, ವಿದ್ವತ್ ವ್ಯಕ್ತಿಗಳ ಸಂಖ್ಯೆ ವಿರಳವಾದಂತೆ, ವಿದ್ವತ್ ಪೂರ್ಣ ಬರಹಗಳ ಅಭಾವವೂ ಕಾಡುತ್ತಿವೆ. ಲೀಲಾಪ್ರಕಾಶ್ ಅವರ ಕೃತಿಗಳು ಆ ರೀತಿಯ ಬರಹದ ಬರವನ್ನು ತಗ್ಗಿಸಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ದೊಡ್ಡ ಕೊಡುಗೆಯಾಗಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ.ನಾಗರಾಜರಾವ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ಎಂ. ತಳವಾರ, ರಂಗಕರ್ಮಿ ಡಾ.ಎಚ್.ಎ.ಪಾರ್ಶ್ವನಾಥ್, ಕನ್ನಡ ಸಾಹಿತ್ಯ ಕಲಾಕೂಟದ ಎಂ.ಚಂದ್ರಶೇಖರ, ವಿದ್ಯುತ್ ಪ್ರಕಾಶನದ ಪ್ರಕಾಶಕ ಸಿ.ಎನ್.ಕೇಶವ ಪ್ರಕಾಶ್ ಉಪಸ್ಥಿತರಿದ್ದರು.

ಇಂದಿನಿಂದ ಮಕ್ಕಳಿಗಾಗಿ ಬೇಸಿಗೆ ಶಿಬಿರ

ಮೈಸೂರು, ಏ.16– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಏ.17ರಿಂದ 19ರವರೆಗೆ ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಆಲನಹಳ್ಳಿ ಬಡಾವಣೆಯ ನಂ.90, 7ನೇ ಕ್ರಾಸ್, 2ನೇ ಮುಖ್ಯರಸ್ತೆಯಲ್ಲಿ 10ರಿಂದ 15 ವರ್ಷ ಮಕ್ಕಳಿಗಾಗಿ 'ಬೇಸಿಗೆ ಸ್ವರ್ಗ' ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಯೋಗ, ಧ್ಯಾನ, ಮೌಲ್ಯ ಶಿಕ್ಷಣ, ಆಟಗಳು ಹಾಗೂ ವಿವಿಧ ಸ್ಪರ್ಧೆಗಳನ್ನು ಹೇಳಿಕೊಡಲಾಗುವುದು ಎಂದು ಕೇಂದ್ರದ ಸಂಚಾಲಕಿ ಬಿಕೆ ಸೀಮಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 8105083945 ಸಂಪರ್ಕಿಸಬಹುದು.

ಮುಂಬೈ, ರಾಜಸ್ಥಾನ್‌ಗೆ ಭರ್ಜರಿ ಗೆಲುವು





ಮುಂಬೈ, ಅಹಮದಾಬಾದ್, ಏ.16– ಪ್ರಸಕ್ತ ಸಾಲಿನ ಐಪಿಎಲ್ ಪಂದ್ಯಾವಳಿಯಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ 5 ವಿಕೆಟ್‌ಗಳ ಜಯ ಸಾಧಿಸಿದರೇ, ರಾತ್ರಿ ನಡೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ರಾಜಸ್ಥಾನ್ ರಾಯಲ್ಸ್ 3 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಮುಂಬೈಗೆ ಜಯ: ಇಲ್ಲಿನ ವಾಂಖೆಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 185 ರನ್ ಗಳಿಸಿತು. ತಂಡದ ಪರ ವೆಂಕಟೇಶ್ ಐಯ್ಯರ್ 51 ಎಸೆತಗಳಲ್ಲಿ 9 ಸಿಕ್ಸರ್, 6 ಬೌಂಡರಿ ಒಳಗೊಂಡ 104 ರನ್ ಗಳಿಸಿ ಮಿಂಚಿದರು. ಉಳಿದಂತೆ ಶಾರ್ದೂಲ್ ಠಾಕೂರ್ 13, ರಿಂಕು ಸಿಂಗ್ 18, ಆಂಡ್ರೆ ರಸೆಲ್ 21ರನ್ ಗಳಿಸಿದರು. ಮುಂಬೈ ಪರ ಹೃತಿಕ್ ಶೋಕೀನ್ 2, ರಿಲೆ ಮೆರೆಡಿತ್, ಪಿಯೂಷ್ ಚಾವ್ಲಾ, ಕ್ಯಾಮರೂನ್ ಗ್ರಿನ್ ಹಾಗೂ ಡುವಾನ್ ಜಾನ್ಸೆನ್ ತಲಾ ಒಂದೊಂದು ವಿಕೆಟ್ ಪಡೆದರು.

ನಂತರ 186 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 17.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ತಂಡದ ಪರ ರೋಹಿತ್ ಶರ್ಮಾ 20, ಇಶಾನ್ ಕಿಶನ್ 58, ನಾಯಕ ಸೂರ್ಯ ಕುಮಾರ್ ಯಾದವ್ 43, ತಿಲಕ್ ವರ್ಮಾ 30, ಟೀಮ್ ಡೇವಿಡ್ 24ರನ್ ಗಳಿಸಿದರು. ಕೆಕೆಆರ್ ಪರ ಸುಯಶ್ ಶರ್ಮಾ 2, ಲ್ಯೂಕಿ ಫರ್ಗೂಸನ್, ವರುಣ್ ಚಕ್ರವರ್ತಿ ಹಾಗೂ ಶಾರ್ದೂಲ್ ಠಾಕೂರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ವೆಂಕಟೇಶ್ ಐಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರಾಜಸ್ಥಾನ್‌ಗೆ ಗೆಲುವು: ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 177ರನ್ ಗಳಿಸಿತು. ತಂಡದ ಪರ ಶುಭ್‌ಮನ್ ಗಿಲ್ 45, ಸಾಯಿ ಸುದರ್ಶನ್ 20, ನಾಯಕ ಹಾರ್ದಿಕ್ ಪಾಂಡ್ಯ 28, ಡೇವಿಡ್ ಮಿಲ್ಲರ್ 46, ಅಭಿನವ್ ಮನೋಹರ್ 27 ರನ್ ಗಳಿಸಿದರು. ರಾಜಸ್ಥಾನ್ ಪರ ಸಂದೀಪ್ ಶರ್ಮಾ 2, ಟ್ರೆಂಟ್ ಬೋಲ್ಟ್, ಆಡಂ ಜಂಪಾ ಹಾಗೂ ಚಹಲ್ ತಲಾ ಒಂದೊಂದು ವಿಕೆಟ್ ಪಡೆದರು.

178ರನ್ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ 19.2 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 179 ರನ್ ಗಳಿಸುವ ಮೂಲಕ ಗೆಲುವು ಸಾಧಿಸಿತು. ತಂಡದ ಪರ ದೇವದತ್ ಪಡಿಕ್ಕಲ್ 26, ಸಂಜು ಸಾಮ್ಸನ್ 60. ಶಿಮ್ರಾನ್ ಹೆಟ್ಮೆಯರ್ 56, ಧ್ರುವ್ ಜುರೇಲ್ 18, ರವಿಚಂದ್ರನ್ ಅಶ್ವಿನ್ 10 ರನ್ ಗಳಿಸಿದರು. ಗುಜರಾತ್ ಪರ ಮೊಹಮ್ಮದ್ ಶಮಿ 3, ರಶೀದ್ ಖಾನ್ 2, ಹಾರ್ದಿಕ್ ಪಾಂಡ್ಯ, ನೂರ್ ಅಹಮ್ಮದ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಶಿಮ್ರಾನ್ ಹೆಟ್ಮೆಯರ್ ಪಂದ್ಯಪುರುಷ ಪ್ರಶಸ್ತಿಗೆ ಭಾಜನರಾದರು.



[ಏಪ್ರಿಲ್ 17]

ಬೆಂಗಳೂರು V/S ಚೆನ್ನೈ

ಸ್ಥಳ: ಎಂ.ಚಿನ್ನಸ್ವಾಮಿ ಮೈದಾನ ಬೆಂಗಳೂರು

ಸಮಯ: ಸಂಜೆ 7.30

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	5	4	1	0	8
ಲಕ್ನೋ	5	3	2	0	6
ಗುಜರಾತ್	5	3	2	0	6
ಪಂಜಾಬ್	5	3	2	0	6
ಕೋಲ್ಕತ್ತಾ	5	2	3	0	4
ಸಿಎಸ್‌ಕೆ	4	2	2	0	4
ಆರ್‌ಸಿಬಿ	4	2	2	0	4
ಮುಂಬೈ	4	2	2	0	4
ಎಸ್‌ಆರ್‌ಹೆಚ್	4	2	2	0	4
ಡೆಲ್ಲಿ	5	0	5	0	0

ಇಂದು ಸೋಮಣ್ಣ, ಜಿಟಿಡಿ, ಎಂಕೆಎಸ್, ನಾಗೇಂದ್ರ, ಸಿದ್ದೇಗೌಡ, ಸಂದೇಶಸ್ವಾಮಿ ನಾಮಪತ್ರ ಸಲ್ಲಿಕೆ

ಮೈಸೂರು, ಏ.16(ಎಸ್‌ಪಿಎನ್)– 2023ರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಹಾಲಿ ಸಚಿವರು, ಶಾಸಕರು, ಮಾಜಿ ಶಾಸಕರು ಸೇರಿದಂತೆ ಮೈಸೂರು ಜಿಲ್ಲೆಯ ವಿವಿಧ ಪಕ್ಷ ಅಭ್ಯರ್ಥಿಗಳು ನಾಳೆ(ಸೋಮವಾರ) ನಾಮಪತ್ರ ಸಲ್ಲಿಸಲಿದ್ದಾರೆ.

ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹಾಗೂ ಹಾಲಿ ಶಾಸಕರಾದ ಜಿ.ಟಿ.ದೇವೇಗೌಡ ಅವರು, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಅಪಾರ ಬೆಂಬಲಿಗರೊಂದಿಗೆ ಮೆರವಣಿಗೆ ಮೂಲಕ ಆಗಮಿಸಿ ಮೈಸೂರು ತಾಲೂಕು ಕಚೇರಿಯಲ್ಲಿ ಬೆಳಗ್ಗೆ 11 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶಸ್ವಾಮಿ ಅವರು ಮಧ್ಯಾಹ್ನ 12 ಗಂಟೆಗೆ ಕ್ಯಾತನಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸೋಮವಾರ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ.

ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ವಸತಿ ಸಚಿವ ವಿ.ಸೋಮಣ್ಣ ಅವರು, ಬೆಳಗ್ಗೆ 11 ಗಂಟೆಗೆ ನಂಜನಗೂಡಿನ ತಹಸಿಲ್ದಾರ್ ಕಚೇರಿಯಲ್ಲಿ ಅಪಾರ ಬೆಂಬಲಿಗರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸಾಥ್ ನೀಡಲಿದ್ದಾರೆ. ಅದಕ್ಕೂ ಮುನ್ನ ನಂಜನಗೂಡಿನ ಗೋಳೂರಿನಲ್ಲಿ ಸಹಸ್ರಾರು ಕಾರ್ಯಕರ್ತರ ಬಹಿರಂಗ ಸಭೆ ನಡೆಸಲಿದ್ದಾರೆ.

ಚಾಮುಂಡೇಶ್ವರಿ ವಿಧಾನ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಅವರು ಮೈಸೂರು ತಾಲೂಕು ಕಚೇರಿಯಲ್ಲಿ ಮಧ್ಯಾಹ್ನ 1 ಗಂಟೆಗೆ ತಮ್ಮ ಬೆಂಬಲಿಗರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಇದಕ್ಕೂ ಮೊದಲು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮೆರವಣಿಗೆಯಲ್ಲಿ ಆಗಮಿಸಲಿದ್ದಾರೆ.

ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ, ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿ ಬೆಳಗ್ಗೆ 10ಗಂಟೆಗೆ ನಗರಪಾಲಿಕೆ ಕಚೇರಿಗೆ ಅಪಾರ ಬೆಂಬಲಿಗರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಕೆ.ಆರ್. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಅವರು, ಚಾಮುಂಡಿಪುರಂನಿಂದ ಮೈಸೂರು ನಗರಪಾಲಿಕೆ ಕಚೇರಿಗೆ ತಮ್ಮ ಅಪಾರ ಅಭಿಮಾನಿಗಳೊಂದಿಗೆ ಮೆರವಣಿಗೆ ಮೂಲಕ ಆಗಮಿಸಿ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ.

ಬಿಜೆಪಿಗೆ ಡ್ಯಾಮೇಜ್ ಆದ್ರೂ ಖಾಲಿ ಸ್ಥಾನ ತುಂಬಲು ಪ್ರಯತ್ನಿಸುತ್ತೇವೆ




ರಾಯಚೂರು, ಏ.16– ಬಿಜೆಪಿಯ ಕೆಲವು ಮುಖಂಡರು ಪಕ್ಷ ತೊರೆಯುತ್ತಿರುವುದರಿಂದ ಪಕ್ಷಕ್ಕೆ ಡ್ಯಾಮೇಜ್ ಆಗುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಬಿಜೆಪಿ ಬಹುಮತದೊಂದಿಗೆ ಅಧಿಕಾರ ರಚಿಸಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ರಾಯಚೂರಿನಲ್ಲಿ ಆಯೋಜಿಸಿದ್ದ ಪರಿಶಿಷ್ಟ ಸಮುದಾಯಗಳ ಅಭಿನಂದನಾ ಸಮಾವೇಶಕ್ಕೆ ಆಗಮಿಸಿದ್ದ ವೇಳೆ ಮಾತನಾಡಿದ ಅವರು, ಪಕ್ಷ ಬಲಿಷ್ಠ ಆಗಿರುವುದರಿಂದ ಅವರ ಸ್ಥಾನ ತುಂಬಲು ಪ್ರಯತ್ನಿಸುತ್ತೇನೆ. ಜನ ಬೆಂಬಲ, ಕಾರ್ಯಕರ್ತರಿಂದ ಪಕ್ಷ ಕಟ್ಟಿದ್ದೇವೆ. ಕೆಲವು ಬದಲಾವಣೆ ಮೂಲಕ ಮುಂದಿನ ಪೀಳಿಗೆಗೆ ಅನುಕೂಲ ಮಾಡಲು ಈ ಬದಲಾವಣೆ ಮಾಡಲಾಗುತ್ತಿದೆ. ಕಾಂಗ್ರೆಸ್‌ನಲ್ಲಿ ಬದಲಾವಣೆ ಮಾಡಿಲ್ಲ. ಅಲ್ಲಿ ಜಡತ್ವವಿದೆ. ಅಲ್ಲಿ ಎಷ್ಟೇ ವಯಸ್ಸಾದರೂ ಬೇಡ ಎನ್ನುವುದಿಲ್ಲ. ಖುದ್ದು ಆಕಾಂಕ್ಷಿ ಹೇಳುವವರೆಗೂ ಅದು ನಡೆಯುತ್ತದೆ ಎಂದರು.

ಬಿಎಸ್‌ವೈ, ಹಾಲಾಡಿ, ಆನಂದ್ ಸಿಂಗ್ ಸೇರಿ ಹಲವರು ಸ್ಥಾನ ಬಿಟ್ಟುಕೊಟ್ಟಿದ್ದಾರೆ. ಪಕ್ಷ ಬಲಿಷ್ಠ ಆಗಿರುವುದರಿಂದ ಅವರ ಸ್ಥಾನ ತುಂಬಲು ಪ್ರಯತ್ನಿಸುತ್ತೇವೆ. ನಮ್ಮ ಪಕ್ಷದಲ್ಲಿ ಮೂವತ್ತು ವರ್ಷದ ಅನುಭವದ ಪ್ರಶ್ನೆಯೇ ಇಲ್ಲ. ಮೊಟ್ಟ ಮೊದಲು ನಮ್ಮ ನಾಯಕ ಬಿಎಸ್‌ವೈ ಸರ್ವೋಚ್ಛ ನಾಯಕರು. ಎರಡನೇ ಹಂತದ ನಾಯಕರಿದ್ದಾರೆ. ನಿರಾಣಿ, ಸಿಸಿ ಪಾಟೀಲ್, ಸೋಮಣ್ಣ ಇದ್ದಾರೆ. ಇದೇ ರೀತಿ ಸಪೋರ್ಟ್ ಸಿಸ್ಟಮ್ ಮುಂದುವರೆಯುತ್ತದೆ ಎಂದು ಹೇಳಿದರು.

ಶೆಟ್ಟರ್‌ರಂತಹ ದೊಡ್ಡ ನಾಯಕರ ಅವಶ್ಯಕತೆ ನಮಗಿಲ್ಲ



ಉಜಿರೆ,ಏ.16–'ಜೆಡಿಎಸ್ ಸಣ್ಣ ಪಕ್ಷ. ನಮ್ಮ ಪಕ್ಷಕ್ಕೆ ಜಗದೀಶ್ ಶೆಟ್ಟರ್ ಅವರಂತಹ ದೊಡ್ಡ ನಾಯಕರ ಅವಶ್ಯಕತೆಯಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರ ಸ್ವಾಮಿ ಹೇಳಿದರು. ಧರ್ಮಸ್ಥಳ ಶ್ರೀಕ್ಷೇತ್ರಕ್ಕೆ ಭಾನುವಾರ ಭೇಟಿ ನೀಡಿ ಶ್ರೀಮಂಜುನಾಥ ಸ್ವಾಮಿ ಹಾಗೂ ಪರಿವಾರ ದೇವರ ದರ್ಶನ ಪಡೆದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು. ಬಿಜೆಪಿಗೆ ಶೆಟ್ಟರ್ ರಾಜೀನಾಮೆ ನೀಡಿದ ವಿಚಾರವಾಗಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಶೆಟ್ಟರ್ ಅವರ ರಾಜಿನಾಮೆ ಬಿಜೆಪಿಯ ಆಂತರಿಕ ವಿಚಾರ. ಅವರೊಬ್ಬ ಅನುಭವಿ ರಾಜಕಾರಣಿ. ಜನಸಂಘ ಇರುವಾಗಿನಿಂದಲೇ ಬಿಜೆಪಿಗಾಗಿ ಕೆಲಸ ಮಾಡಿದವರು. ಅವರಂಥವರೇ ಇಂಥ ನಿರ್ಧಾರ ಕೈಗೊಂಡಿದ್ದಾರೆ. ನಾನು ಬಿಜೆಪಿಯ ಡಿಎನ್‌ಎ ಬಗ್ಗೆ ಹಿಂದೊಮ್ಮೆ ಮಾತನಾಡಿದ್ದೆ. ಬಹುಶಃ ಅದು ಬಿಜೆಪಿಯಲ್ಲಿ ಈಗ ನಡೆಯುತ್ತಿರುವ ಬೆಳವಣಿಗೆಗೆ ಪೂರಕವಾಗಿದೆ ಎಂಬುದು ನನ್ನ ಅನಿಸಿಕೆ ಎಂದರು.

ಐದನೇ ಪುಟದಿಂದ

ಶೆಟ್ಟರ್ ರಾಜೀನಾಮೆ

ಬೇಸರವಿಲ್ಲ, ಆದರೆ ಕೆಲವರಿಂದಾಗಿ ಪಕ್ಷ ಹಾಳಾಗುತ್ತಿದೆ. ಕೆಲವರ ಷಡ್ಯಂತ್ರದಿಂದ ನಾಯಕರುಗಳಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದರು.

ನನಗೇಕೆ ಟಿಕೆಟ್ ನೀಡಿಲ್ಲ: ಕಳೆದ ಬಾರಿ ಬೊಮ್ಮಾಯಿಯವರು ಮುಖ್ಯಮಂತ್ರಿಯಾದಾಗ ಹೊಸ ಸಚಿವ ಸಂಪುಟದಲ್ಲಿ ನನಗೆ ಮಂತ್ರಿ ಸ್ಥಾನ ಬೇಡವೆಂದು 2 ವರ್ಷ ಶಾಸಕನಾಗಿ ಕ್ಷೇತ್ರದಲ್ಲಿ ಅತ್ಯಂತ ಶಾಂತವಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ನನ್ನ ಮೇಲೆ ಯಾವುದೇ ಕೇಸುಗಳಿಲ್ಲ, ನಾನು ರೌಡಿಶೀಟರ್ ಅಲ್ಲ, ನನ್ನ ವಿರುದ್ಧ ಯಾವುದೇ ಸಿಡಿ ಹಗರಣ ಕೇಸುಗಳೂ ಕೂಡ ಇಲ್ಲ. ನನಗೆ 75 ವರ್ಷ ವಯಸ್ಸೂ ಆಗಿಲ್ಲ. ಹಾಗಿದ್ದರೂ ನನಗೆ ಈ ಬಾರಿ ಟಿಕೆಟ್ ಏಕೆ ನಿರಾಕರಿಸಿದರು ಎಂಬುದು ಅಚ್ಚರಿಯಾಗುತ್ತಿದೆ ಎಂದರು.

ನನಗೆ ಯಾವುದೇ ದೊಡ್ಡ ಆಕಾಂಕ್ಷೆಗಳಿಲ್ಲ, ಮತ್ತೆ ಸಿಎಂ ಹುದ್ದೆ ಅಥವಾ ಕೇಂದ್ರ ಸರ್ಕಾರದಲ್ಲಿ, ಪಕ್ಷದ ಕೇಂದ್ರ ಮಟ್ಟದಲ್ಲಿ ಹುದ್ದೆ ಬೇಕೆಂದು ನಾನು ಕೇಳಲಿಲ್ಲ. ನಾನು ಬಿಜೆಪಿಯಲ್ಲಿ ಕೇಳಿದ್ದು ಕೇವಲ ಶಾಸಕ ಸ್ಥಾನಕ್ಕೆ ಸ್ಪರ್ಧಿಸಲು ಟಿಕೆಟ್. ಅದನ್ನು ನಿರಾಕರಿಸಿದ್ದು ಮನಸ್ಸಿಗೆ ನೋವಾಗಿದೆ. ಅನಂತ್‌ಕುಮಾರ್, ಬಿಎಸ್ ವೈ ಜೊತೆಗೆ ಸೇರಿ ನಾನು ಕೂಡ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಕೆಲಸ ಮಾಡಿದ್ದೆ. ಈ ಬಾರಿ ಟಿಕೆಟ್ ಇಲ್ಲವೆಂದಾಗ ಬಿಎಸ್ ವೈಯವರು ನಿಮಗೆ ಹೀಗಾಗಬಾರದಿತ್ತು ಎಂದರು. ಇಂದು ಮಾಧ್ಯಮಗಳ ಮುಂದೆ ಬೇರೆ ರೀತಿ ಮಾತನಾಡುತ್ತಿದ್ದಾರೆ. ಬಹುಶಃ ಕೇಂದ್ರದ ವರಿಷ್ಠರ ಸೂಚನೆ ಮೇರೆಗೆ ಮಾತನಾಡುತ್ತಿರಬಹುದು ಎಂದು ಜಗದೀಶ್ ಶೆಟ್ಟರ್ ಹೇಳಿದರು.

ರಾಜ್ಯದ ಜನ ಕ್ಷಮಿಸಲ್ಲ

ನಿರ್ಧಾರ ಅವರು ನಂಬಿದ ವಿಚಾರಕ್ಕೆ ತದ್ವಿರುದ್ಧವಾಗಿದೆ. ಸ್ಥಾನಮಾನ ಸಿಗಲಿ, ಸಿಗದಿರಲಿ ದೇಶಕ್ಕಾಗಿ ಕೆಲಸ ಮಾಡಬೇಕಾಗಿರುವುದು ನಾವು ನಡೆದುಕೊಂಡು ಬಂದ ದಾರಿ. ಪಕ್ಷದ ಸಹಕಾರ ಇಲ್ಲದಿದ್ದರೆ ವ್ಯಕ್ತಿ ಎತ್ತರಕ್ಕೆ ಬೆಳೆಯಲ್ಲ, ಸಿಎಂ ಆಗಲಾರ ಎಂದರು.

ಸವದಿ ಸೋತರೂ ಡಿಸಿಎಂ ಮಾಡಿದೆವು: ಲಕ್ಷ್ಮಣ ಸವದಿ ಅವರಿಗೆ ಪಕ್ಷ ಹಲವು ಅವಕಾಶ ನೀಡಿದೆ. ಅವರನ್ನು ಬಿಜೆಪಿಗೆ ಕರೆತಂದು ಶಾಸಕ, ಸಚಿವ ಮಾಡಿದ್ದೆವು. 2018ರ ವಿಧಾನಸಭಾ ಚುನಾವಣೆಯಲ್ಲಿ ಸವದಿ ಸೋತಿದ್ದರೂ ಡಿಸಿಎಂ ಮಾಡಿದ್ದೆವು ಎಂದರು.

ಬಣ್ಣ ಬಯಲು ಮಾಡುತ್ತೇನೆ: ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ವೀರಶೈವ ಲಿಂಗಾಯತ ಸಮುದಾಯಕ್ಕೆ ಪಕ್ಷ ಸ್ಥಾನಮಾನ ನೀಡಿದೆ. ರಾಜ್ಯಾದ್ಯಂತ ಸುತ್ತಾಡಿ ಇವರ ಬಂಡವಾಳ ಬಯಲು ಮಾಡುತ್ತೇನೆ. ಮತ್ತೆ ನಿಮಗೆ ಅಧಿಕಾರ ಕೊಡಲ್ಲ ಎಂದು ಶೆಟ್ಟರ್‌ಗೆ ಹೇಳಿದ್ದೀವಾ? ನಿಮ್ಮನ್ನು ರಾಜ್ಯಸಭೆಗೆ ಕಳುಹಿಸುತ್ತೇವೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದರು. ಕೇಂದ್ರಕ್ಕೆ ಬನ್ನಿ ಮಂತ್ರಿ ಮಾಡುತ್ತೇವೆ ಎಂದು ಪ್ರಧಾನ್ ಹೇಳಿದ್ದರು. ಆದರೆ ಜಗದೀಶ್ ಶೆಟ್ಟರ್ ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಅವರಿಗೆ ಒಳ್ಳೆಯದಾಗಲಿ.

ಒಂದು ವೇಳೆ ಅವರಿಗೆ ತಪ್ಪು ಅರಿವಾಗಿ ಪಕ್ಷಕ್ಕೆ ಮರಳಿದರೆ ಸ್ವಾಗತ. ನಾನೇ ಮುಂದೆ ನಿಂತು ಶೆಟ್ಟರ್, ಸವದಿಯನ್ನು ಸ್ವಾಗತ ಮಾಡುವೆ. ಪಕ್ಷದಲ್ಲಿ ಅವರಿಗೆ ಸ್ಥಾನಮಾನ ನೀಡುವುದು ನಮ್ಮ ಜವಾಬ್ದಾರಿ ಎಂದು ಯಡಿಯೂರಪ್ಪ ಹೇಳಿದರು.

ಪ್ರಚಾರದ ನೆಪದಲ್ಲಿ ಮಹಿಳೆಯರನ್ನು ಮಂಚಕ್ಕೆ ಕರೆದ ಆರೋಪ; ಜೆಡಿಎಸ್ ಅಭ್ಯರ್ಥಿ ವಿರುದ್ಧ ಬೃಹತ್ ಪ್ರತಿಭಟನೆ

ತುಮಕೂರು, ಏ.16– ತುಮಕೂರು ನಗರ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ವಿರುದ್ಧ ಪ್ರಚಾರದ ನೆಪದಲ್ಲಿ ಮಹಿಳೆಯರನ್ನು ಮಂಚಕ್ಕೆ ಕರೆದ ಆರೋಪ ಕೇಳಿಬಂದಿದೆ.

ಗೋವಿಂದರಾಜು ಚುನಾವಣಾ ಪ್ರಚಾರಕ್ಕೆ ಮಹಿಳೆಯರನ್ನು ಕರೆಸುವ ನೆಪದಲ್ಲಿ ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಸಹಸ್ರಾರು ಮಹಿಳೆಯರು ಟೌನ್ ಹಾಲ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಜೆಡಿಎಸ್ ಅಭ್ಯರ್ಥಿಯಾಗಿ ಘೋಷಣೆ ಮಾಡಿರುವ ಗೋವಿಂದರಾಜು ಅವರಿಗೆ ಬಿ ಫಾರಂ ಕೊಡದೆ ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಪ್ರತಿಭಟನಾನಿರತ ಮಹಿಳೆಯರು ಒತ್ತಾಯಿಸಿದರು.


ಈ ಸಂಬಂಧ ರೇಷ್ಮಾ ಎಂಬ ಮಹಿಳೆ ದೂರು ನೀಡಿದ್ದು, ಗೋವಿಂದರಾಜು ಮಾತನಾಡಿದ್ದು ಎನ್ನಲಾದ ಆಡಿಯೋ ಸಾಕ್ಷ್ಯಗಳನ್ನ ಒದಗಿಸಿದ್ದಾರೆ. ಅಲ್ಲದೇ, ಕುವೆಂಪು ನಗರದಲ್ಲಿರುವ ಗೋವಿಂದರಾಜು ನಿವಾಸದ ಮುಂದೆ ಗಲಾಟೆ ಮಾಡುವ ಮೂಲಕ ಹೈಡ್ರಾಮಾ ಸೃಷ್ಟಿಸಿದರು.



ಮಹಿಳೆ ಜೊತೆಗೆ ಅಶ್ಲೀಲ, ಅಸಭ್ಯವಾಗಿ ಗೋವಿಂದರಾಜು ಮಾತನಾಡಿರುವುದು ಆಡಿಯೋದಲ್ಲಿ ದಾಖಲಾಗಿದೆ ಆದ್ರೆ ಈ ಆಡಿಯೋಗೂ ನನಗೂ ಸಂಬಂಧ ಇಲ್ಲ,. ಅದರಲ್ಲಿ ಇರುವುದು ನನ್ನ ಮಾತುಗಳಲ್ಲ, ಈ ಮಹಿಳೆ ಯಾರೆಂಬುದು ಗೊತ್ತಿಲ್ಲ ಬಿಜೆಪಿ, ಕಾಂಗ್ರೆಸ್‌ನವರ ಕುತಂತ್ರದಿಂದ ಆಡಿಯೋ ಹೊರಬಂದಿದೆ ಎಂದು ಗೋವಿಂದರಾಜು ತಿಳಿಸಿದ್ದಾರೆ.

ಜೆಡಿಎಸ್ ಭದ್ರ'ಕೋಟೆ'ಯಲ್ಲಿ ಜಯಪ್ರಕಾಶ್ ಗೆಲ್ಲಿಸಿ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ



ಹೆಚ್.ಡಿ.ಕೋಟೆ, ಏ.16– ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ತಾಲೂಕಿನ ಜನತೆ ಅತೀ ಹೆಚ್ಚು ಮತಗಳಿಂದ ಗೆಲ್ಲಿಸುವ ಮೂಲಕ ನಾನು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಿ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ ಪಂಚರತ್ನ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ, ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಅವರಿಗೆ 'ಬಿ' ಫಾರಂ ನೀಡಿ ಮಾತನಾಡಿದ ಅವರು, ಜೆಡಿಎಸ್ ಅಧಿಕಾರಕ್ಕೆ ಬರಲು ರಾಜ್ಯದ ಜನತೆ ಆಶೀರ್ವಾದಿಸಬೇಕು. ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದರೆ ಮಾತ್ರ ರಾಜ್ಯದ ಅಭಿವೃದ್ಧಿ ಹಾಗೂ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡಲು ಸಾಧ್ಯ. ಆದ್ದರಿಂದ ಕ್ಷೇತ್ರದ ಅಭ್ಯರ್ಥಿ ಜಯಪ್ರಕಾಶ್ ಅವರನ್ನು ಈ ಬಾರಿ ಗೆಲ್ಲಿಸಬೇಕು ಎಂದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರೈತರು, ಬಡಮು ಸೇರಿದಂತೆ ಎಲ್ಲಾ ವರ್ಗದ ಜನರ ಅನುಕೂಲಕ್ಕಾಗಿ ಆಸ್ಪತ್ರೆಗಳನ್ನು ನಿರ್ಮಾಣ ಮಾಡಿ ಉಚಿತ ವೈದ್ಯಕೀಯ ಸೇವೆ ನೀಡಲಾಗುವುದು. ಜೊತೆಗೆ ಹೆಚ್ಚಿನ ಚಿಕಿತ್ಸೆಗಾಗಿ ಸರ್ಕಾರದಿಂದ ವೆಚ್ಚ ಭರಿಸಲಾಗುವುದು. ನಾನು ಈ ಹಿಂದೆ ಸಿಎಂ ಆಗಿದ್ದ ವೇಳೆ ರೈತರ ಸಾಲ ಮನ್ನಾ ಮಾಡಿ, ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜ ನೀಡುವ ಕೆಲಸ ಮಾಡಿದ್ದೇನೆ. ತಾಲೂಕಿನ ತಾರಕ ಜಲಾಶಯದ ಮುಖ್ಯ ಗೇಟ್ ಕಿತ್ತು ಹೋಗಿ ಅಪಾರ ಬೆಳೆ ಹಾನಿ ಸಂಭವಿಸಿತ್ತು. ಈ ವೇಳೆ ನಾನು ರೈತರಿಗೆ ಪರಿಹಾರ ನೀಡಿದ್ದೇನೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ರೈತ ಬಂಧು ಎಂಬ ಯೋಜನೆ ಜಾರಿಗೆ ತಂದು ರೈತರು ಬಿತ್ತನೆ ಬೀಜ, ರಸಗೊಬ್ಬರ ಖರೀದಿಗೆ ಎಕರೆಗೆ 10 ಸಾವಿರ ರೂ.ಗಳನ್ನು ಸರ್ಕಾರದಿಂದ ನೀಡುವ ಕಾರ್ಯಕ್ರಮ ರೂಪಿಸಲಾಗುವುದು. ಭೂಮಿ ಇಲ್ಲದ ರೈತರು, ಕೂಲಿ ಕಾರ್ಮಿಕರಿಗೆ ತಿಂಗಳಿಗೆ 2 ಸಾವಿರ ರೂ. ನೀಡಲಾಗುವುದು. ಪ್ರತಿಯೊಂದು ಕುಟುಂಬಕ್ಕೂ ವರ್ಷಕ್ಕೆ 5 ಸಿಲಿಂಡರ್ ಉಚಿತವಾಗಿ ನೀಡಲಾಗುವುದು. ಅಂಗವಿಕಲರಿಗೆ 2500 ರೂ. ಮಾಸಾಶನ, ಮನೆ ಇಲ್ಲದವರಿಗೆ 5 ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಾಣ, ಅಲ್ಲದೇ ಅರಣ್ಯದಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಶಾಶ್ವತ ಯೋಜನೆ ಜಾರಿಗೊಳಿಸಲಾಗುವುದು ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಹಿಳೆಯರು, ಯುವಕರಿಗೆ ಉದ್ಯೋಗ ಸೃಷ್ಟಿ, ರೈತರ ಉಳಿವು ಸೇರಿದಂತೆ ರಾಜ್ಯದ ಅಭಿವೃದ್ಧಿಗಾಗಿ ಮಾಜಿ ಸಿಎಂ ಕುಮಾರಸ್ವಾಮಿ ಏಕಾಂಗಿಯಾಗಿ ರಾಜ್ಯ ಪ್ರವಾಸ ಮಾಡುತ್ತಿದ್ದಾರೆ. ಹೀಗಾಗಿ ಈ ಬಾರಿ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಗೆಲ್ಲಿಸುವ ಮೂಲಕ ಅವರ ಕೈ ಬಲಪಡಿಸಬೇಕು ಎಂದರು.

ಇದೇ ವೇಳೆ ಬಿಜೆಪಿ, ಕಾಂಗ್ರೆಸ್ ತೊರೆದು ನೂರಾರು ಮಂದಿ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಎಂ.ಸಿ.ದೊಡ್ಡ ನಾಯಕ, ಪುರಸಭಾಧ್ಯಕ್ಷೆ ಅನಿತಾ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಕೋಟೆ ಸರಗೂರು ತಾಲೂಕು ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಹೆಚ್.ಸಿ.ಶಿವಣ್ಣ, ಎಂ.ಪಿ.ನಾಗರಾಜ್, ತಾಲೂಕು ಮಹಿಳಾ ಜೆಡಿಎಸ್ ಅಧ್ಯಕ್ಷೆ ಗಾಯತ್ರಿ, ಮುಖಂಡರಾದ ನರಸಿಂಹೇಗೌಡ, ಚಾ.ನಂಜುಂಡಮೂರ್ತಿ, ಸುರೇಂದ್ರ ಡಿ.ಗೌಡ, ನಾರಾಯಣಗೌಡ, ಡಿ.ಆರ್.ಮಹೇಶ್, ನಾಗನಾಯಕ, ರಾಜು, ಕೃಷ್ಣ, ಅನು, ಕಲೀಮ್, ಪರಶಿವಮೂರ್ತಿ, ಯೋಗೇಶ್, ನಿಂಗನಾಯಕ, ನಾಗರಾಜು ತಿಮ್ಮಯ್ಯ, ಕಾಳೇಗೌಡ, ಗುರುಸ್ವಾಮಿ, ಶಶಿ, ಚನ್ನಬಸವನಾಯಕ, ಸತೀಶ್, ಮುತ್ತುರಾಜ್, ಮಹೇಂದ್ರ, ಜಯರಾಮ್ ಸೇರಿದಂತೆ ಸುಮಾರು 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು, ಮುಖಂಡರು ಇದ್ದರು.

> ನನ್ನ ತಂದೆ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ನಾನು ಕ್ಷೇತ್ರದಲ್ಲಿ ಕೈಗೊಂಡಿದ್ದ ಪಕ್ಷ ಸಂಘಟನೆ ಗಮನಿಸಿ ನನಗೆ ಜೆಡಿಎಸ್ ವರಿಷ್ಠರು ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಘೋಷಿಸಿದ್ದಾರೆ. ನನಗೆ ಟಿಕೆಟ್ ಸಿಗಲು ಕಾರಣರಾದ ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ಮಹದೇವ್, ಎಂಎಲ್‌ಸಿ ಮಂಜೇಗೌಡ ಸೇರಿದಂತೆ ಇನ್ನಿತರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಸಿಎಂ ಮಾಡಲು ನಾವೆಲ್ಲಾ ಶ್ರಮಿಸೋಣ. – ಜಯಪ್ರಕಾಶ್ ಚಿಕ್ಕಣ್ಣ, ಜೆಡಿಎಸ್ ಅಭ್ಯರ್ಥಿ.

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್‌ಗೆ ಅಧಿಕಾರ: ವಿಶ್ವಾಸ



ಸರಗೂರು, ಏ.16– ರಾಜ್ಯದ ಜನತೆ ಈ ಬಾರಿ ಕಾಂಗ್ರೆಸ್ ಬೆಂಬಲಿಸಲಿದ್ದು, ಪಕ್ಷ ಅಧಿಕಾರಕ್ಕೆ ಬರುವುದು ಖಚಿತ ಎಂದು ಜಿಪಂ ಮಾಜಿ ಸದಸ್ಯ ಪಿ.ರವಿ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಗ್ರಾಮೀಣ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಗ್ಯಾರಂಟಿ ಕಾರ್ಡ್ ವಿತರಿಸಿ ಮಾತನಾಡಿದ ಅವರು, ಶಾಸಕ ಅನಿಲ್ ಚಿಕ್ಕಮಾದು ಕೋಟೆ ಹಾಗೂ ಸರಗೂರು ತಾಲೂಕಿನ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಹೀಗಾಗಿ ಮತ್ತೊಮ್ಮೆ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡುವ ಮೂಲಕ ತಾಲೂಕಿನ ಮತ್ತಷ್ಟು ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕು ಎಂದರು.

ಮುಖಂಡ ಪ್ರಭುಸ್ವಾಮಿ ಮಾತನಾಡಿ, ಶಾಸಕ ಅನಿಲ್ ಚಿಕ್ಕಮಾದು ಏ.17ರಂದು ನಾಮಪತ್ರ ಸಲ್ಲಿಸಲಿದ್ದು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲ ವ್ಯಕ್ತಪಡಿಸಬೇಕು. 'ನಮ್ಮ ಬೂತ್ ನಮ್ಮ ಹೊಣೆ' ಎಂಬ ಶೀರ್ಷಿಕೆಯಡಿ ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗಳನ್ನು ಗ್ರಾಮೀಣ ಭಾಗದಲ್ಲಿ ವಿತರಿಸುವ ಮೂಲಕ ಶಾಸಕ ಅನಿಲ್ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಈ ವೇಳೆ ತಾಲೂಕು ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಪ್ರಧಾನ ಕಾರ್ಯದರ್ಶಿ ಚಲುವರಾಜು, ಜಿ ಪಂ ಮಾಜಿ ಸದಸ್ಯ ಪಿ.ರವಿ, ಎಸ್.ಎಸ್.ಪ್ರಭುಸ್ವಾಮಿ, ಚಿಕ್ಕವೀರನಾಯಕ, ಮುಖಂಡರಾದ ಗುಣಪಾಲ್, ವೈಕುಂಠಯ್ಯ, ಪಪಂ ಸದಸ್ಯ ಶ್ರೀನಿವಾಸ್, ರಮೇಶ್, ಬಸವರಾಜು, ಚಿಕ್ಕಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಗುರುಸ್ವಾಮಿ, ಜಯಕುಮಾರ್, ಪಾಪಣ್ಣ, ಅಭಿ, ಇದಾಯಿತ್, ತ್ರಿಶಂಭು, ಚನ್ನಪ್ಪ, ನಿಜಪ್ಪ, ಆನಂದ್ ನೂರಾರು ಕಾರ್ಯಕರ್ತರು ಇದ್ದರು.

ಚೆಕ್ ಪೋಸ್ಟ್‌ಗಳಿಗೆ ವೆಚ್ಚ ವೀಕ್ಷಕರ ಭೇಟಿ

ಮೈಸೂರು,ಏ.16– ಕೃಷ್ಣರಾಜ ಕ್ಷೇತ್ರದ ವೆಚ್ಚ ವೀಕ್ಷಕರಾದ ನಿತಿನ್ ಕುಮಾರ್ ಜೈಮಾನ್ ಕ್ಷೇತ್ರದ ಚೆಕ್ ಪೋಸ್ಟ್‌ಗಳಿಗೆ ಭೇಟಿ ನೀಡಿ ಚುನಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿದರು. ನಂತರ ಎಂ.ಸಿ.ಸಿ ತಂಡದೊಂದಿಗೆ ಸಭೆ ನಡೆಸಿ, 50 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಕೊಂಡೊಯ್ಯುವ ಯಾವುದೇ ವ್ಯಕ್ತಿ ಮೇಲೆ ಕ್ರಮ ಕೈಗೊಳ್ಳಲು ತಿಳಿಸಿದರು ಹಾಗೂ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಜವಾಬ್ದಾರಿಯಿಂದ ಕಾರ್ಯನಡೆಸಲು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ನೋಡಲ್ ಅಧಿಕಾರಿ ರುದ್ರೇಶ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧೆಡೆ ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ ಬಿರುಸಿನ ಪ್ರಚಾರ



ತಿ.ನರಸೀಪುರ, ಏ.16– ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ ಬನ್ನೂರು ಪಟ್ಟಣ, ಅಂಕನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶನಿವಾರ ಬಿರುಸಿನ ಪ್ರಚಾರ ನಡೆಸಿದರು.

ಬನ್ನೂರಿನ ಬಿಜೆಪಿ ಕಚೇರಿಯಲ್ಲಿ ಕಾಂಗ್ರೆಸ್ ತೊರೆದ ಅನೇಕರನ್ನು ಬಿಜೆಪಿಗೆ ಬರಮಾಡಿಕೊಂಡು ಬಳಿಕ ಕಾರ್ಯಕರ್ತರೊಡಗೂಡಿ ಪಟ್ಟಣದಲ್ಲಿ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಭವಿಷ್ಯದಲ್ಲಿ ಬನ್ನೂರನ್ನು ತಾಲೂಕು ಕೇಂದ್ರ ಮಾಡಲು ಕ್ಷೇತ್ರದ ಜನರು ಅಧಿಕಾರ ನೀಡುವಂತೆ ಮನವಿ ಮಾಡಿದರು.

ಕ್ಷೇತ್ರ ವಿಕೇಂದ್ರಿಕರಣವಾದಾಗಲೇ ಬನ್ನೂರು ತಾಲೂಕು ಕೇಂದ್ರವಾಗಬೇಕಿತ್ತು. ಆದರೆ ಇದುವರೆಗೆ ಬಂದ ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಲಿಲ್ಲ ಎಂದ ಅವರು ಗ್ರಾಮದ ಹೆಗ್ಗೆರೆ ಕೆರೆ ಹೂಳೆತ್ತುವ ಕೆಲಸ ಮಾಡಿಲ್ಲ. ಕ್ಷೇತ್ರದ ಜನತೆ ಆಶೀರ್ವಾದ ಮಾಡಿದಲ್ಲಿ ಕೆರೆ ಹೂಳೆತ್ತಿಸಿ ಎರಡು ಫಸಲಿಗೆ ನೀರು ಕೊಡಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಮೂಲ ಸೌಕರ್ಯ ನೀಡಿ, ಭ್ರಷ್ಟಾಚಾರ ರಹಿತ ಆಡಳಿತ ನೀಡುವುದು ನಮ್ಮ ಗುರಿ. ರಾಜ್ಯ ಮತ್ತು ಕೇಂದ್ರದಲ್ಲಿ ನಮ್ಮದೇ ಸರ್ಕಾರ ಬಂದರೆ ಡಬಲ್ ಇಂಜಿನ್ ಸರ್ಕಾರ ಆಗಲಿದ್ದು, ಕ್ಷೇತ್ರದ ಜನರ ಆಶೀರ್ವಾದದಿಂದ ಈ ಬಾರಿ ಶಾಸಕರಾಗಿ ಆಯ್ಕೆಯಾದರೆ ಪಕ್ಷಾತೀತವಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್, ಪುರಸಭಾ ಸದಸ್ಯ ಶಿವಣ್ಣ ಬಿ.ಎನ್.ಸುರೇಶ್, ಡಾ.ಮಲ್ಲಿಕಾರ್ಜುನ ಸ್ವಾಮಿ, ಎಂ.ದಾಸಯ್ಯ, ಮಹೇಶ್ ಕುಮಾರ್, ಕರೋಹಟ್ಟಿ ಮಹದೇವಯ್ಯ, ನುಗ್ಗನಹಳ್ಳಿ ಕೊಪ್ಪಲು ರಾಮಚಂದ್ರ, ಮಣಿ, ಕಾಳೇಗೌಡ, ಪ್ರಭಾಕರ್, ಕೃಷ್ಣೆಗೌಡ, ಕುಮಾರಸ್ವಾಮಿ, ಗಣೇಶ್, ಗೋಪಿನಾಥ್, ಶಿವರಾಂ, ಗಿರೀಶ್, ರಾಮಚಂದ್ರ ನುದನ್, ಕೆಬ್ಬೆಹುಂಡಿ ಶಿವಕುಮಾರ್, ಲೋಕೇಶ್ ಗೌಡ, ಮೂಗೂರು ಅರವಿಂದ್, ಗೌಡ್ರು ಪ್ರಕಾಶ್ ಮತ್ತಿತರರಿದ್ದರು.

ಈ ಬಾರಿ ಆಶೀರ್ವದಿಸಿದರೆ ತಂದೆಯಂತೆ ಜನ ಸೇವೆ ಮಾಡುವೆ: ದರ್ಶನ್ ಧ್ರುವನಾರಾಯಣ್



ನಂಜನಗೂಡು, ಏ.16– ಈ ಚುನಾವಣೆ ನನ್ನ ಚುನಾವಣೆಯಲ್ಲ. ನಿಮ್ಮೆಲ್ಲರ ಚುನಾವಣೆ. ನಿಮ್ಮ ಒತ್ತಾಸೆ ಮೇರೆಗೆ ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ನೀಡಿದೆ. ಈ ಬಾರಿ ನನಗೆ ಆಶೀರ್ವಾದ ಮಾಡಿದರೆ ನನ್ನ ತಂದೆಯಂತೆ ಜನಸೇವೆಯಲ್ಲಿ ತೊಡಗುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಹಳ್ಳದಕೇರಿ, ಒಕ್ಕಲಗೇರಿ, ರಾಜಾಜಿ ಕಾಲೋನಿ, ಮುಸ್ಲಿಂ ಬ್ಲಾಕ್, ಸರಸ್ವತಿ ಕಾಲೋನಿ, ನೀಲಕಂಠ ನಗರ, ಹೌಸಿಂಗ್ ಬೋರ್ಡ್ ಕಾಲೋನಿ, ಚಾಮಲಾಪುರ ಬೀದಿ, ಚಾಮಲಾಪುರ ಹುಂಡಿ ಸೇರಿದಂತೆ 1ನೇ ವಾರ್ಡ್‌ನಿಂದ 31ನೇ ವಾರ್ಡ್‌ವರೆಗೆ ಪ್ರಚಾರ ನಡೆಸಿ ಅವರು ಮಾತನಾಡಿದರು.

ಒಂದೇ ತಿಂಗಳಲ್ಲಿ ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡು ಇಡೀ ಕುಟುಂಬ ದುಃಖದಲ್ಲಿತ್ತು. ಆ ನೋವಿನಿಂದ ಹೊರಬರುವ ಮುನ್ನ ನಮಗೆ ರಾಜಕೀಯ ಬೇಕೋ, ಬೇಡವೂ ಎಂಬ ಪ್ರಶ್ನೆ ಕೂಡ ಎದುರಾಯಿತು. ಈ ವೇಳೆ ನನ್ನ ತಂದೆ ಅಭಿಮಾನಿಗಳು, ಕಾರ್ಯಕರ್ತರು ನಮಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ನಿಮ್ಮ ಒತ್ತಾಯದಿಂದ ಕಾಂಗ್ರೆಸ್ ನನಗೆ ಟಿಕೆಟ್ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿದೆ. ನಮಗೆ ನನ್ನ ತಂದೆ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಕ್ಷೇತ್ರದ ಜನರೇ ದೇವರಿದ್ದಂತೆ. ನೀವು ನನಗೆ ಬೆಂಬಲ ನೀಡಿ ಆಶೀರ್ವಾದ ಮಾಡಿ ಗೆಲ್ಲಿಸಿ ಕೊಟ್ಟಲ್ಲಿ ನನ್ನ ತಂದೆ ಯಾವ ರೀತಿ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದರು ಅದೇ ರೀತಿ ದಿನದ 24 ಗಂಟೆಯೂ ನಿಮ್ಮ ಸೇವೆಯಲ್ಲೇ ಮುಂದುವರೆಯುತ್ತೇನೆ ಎಂದರು.

ಮಾಜಿ ಶಾಸಕ ಕಳಲೆಕೇಶವಮೂರ್ತಿ ಮಾತನಾಡಿ, ದರ್ಶನ್ ಧ್ರುವನಾರಾಯಣ್ ಏ.17ರ ಸೋಮವಾರ ದರ್ಶನ್ ನಾಮಪತ್ರ ಸಲ್ಲಿಸಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ವಿಧಾನಸಭಾ ಉಸ್ತುವಾರಿ ಶ್ರೀಕಂಠು ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಜಿಪಂ ಮಾಜಿ ಸದಸ್ಯೆ ಲತಾ, ನಗರಸಭಾ ಸದಸ್ಯರಾದ ದೊರೆಸ್ವಾಮಿ, ಗಂಗಾಧರ್, ಪ್ರದೀಪ್, ಎಸ್.ಪಿ.ಮಹೇಶ್, ಶ್ವೇತಲಕ್ಷ್ಮಿ, ಮಾಜಿ ಪುರಸಭಾಧ್ಯಕ್ಷರಾದ ಚೆಲುವರಾಜು, ಶ್ರೀಧರ್, ಮುಖಂಡರಾದ ಮಂಜುನಾಥ್, ಕುಳ್ಳಯ್ಯ, ಎಂ.ರಾಜು, ರಾಜೇಶ್, ವಿಜಯ್‌ಕುಮಾರ್, ಗೋವಿಂದರಾಜು, ನಾಗರಾಜು, ಶ್ರೀಕಠು, ಎನ್.ಟಿ.ಗಿರೀಶ್, ರವಿಪ್ರಕಾಶ್, ಸಂತೋಷ್, ಕಾಂಗ್ರೆಸ್ ಯುವ ಅಧ್ಯಕ್ಷ ಅಶೋಕ್ ಸೇರಿದಂತೆ ಇತರರಿದ್ದರು.

ಇಂದು ರೇವಣ್ಣ ನಾಮಪತ್ರ ಸಲ್ಲಿಕೆ



ತಿ.ನರಸೀಪುರ, ಏ.16– ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ಏ.17ರಂದು ಮಧ್ಯಾಹ್ನ ಪಟ್ಟಣದ ತಾಪಂ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲಿದ್ದು, ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕ್ಷೇತ್ರ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆಯಲ್ಲಿ ಮುಖ್ಯಮಂತ್ರಿ ಎಸ್.ಆರ್.ಬಸವರಾಜ ಬೊಮ್ಮಾಯಿ, ವಸತಿ ಸಚಿವ ವಿ.ಸೋಮಣ್ಣ ಅವರೊಂದಿಗೆ ತಾಲೂಕು ಕಚೇರಿಗೆ ಆಗಮಿಸಿ ಅಭ್ಯರ್ಥಿ ಡಾ.ರೇವಣ್ಣ ನಾಮಪತ್ರ ಸಲ್ಲಿಸಲಿದ್ದಾರೆ. ಜಿಲ್ಲಾ ಉಸ್ತುವಾರಿಗಳು, ಬಿಜೆಪಿ ಮಂಡಲ ಅಧ್ಯಕ್ಷರು, ಮಂಡಲ ಸಮಿತಿ ಎಲ್ಲಾ ಪದಾಧಿಕಾರಿಗಳು, ವಿವಿಧ ಮೋರ್ಚಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಶಕ್ತಿ ಕೇಂದ್ರದ ಅಧ್ಯಕ್ಷರು, ಬೂತ್ ಅಧ್ಯಕ್ಷರು, ಅಭಿಮಾನಿಗಳು ಹಾಗೂ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಮಪತ್ರ ಸಲ್ಲಿಸಲು ಸಹಕರಿಸುವಂತೆ ಮನವಿ ಮಾಡಿದ್ದಾರೆ.

ಕಾಂಗ್ರೆಸ್–ಬಿಜೆಪಿ ಹಾಲಿ, ಮಾಜಿ ಶಾಸಕರು ಜೆಡಿಎಸ್ ಸೇರ್ಪಡೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾಹಿತಿ



ಕೆ.ಆರ್.ನಗರ, ಏ.16– ಪಕ್ಷ ಕಟ್ಟಿ ಬೆಳೆಸಿದ ಹಿರಿಯ ರಾಜಕಾರಣಿಗಳನ್ನು ಎರಡೂ ರಾಷ್ಟ್ರೀಯ ಪಕ್ಷಗಳು ಕಡೆಗಣಿಸುವ ಜೊತೆಗೆ ಟಿಕೆಟ್ ನೀಡದೆ ಅವಮಾನಿಸಿರುವುದರಿಂದ ಬೇಸತ್ತು ಜೆಡಿಎಸ್ ಸೇರುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಭಾನುವಾರ ನಡೆದ ಜೆಡಿಎಸ್ ಪಂಚರತ್ನ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಅವರನ್ನು ಪಕ್ಷಕ್ಕೆ ಬರ ಮಾಡಿಕೊಳ್ಳಲು ತುರ್ತಾಗಿ ತಾವು ಬೆಂಗಳೂರಿಗೆ ಹೋಗುತ್ತಿರುವುದಾಗಿ ತಿಳಿಸಿದ ಅವರು, ಯಾತ್ರೆಗೆ ಚಾಲನೆ ನೀಡಿ ಮೊದಲಿಗೆ ಭಾಷಣ ಮಾಡಿ ನಿರ್ಗಮಿಸಿದರು.

ನಾಮಪತ್ರ ಸಲ್ಲಿಸಲು ಕೇವಲ 3 ದಿನ ಬಾಕಿ ಉಳಿದಿದ್ದು, ಜೆಡಿಎಸ್ ಸೇರಲು ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು, ಮಾಜಿ ಶಾಸಕರು ಬರುತ್ತಾರೆ. ಅವರೊಟ್ಟಿಗೆ ಚರ್ಚಿಸಿ ಬಿ.ಫಾರಂ ನೀಡುತ್ತೇನೆ ಎಂದ ಅವರು, ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರಲು ನಾನೊಬ್ಬನೇ ಎರಡು ರಾಷ್ಟ್ರೀಯ ಪಕ್ಷಗಳ ವಿರುದ್ಧ ಹೋರಾಟ ಮಾಡುತ್ತಿದ್ದೇನೆ. ಈ ಬಾರಿ ಸಂಪೂರ್ಣ ಬಹುಮತದೊಂದಿಗೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ನಾನು ಮುಖ್ಯಮಂತ್ರಿಯಾಗುತ್ತೇನೆ. ನಿಮ್ಮ ಶಾಸಕ ಸಾ.ರಾ.ಮಹೇಶ್ 5 ವರ್ಷ ಮಂತ್ರಿ ಆಗಲಿದ್ದಾರೆ ಎಂದರು.

ಸತತ 3 ಬಾರಿ ಗೆದ್ದಿರುವ ನನ್ನ ಆತ್ಮೀಯ ಸ್ನೇಹಿತ ಶಾಸಕ ಸಾ.ರಾ.ಮಹೇಶ್ ಅವರನ್ನು ನಾಲ್ಕನೇ ಬಾರಿಗೆ ಗೆಲ್ಲಿಸಿ ಅವರು ನಿಮ್ಮ ಋಣ ತೀರಿಸಲಿದ್ದಾರೆ ಎಂದ ಕುಮಾರಸ್ವಾಮಿ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಾ.ರಾ.ಮಹೇಶ್ ಟೊಂಕಕಟ್ಟಿ ನಿಂತಿದ್ದಾರೆ ಎಂದರು.

ಪ್ರಾದೇಶಿಕ ಪಕ್ಷ ಮುಗಿಸಲು ಹೊರಟವರು ಅವರೇ ಮುಗಿಯುವ ಹಂತಕ್ಕೆ ಬಂದಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಮತ್ತು ರೈತರ ಪರ ಇರುವ ಪಕ್ಷವೆಂದರೆ ಅದು ಜೆಡಿಎಸ್. ಈ ಹಿಂದೆ ರೈತರಿಗಾಗಿ ಹಲವು ಯೋಜನೆಯನ್ನು ಜಾರಿಗೆ ತರಲಾಗಿದೆ. ಮುಂದೆ ನಮ್ಮ ಪಕ್ಷ ಅಧಿಕಾರಕ್ಕೆ ಬರಲಿದ್ದು, ರೈತಪರ ಯೋಜನೆಗಳನ್ನು ಜಾರಿಗೆ ತರಲಾಗುವುದಾಗಿ ತಿಳಿಸಿದರು.

ಇದಕ್ಕೂ ಮುನ್ನಾ, ಹೆಲಿಪ್ಯಾಡ್‌ನಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಶಾಸಕ ಸಾ.ರಾ.ಮಹೇಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್ ಸೇರಿದಂತೆ ಅನೇಕ ಜೆಡಿಎಸ್ ಮುಖಂಡರು ಹೂ ಗುಚ್ಛ ನೀಡಿ ಸ್ವಾಗತಿಸಿದರು. ಬಳಿಕ ಪಂಚರತ್ನ ಯಾತ್ರೆ ವಾಹನದಲ್ಲಿ ಶಾಸಕ ಸಾರಾ ಪರ ಪ್ರಚಾರದಲ್ಲಿ ತೊಡಗಿದ ಹೆಚ್‌ಡಿಕೆಗೆ ಪಟ್ಟಣದ ಗರುಡಗಂಭ ವೃತ್ತದಲ್ಲಿ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಕ್ರೇನ್ ಮೂಲಕ ಕಿತ್ತಳೆ ಹಣ್ಣಿನ ಹಾರ ಹಾಕಿ, ಪುಷ್ಪಾರ್ಚನೆ ಮಾಡಿದರು. ಬಳಿಕ ಪಟ್ಟಣದ ನವನಗರ ಬ್ಯಾಂಕ್ ಆವರಣದಲ್ಲಿರುವ ಮಾಜಿ ಸಚಿವ ದಿ.ಎಸ್. ನಂಜಪ್ಪ ಅವರ ಪುತ್ಥಳಿಗೆ ಕುಮಾರಸ್ವಾಮಿ ಹಾಗೂ ಸಾ.ರಾ.ಮಹೇಶ್ ಮಾಲಾರ್ಪಣೆ ಮಾಡಿದರು.

ನಂತರ ಪಂಚರತ್ನ ಯಾತ್ರೆ ಹೆಬ್ಬಾಳು ಮಾರ್ಗವಾಗಿ ಶ್ರೀರಾಂಪುರ, ಚುಂಚನಕಟ್ಟೆ, ಹೊಸೂರು, ಹಾಡ್ಯ ಕ್ರಾಸ್, ಹನಸೋಗೆ ಮೂಲಕ ಕರ್ತಾಳು, ಹೆಬ್ಸೂರು, ಹರದನಹಳ್ಳಿ, ಸಾಲಿಗ್ರಾಮ ಮೂಲಕ ತೆರಳಿತು.

ಈ ವೇಳೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ಜೆಡಿಎಸ್ ಮುಖಂಡ ಡಾ.ಮೆಹಬೂಬ್ ಖಾನ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜಿಲ್ಲಾ ಗ್ರಾಮಾಂತರ ಯುವ ಜೆಡಿಎಸ್ ಉಪಾಧ್ಯಕ್ಷ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ಎಸ್.ಯೋಗೇಶ್, ಪುರಸಭಾ ಸದಸ್ಯರಾದ ಕೆ.ಪಿ.ಪ್ರಭು ಶಂಕರ್, ಕೆ.ಎಲ್.ಜಗದೀಶ್, ಉಮೇಶ್, ಸಂತೋಷ್‌ಗೌಡ, ಮಂಜುಳಾ ಚಿಕ್ಕವೀರು, ಸರೋಜ, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಗ್ರಾಪಂ ಸದಸ್ಯ ಬಾಲಾಜಿ ಗಣೇಶ್, ವಸಂತಶಂಕರ್, ತಾಲೂಕು ಯುವ ಜೆಡಿಎಸ್ ಮಾಜಿ ಅಧ್ಯಕ್ಷ ಸುಜಯ್, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಮುಖಂಡರಾದ ಡೈರಿ ಪ್ರಕಾಶ್, ರೂಪಾ, ತಾಪಂ ಮಾಜಿ ಸದಸ್ಯರಾದ ತಮ್ಮಣ್ಣ, ಶ್ರೀನಿವಾಸ್ ಪ್ರಸಾದ್, ದಲಿತ ಮುಖಂಡ ನಾಗರಾಜ್, ಸೂರಿ, ಜೆಡಿಎಸ್ ಮುಖಂಡರಾದ ಪ್ರಶಾಂತ್ ರೆಡ್ಡಿ, ಕೃಷ್ಣಶೆಟ್ಟಿ, ಆಂಜನೇಯ ಬ್ಲಾಕ್ ಮಹದೇವ್, ರುದ್ರೇಶ್, ಹೆಚ್.ಜಿ.ಮಂಜು ಸೇರಿದಂತೆ ಇತರರಿದ್ದರು.

ಮಾದೇಗೌಡನಹುಂಡಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ, ಏ.16– ತಾಲೂಕಿನ ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ನಾಗರಾಜು, ಉಪಾಧ್ಯಕ್ಷರಾಗಿ ಪಟ್ಟೆಹುಂಡಿ ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರಾಜಣ್ಣ ಘೋಷಿಸಿದರು. ಈ ವೇಳೆ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್ ಮಾತನಾಡಿ, ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ತಲುಪಿಸಿ ಸಂಘವನ್ನು ಲಾಭಂಶದಲ್ಲಿ ಮುನ್ನಡೆಸಿ ಎಂದು ಸಲಹೆ ನೀಡಿದರು.

ಈ ವೇಳೆ ಮೇಲ್ವಿಚಾರಕ ರಾಜಪ್ಪ, ಸಿಇಓ ರಾಜೇಶ್, ನಿರ್ದೇಶಕರಾದ ಎಚ್.ಎಸ್.ರಾಜೇಶ್, ಎಚ್.ಎನ್.ದೇವರಾಜು, ವೆಂಕಟೇಶ್, ನಾಗೇಂದ್ರ, ಗುರು, ನಾಗಮ್ಮ, ಚಲುವೇಗೌಡ, ನಾಗಮ್ಮ, ಗ್ರಾಪಂ ಸದಸ್ಯ ಹೊನ್ನೇಗೌಡ, ಮುಖಂಡರಾದ ಪಟೇಲ್ ಮರಿಗೌಡ, ಚಿನ್ನಸ್ವಾಮಿ, ಕಲ್ಪನಾ, ಕೃಷ್ಣಸ್ವಾಮಿ, ರವಿ, ಶಿವು, ಸುನೀಲ್, ಪುಟ್ಟಸ್ವಾಮಿ, ವೆಂಕಟೇಶ್, ಚಂದ್ರು, ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

ಕರಿಯಪ್ಪ ನಿಧನ



ಹುಣಸೂರು, ಏ.16– ನಗರದ ಕುರುಬರಹಳ್ಳಿ ನಿವಾಸಿ ಹಾಗೂ ಮೈಸೂರು ಜಿಲ್ಲಾ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮಲ್ಲೇಶ್ ಅವರ ತಂದೆ ಇನಕಲ್ ಕರಿಯಪ್ಪ(87) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.